ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallmmanudi@gmail.com E-paper: www.mallmmanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy

VOLUME-13 ಸಂಪುಟ:13 | ISSUE- ಸಂಚಿಕೆ: 25 | PAGE-8 ಪುಟ 8 | ಶುಕ್ರವಾರ 28.02.2025 | RS.ಬೆಲೆ 2/-

## ವಿವಿಗಳ ನಕಲಿ ಅಂಕಪಟ್ಟಿ ತಯಾರಿಸಿ ಮಾರಾಟ: ಕಿಂಗ್‌ಪಿನ್ ಬಂಧನ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಫೆ.27: ದೇಶದ ವಿವಿಧ ವಿಶ್ವವಿದ್ಯಾಲಯಗಳ ನಕಲಿ ಅಂಕಪಟ್ಟಿ ತಯಾರಿಸಿ ನಿರುದ್ಯೋಗಿ ಯುವಕರಿಗೆ ಮಾರಾಟ ಮಾಡುತ್ತಿದ್ದ ಕಿಂಗ್ ಪಿನ್‌ನನ್ನು ಕಲಬುರಗಿ ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದಾರೆ.ಬಂಧಿತ ಆರೋಪಿಯನ್ನು ದೆಹಲಿ ಮೂಲದ ರಾಜೀವ ಸಿಂಗ್ ಆರೋರಾ ಎಂದು ಗುರುತಿಸಲಾಗಿದ್ದು, ಕಲಬುರಗಿ ಪೊಲೀಸರು ದೆಹಲಿಯ ರಾಮಪಾರ್ಕ್ ಅಪಾರ್ಟ್ಮೆಂಟ್ ದ್ವಾರಕ್ ಮೋಡ್‌ನಲ್ಲಿ ಬಂಧಿಸಿದ್ದಾರೆ ಎಂದು ನಗರ ಪೊಲೀಸ ಆಯುಕ್ತ ಡಾ.ಶರಣಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.ರಾಜೀವ ಸಿಂಗ್ ಆರೋರಾ ನಕಲಿ ಅಂಕಪಟ್ಟಿ ಜೊತೆಗೆ ನಕಲಿ ವಿಶ್ವವಿದ್ಯಾಲಯ ಸೃಷ್ಟಿ ಮಾಡಿ ಅದರ ಹೆಸರಲ್ಲಿ ನಕಲಿ ಅಂಕಪಟ್ಟಿ ಮಾರಾಟ ಮಾಡುತ್ತಿದ್ದ. ಕರ್ನಾಟಕದ ಬೆಂಗಳೂರು, ಮೈಸೂರು, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ ಹೆಸರಲ್ಲಿ ನಕಲಿ ಅಂಕಪಟ್ಟಿ ತಯಾರಿ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.ಪಿಯುಸಿ, ಡಿಪ್ಲೋಮಾ ಇನ್ ಎಜುಕೇಶನ್, ಡಿಪ್ಲೋಮಾ ಆಫ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ, ಡಿಪ್ಲೋಮಾ ಇನ್ ಮೆಕ್ಯಾನಿಕಲ್ ಇಂಜಿನಿಯರಿಂಗ್, ಡಾಕ್ಟರ್ ಆಫ್ ಫಿಲಾಸಫಿ, ಬಿ ಟೇಕ್ ಸೇರಿ ವಿವಿಧ ಕೋರ್ಸ್‌ಗಳ ನಕಲಿ ಅಂಕಪಟ್ಟಿ ತಯಾರಿಸಿ ಮಾರಾಟ ಮಾಡುತ್ತಿದ್ದ.ಸದ್ಯ ಬಂಧಿತನಿಂದ ಬರೋಬ್ಬರಿ 522 ನಕಲಿ ಅಂಕಪಟ್ಟಿಗಳು, 1626 ಖಾಲಿ ಅಂಕಪಟ್ಟಿಗಳು, 36 ಮೊಬೈಲ್, 2 ಲ್ಯಾಪ್ ಟಾಪ್, 1 ಪ್ರಿಂಟರ್, ವಿವಿಧ ವಿಶ್ವವಿದ್ಯಾಲಯಗಳ 122 ನಕಲಿ ಸೀಲ್‌ಗಳು, ಎಟಿಎಂ ಕಾರ್ಡ್ ಮತ್ತು ಆರೋಪಿಯ 123 ನಕಲಿ ಐಡಿಗಳು, ಆರೋಪಿಯ 85 ಬ್ಯಾಂಕ್ ಅಕೌಂಟ್‌ಗಳನ್ನು ಪೊಲೀಸರು ವಶಕ್ಕೆ ಪಡೆದು– ಕೊಂಡಿದ್ದಾರೆ. ಪೊಲೀಸರ ಉತ್ತಮ ಕಾರ್ಯಕ್ಕೆ ಪ್ರಶಂಸೆಯನ್ನು ಅವರು ವ್ಯಕ್ತಪಡಿಸಿದ್ದಾರೆ.

## ಪ್ರಧಾನಿ ಮೋದಿ ಪದವಿ ವಿವಾದ: ತೀರ್ಪು ಕಾಯ್ದಿರಿಸಿದ ದೆಹಲಿ ಹೈಕೋರ್ಟ್



ಮಲ್ಲಮ ನುಡಿ ವಾರ್ತೆ

ನವದೆಹಲಿ:ಫೆ.27: ಪ್ರಧಾನಿ ನರೇಂದ್ರ ಮೋದಿ ಅವರ ಪದವಿಗೆ ಸಂಬಂಧಿಸಿದ ಮಾಹಿತಿಯನ್ನು ಬಹಿರಂಗಪಡಿಸುವಂತೆ ಕೇಂದ್ರ ಮಾಹಿತಿ ಆಯೋಗ (ಸಿಐಸಿ) ನೀಡಿದ್ದ ಆದೇಶ ಪ್ರಶ್ನಿಸಿ ದೆಹಲಿ ವಿಶ್ವವಿದ್ಯಾಲಯ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಪೂರ್ಣಗೊಳಿಸಿದ ದೆಹಲಿ ಹೈಕೋರ್ಟ್ ಗುರುವಾರ ತೀರ್ಪು ಕಾಯ್ದಿರಿಸಿದೆ."ವಾದ, ಪ್ರತಿವಾದಗಳನ್ನು ಆಲಿಸಲಾಗಿದೆ. ತೀರ್ಪು ಕಾಯ್ದಿರಿಸಲಾಗಿದೆ" ಎಂದು ಕಕ್ಷಿದಾರರ ವಾದ ಆಲಿಸಿದ ನಂತರ ನ್ಯಾಯಮೂರ್ತಿ ಸಚಿನ್ ದತ್ತ ಅವರು ಹೇಳಿದ್ದಾರೆ.

ಸಿಐಸಿಯ ಆದೇಶವನ್ನು ರದ್ದುಗೊಳಿಸಲು ಅರ್ಹವಾಗಿದೆ ಎಂದು ದೆಹಲಿ ವಿವಿ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ತಿಳಿಸಿದ್ದಾರೆ.

ಆದಾಗ್ಯೂ, ದಾಖಲೆಯನ್ನು ನ್ಯಾಯಾಲಯಕ್ಕೆ ತೋರಿಸುವುದಕ್ಕೆ ದೆಹಲಿ ವಿವಿ ಯಾವುದೇ ಆಕ್ಷೇಪಣೆ ವ್ಯಕ್ತಪಡಿಸಿಲ್ಲ ಎಂದು ಮೆಹ್ತಾ ಹೇಳಿದ್ದಾರೆ.

"ವಿಶ್ವವಿದ್ಯಾಲಯವು ದಾಖಲೆಯನ್ನು ನ್ಯಾಯಾಲಯಕ್ಕೆ ತೋರಿಸಲು ಯಾವುದೇ ಆಕ್ಷೇಪಣೆಯನ್ನು

(2ನೇ ಪುಟ ನೋಡಿ)

## ಕೇಂದ್ರದ ಅನ್ಯಾಯದ ವಿರುದ್ಧ ಹೋರಾಟಕ್ಕೆ ದಕ್ಷಿಣ ರಾಜ್ಯಗಳ ಜತೆ ಮಾತುಕತೆ



ಮಲ್ಲಮ ನುಡಿ ವಾರ್ತೆ

ಬೆಂಗಳೂರು:ಫೆ.27: ಕೇಂದ್ರದ ರಾಜ್ಯ–ಕ್ಕೆ ಆಗುತ್ತಿರುವ ಸರಣಿ ಅನ್ಯಾಯಗಳನ್ನು ನೋಡಿಯೂ ರಾಜ್ಯದಿಂದ ಲೋಕಸಭೆಗೆ ಆರಿಸಿಹೋಗಿರುವ ಹದಿನೇಳು ಬಿಜೆಪಿ ಮತ್ತು ಇಬ್ಬರು ಜೆಡಿಎಸ್ ಸಂಸದರು ಜೀತದಾಳುಗಳಂತೆ ಬಾಯಿಗೆ ಬೀಗಹಾಕಿಕೊಂಡು ಕೂತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಲೋಕಸಭಾ ಕ್ಷೇತ್ರಗಳ ಮರು ವಿಂಗಡಣೆ ಬಳಿಕ ದಕ್ಷಿಣ ಭಾರತದ ರಾಜ್ಯಗಳ ಒಂದೇ ಒಂದು ಕ್ಷೇತ್ರ ಸಹ ಕಡಿಮೆಯಾಗಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನಿನ್ನೆ ಹೇಳಿಕೆ ನೀಡಿದ ಹಿನ್ನೆಲೆಯಲ್ಲಿ ಇಂದು ಸರಣಿ ಟ್ವೀಟ್ ಮಾಡಿರುವ ಸಿಎಂ ಸಿದ್ದರಾಮಯ್ಯ, ಕ್ಷೇತ್ರ ಮರುವಿಂಗಡಣೆ ನಡೆದಾಗ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗಲು ಬಿಡುವುದಿಲ್ಲ ಎನ್ನುವ ಕೇಂದ್ರ ಗೃಹ ಸಚಿವರ ಹೇಳಿಕೆ ನಂಬಿಕೆಗೆ ಅರ್ಹವಾಗಿಲ್ಲ. ಇದು ದಕ್ಷಿಣದ ರಾಜ್ಯಗಳಲ್ಲಿ ಗೊಂದಲ ಹುಟ್ಟಿಸುವ ದುರುದ್ದೇಶದಿಂದ ಕೂಡಿದೆ ಎಂದಿದ್ದಾರೆ. ಕೇಂದ್ರ ಗೃಹ ಸಚಿವರ ಈ ಹೇಳಿಕೆಯನ್ನು ನೋಡಿದರೆ ಅವರಿಗೆ ಒಂದೋ ಮಾಹಿತಿಯ ಕೊರತೆ ಇದೆ, ಇಲ್ಲವಾದರೆ ಕರ್ನಾಟಕವೂ ಸೇರಿದಂತೆ ದಕ್ಷಿಣದ ರಾಜ್ಯಗಳಾದ ತೆಲಂಗಾಣ, ತಮಿಳುನಾಡು, ಕೇರಳ ಮತ್ತು ಆಂಧ್ರಪ್ರದೇಶಗಳಿಗೆ ಅನ್ಯಾಯ ಮಾಡುವ ದುರುದ್ದೇಶ ಇದೆ ಎಂದಿದ್ದಾರೆ.


ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕ್ಷೇತ್ರ ಮರುವಿಂಗಡಣೆಗೆ ತೋರುತ್ತಿರುವ ಅತ್ಯುತ್ಸಾಹವನ್ನು ನೋಡಿದರೆ ತಮ್ಮ ಪಕ್ಷದ ಕೀರ್ತಿಪತಾಕೆ ಹಾರಿಸುವುದಕ್ಕೆ ಪ್ರತಿರೋಧ ಒಡ್ಡುತ್ತಿರುವ ದಕ್ಷಿಣದ ರಾಜ್ಯಗಳ ಜನತೆಗೆ ಶಿಕ್ಷಿಸುವ ದುರುದ್ದೇಶ ಇರುವಂತೆ ಕಾಣಿಸುತ್ತಿದೆ. ಕರ್ನಾಟಕದ ಜನತೆ ಬಿಜೆಪಿಯನ್ನು ಬೆಂಬಲಿಸದೆ ಇದ್ದರೆ ರಾಜ್ಯಕ್ಕೆ ನರೇಂದ್ರ ಮೋದಿ ಅವರ ಆಶೀರ್ವಾದ ಇರುವುದಿಲ್ಲ ಎಂದು ವಿಧಾನಸಭಾ ಚುನಾವಣಾ ಪ್ರಚಾರದ ಕಾಲದಲ್ಲಿ

ಬಿಜೆಪಿ ಅಧ್ಯಕ್ಷರಾದ ಜೆಪಿ ನಡ್ಡಾ ಅವರು ನೀಡಿದ್ದ ಎಚ್ಚರಿಕೆ ನಮ್ಮ ರಾಜ್ಯದ ವಿರುದ್ಧ ಕೇಂದ್ರ ಸರ್ಕಾರ ಕೈಗೊಳ್ಳುತ್ತಿರುವ ಒಂದೊಂದು ಕ್ರಮದಲ್ಲಿಯೂ ನಿಜವಾಗುತ್ತಿದೆ ಎಂದಿದ್ದಾರೆ.

ತೆರಿಗೆ ಹಂಚಿಕೆ, ಜಿಎಸ್ ಟಿ ಮತ್ತು ಪ್ರಕೃತಿ ವಿಕೋಪ ಪರಿಹಾರದಲ್ಲಿ ಅನ್ಯಾಯ, ರಾಜ್ಯಕ್ಕೆ

(2ನೇ ಪುಟ ನೋಡಿ)

## 2027ರಲ್ಲಿ ನಾಸಿಕ್‌ನಲ್ಲಿ ಪೂರ್ಣ ಕುಂಭಮೇಳ



ಮಲ್ಲಮ್ಮ ನುಡಿ ವಾರ್ತೆ

ಮುಂಬೈ: ಫೆ.27:2027ರಲ್ಲಿ ಪೂರ್ಣ ಕುಂಭಮೇಳವು ಮಹಾರಾಷ್ಟ್ರದ ನಾಸಿಕ್‌ನಲ್ಲಿ ನಡೆಯಲಿದೆ ಎಂದು ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವಿಸ್ ತಿಳಿಸಿದ್ದಾರೆ.

ಮುಂಬೈನಲ್ಲಿ ನಡೆದ ನಾಸ್ಕಾಮ್ ತಂತ್ರಜ್ಞಾನ ಮತ್ತು ನಾಯಕತ್ವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 2027ರಲ್ಲಿ, ನಾವು ನಾಸಿಕ್‌ನಲ್ಲಿ ಕುಂಭಮೇಳವನ್ನು ನಡೆಸುತ್ತೇವೆ. ಪ್ರಯಾಗ್‌ರಾಜ್ ಕುಂಭವನ್ನು 15,000 ಹೆಕ್ಟೇರ್ ಪ್ರದೇಶದಲ್ಲಿ ಆಯೋಜಿಸಲಾಗಿತ್ತು ಮತ್ತು ನಾಸಿಕ್‌ನಲ್ಲಿ 250 ಹೆಕ್ಟೇರ್ ಪ್ರದೇಶದಲ್ಲಿ ನಡೆಸುತ್ತೇವೆ. 2015ರಲ್ಲಿ ಕುಂಭಮೇಳ ಆಯೋಜಿಸಿದ ಅನುಭವ

(2ನೇ ಪುಟ ನೋಡಿ)

## ನೀರಿನ ಸಮಸ್ಯೆ ಆಗದಂತೆ ಕ್ರಮ ವಹಿಸಿ: ಮಾಣಿಕರಾವ ಪಾಟೀಲ




ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಫೆ.27:ಬೇಸಿಗೆ ಕಾಲ ಶುರುವಾಗಿದೆ. ಜನರಿಗೆ ನೀರಿನ ಸಮಸ್ಯೆ ಆಗದಂತೆ ಮುಂಜಾಗ್ರತೆ ವಹಿಸಿ ಮುಂದೆ ಎದುರಾಗಬಹುದಾದ ಸಮಸ್ಯಾತ್ಮಕ ಗ್ರಾಮಗಳ ಪಟ್ಟಿ ಸಿದ್ದಪಡಿಸಿ ವರದಿ ಸಲ್ಲಿಸುವಂತೆ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಮಾಣಿಕರಾವ ಪಾಟೀಲ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿದರು.

ಪಟ್ಟಣದ ತಾಲೂಕು ಪಂಚಾಯತ ಸಭಾಂಗಣದಲ್ಲಿ ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು. ತಾಲೂಕಿನ 18 ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ವಿವಿಧ ಗ್ರಾಮದಲ್ಲಿ ಮುಂಬರುವ ಬೇಸಿಗೆ ದಿನಗಳಲ್ಲಿ ಕುಡಿಯುವ ನೀರಿನ ಸ್ಥಿತಿಗತಿ ಹಾಗೂ ಮುಂಬರುವ ದಿನದಲ್ಲಿ ಆಗಬಹುದಾದ ಸಮಸ್ಯೆ ಮತ್ತು ಕಂಡುಕೊಳ್ಳಬಹುದಾದ ಪರಿಹಾರ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಅಂತರ್ಜಲ ಮಟ್ಟ ಕಡಿಮೆ ಇರುವ ಕಡೆಗಳಲ್ಲಿ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆ ಇರುತ್ತದೆ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿದೆ. ಯಾವ ಯಾವ ಗ್ರಾಮದಲ್ಲಿ ಎಷ್ಟು

(2ನೇ ಪುಟ ನೋಡಿ)

## ಇಂದು ಡಾ.ಅಂಬೇಡ್ಕರ್ ಪುತ್ಥಳಿ ಅನಾವರಣ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಮನವಿ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್.ಬಹುದಿನಗಳ ಬೇಡಿಕೆಯಾದ ಹುಮನಾಬಾದ್ ತಾಲ್ಲೂಕಿನ ಕನಕಟ್ಟಾ ಗ್ರಾಮದಲ್ಲಿ ಶುಕ್ರವಾರ ಡಾ.ಬಿ.ಆರ್.ಅಂಬೇಡ್ಕರ್ ರವರ ಮೂರ್ತಿಯನ್ನು ಅನಾವರಣ ಕಾರ್ಯಕ್ರಮ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಪಕ್ಷದ ಮುಖಂಡರು, ಹಿತೈಷಿಗಳು, ವಿವಿಧ ಸಂಘ ಸಂಸ್ಥೆಯವರು ಹರಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮಾಜಿ ಸಚಿವ ರಾಜಶೇಖರ ಪಾಟೀಲ ರವರು ಪತ್ರಿಕಾ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

## ಮಾ.2ರಿಂದ 15ನೇ ರಾಜ್ಯ ಮಟ್ಟದ ಪಾರಂಪರಿಕ ವೈದ್ಯ ಸಮ್ಮೇಳನ: 1500 ಪಾರಂಪರಿಕ ವೈದ್ಯರು ಭಾಗಿ: ಈಶ್ವರ ಖಂಡ್ರೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 27 : ಮಾರ್ಚ್ 2, 3 ಹಾಗೂ 4ರಂದು ಬೆಲ್ದಾಳೆ ಕನವೆನಶನ್ ಹಾಲ್‌ನಲ್ಲಿ ಹಾಗೂ ಪೂಜ್ಯ ಡಾ.ಚನ್ನಬಸವ ಪಟ್ಟದ್ದೇವರ ರಂಗಮಂದಿರದಲ್ಲಿ ಬೀದರ್ ಜಿಲ್ಲಾಡಳಿತ, ಕರ್ನಾಟಕ ಜೀವ ವೈವಿಧ್ಯ ಮಂಡಳಿ, ಪಾರಂಪರಿಕ ವೈದ್ಯ ಪರಿಷತ್ ಹಾಗೂ ಕಲ್ಯಾಣ ಕರ್ನಟಕ ಪಾರಂಪರಿಕ ವೈದ್ಯ ಪರಿಷತ್‌ಗಳ ಸಹಯೋಗದಲ್ಲಿ 15ನೇ ರಾಜ್ಯ ಮಟ್ಟದ ಪಾರಂಪರಿಕ ವೈದ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರು ಹಾಗೂ ರಾಜ್ಯದ ಅರಣ್ಯ, ಪರಿಸರ ಹಾಗೂ ಜೀವಶಾಸ್ತ್ರ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಮಂತ್ರಿ ಈಸ್ವರ ಖಂಡ್ರೆ ಹೇಳಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ರಾಜ್ಯದ ಮೂಲೆ ಮೂಲೆಗಳಿಂದ ಸುಮಾರು 1500 ಪಾರಂಪರಿಕ ವೈದ್ಯರು ಸಮ್ಮೇಳನದಲ್ಲಿ ಪಾಲ್ಗೊಳ್ಳುವರು. ಮಧುಮೆಹ, ಕ್ಯಾನ್ಸರ್, ಸ್ತ್ರೀರೋಗ, ಅಸ್ತಮಾ, ಮೂಲವ್ಯಾಧಿ ಸೇರಿದಂತೆ ಇತ್ಯಾದಿ ರೋಗಗಳ ನಿವಾರಣಾದಾಯಿಕ ಔಷಧ ಪದ್ದತಿ ಕುರಿತ ಸುಮಾರು 11 ವಿವಿಧ ಗೋಷ್ಠಿಗಳು ಜರುಗಲಿವೆ. ಅದರಲ್ಲಿ ಅಡುಗೆ ಮನೆಯಲ್ಲಿರುವ ಮದ್ದುಗಳ ಬಗ್ಗೆಯೂ ಒಂದು ಗೋಷ್ಠಿ ಆಯೋಜಿಸಲಾಗಿದೆ ಎಂದರು.

ಕರ್ನಾಟಕ ರಾಜ್ಯ ಅತ್ಯಂತ ಶ್ರೀಮಂತ ಜೀವವೈವಿಧ್ಯ ತಾಣವಾಗಿದೆ. ಅವುಗಳ ಸಂರಕ್ಷಣೆ ಮಾಡುವುದು ನಮ್ಮ ಕರ್ತವ್ಯ. ಮುಂದಿನ ಪಿಳಿಗೆಗೆ ಅದರ ಪರಿಚಯ ಮಾಡುವುದು ಅಗತ್ಯವಾಗಿದೆ. ಹಿಂದೆ ಎಲ್ಲ ರೋಗಗಳಿಗೆ ಪ್ರಾಕೃತಿಕ ಚಿಕಿತ್ಸೆ ಇತ್ತು. ಎಲ್ಲ ಸಸ್ಯಗಳಿಗೆ ರೋಗ ನಿವಾರಣೆಯ ಗುಣಧರ್ಮ ಇದೆ. ಅರಿವಿನ ಕೊರತೆಯಿಂದ ನಾವಿಂದು ಅವುಗಳನ್ನು ಗುರ್ತಿಸುವುದು ಬಿಟ್ಟು ಬಿಟ್ಟಿದ್ದೇವೆ. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅವುಗಳ ಜೀವವೈವಿಧ್ಯ ಬೇರೆ ಬೇರೆಯಾಗಿವೆ. ಹಾಗಾಗಿ ಇಮಥ ರಾಜ್ಯ ಮಟ್ಟದ ಸಮ್ಮೇಳನ ಮಾಡಿ ಇಡೀ ರಾಜ್ಯದ ಔಷಧಿ ಗುಣವುಳ್ಳ ಸಸ್ಯ ಸಂಕುಲವನ್ನು ಗುರುತಿಸಿ ಅವನ್ನು ಸಂರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

ಭಾರತೀಯ ಜೀವ ವೈವಿಧ್ಯ ಕಾಯ್ದೆ 2002ರ ಅನ್ವಯ ಕರ್ನಾಟಕ ಜೀವ ವೈವಿಧ್ಯ ಮಂಡಳಿ ಪ್ರತಿ ಗ್ರಾಮ, ಹೊಬಳಿ, ಪಂಚಾಯತಿ ಮಟ್ಟದಲ್ಲಿ ಜನತಾ ಜೀವ ವೈವಿಧ್ಯಗಳ ದಾಖಲಾತಿ ಮೂಲಕ ಪಾರಂಪರಿಕ ವೈದ್ಯ ಪದ್ಧತಿಯನ್ನು ದಾಖಲಿಸಲಾಗಿದೆ. ಪಾರಂಪರಿಕ ವೈದ್ಯ ಔಷಧೋಪಚಾರ ಸಸ್ಯಜನ್ಯ ಮತ್ತು ಪ್ರಾಣಿಜನ್ಯ ಔಷಧಿಗಾಗಿ ಕ್ರಿಯೆ ಮತ್ತು ಪರಿಣಾಮ ಸಂಶೋಧನೆಗೆ (ವೈಜ್ಞಾನಿಕ) ವ್ಯಾಪಕ ವಿಷಯವಾಗಿದೆ. ಗುಪ್ತವಾಗಿರುವ ಜ್ಞಾನವನ್ನು ಮುಕ್ತಗೊಳಿಸಬೇಕಾಗಿದೆ. ಜೈವಿಕ ಸಂಪನ್ಮೂಲಗಳ ಸಂರಕ್ಷಣೆ,

(2ನೇ ಪುಟ ನೋಡಿ)



# ಒಂದನೇ ಪುಟದಿಂದ

## 1500 ಪಾರಂಪರಿಕ ವೈದ್ಯರು ಭಾಗಿ: ಈಶ್ವರ ಖಂಡ್ರೆ

ಸುಸ್ಥಿರ ಬಳಕೆ ಮತ್ತು ಸ್ಥಳೀಯ ನ್ಯಾಯಸಮ್ಮತ ಹಂಚಿಕೆಯೇ ಕರ್ನಾಟಕ ಜೀವ ವೈವಿಧ್ಯತೆ ಕಾಯ್ದೆ 2002ರ ಮೂಲ ಉದ್ದೇಶವಾಗಿದೆ ಎಂದು ತಿಳಿಸಿದರು.ಪಾರಂಪರಿಕ ವೈದ್ಯ ಪದ್ಧತಿ ಶುದ್ಧ, ಸರಳ ಹಾಗೂ ಪ್ರಕೃತಿದತ್ತವಾಗಿರುವುದರಿಂದ ಪ್ರಕೃತಿಯ ಪಂಚಭೂತಗಳಾದ ಪ್ರಥ್ವಿ, ಆಪ್, ತೇಜ, ವಾಯು ಮತ್ತು ಆಕಾಶಗಳ ಸಂರಕ್ಷಣೆಯು ಪ್ರತಿಯೊಬ್ಬನ ಕರ್ತವ್ಯವಾಗಿದೆ. ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಸುಸ್ಥಿರ ಬಳಕೆಯೇ ಪರಿಸರ ಕಾಯ್ದೆಯ ಉದ್ದೇಶವಾಗಿದೆ. ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯು ಪರಿಸರ ಮಾಲಿನ್ಯ ನಿಯಂತ್ರಣ ಕಾಯ್ದೆ ಜಾರಿಗೆ ತರುವ ಮೂಲಕ ಪಾರಂಪರಿಕ ವೈದ್ಯ ಪದ್ಧತಿಯ ರಕ್ಷಣೆಗೆ ಒತ್ತು ಕೊಟ್ಟಿದೆ. ಕರ್ನಾಟಕ ಪಾರಂಪರಿಕ ನಾಟಿ ವೈದ್ಯ ಪರಿಷತ್ತು ಕಳೆದ 25 ವರ್ಷಗಳಿಂದ ನಿರಂತರವಾಗಿ ಪಾರಂಪರಿಕ ವೈದ್ಯರ ಹಿತರಕ್ಷಣೆಯಲ್ಲಿ ಕಾರ್ಯತತ್ಪರವಾಗಿರುವುದು ಶ್ಲಾಘನೀಯ. ಪಾರಂಪರಿಕ ವೈದ್ಯ ಪದ್ಧತಿಯ ಉಳಿವು ಮತ್ತು ವಿಕಾಸವೇ ಪರಿಷತ್ತಿನ ಮೂಲ ಉದ್ದೇಶವಾಗಿದೆ ಎಂದವರು ಹೇಳಿದರು. ಕರ್ನಾಟಕ ಜೀವ ವೈವಿಧ್ಯ ಮಂಡಳಿ ತನ್ನ ವ್ಯಾಪ್ತಿಗೆ ಬರುವುದರಿಂದ ಈ ಕಾರ್ಯಕ್ರಮ ತಾನೆ ಉದ್ಘಾಟಿಸುತ್ತೇನೆ. ನನ್ನ ಜೊತೆ ಪೌರಾಡಳಿತ ಸಚಿವ ರಹಿಮ್ ಖಾನ್, ಸಂಸದ ಸಾಗರ ಖಂಡ್ರೆ, ಜಿಲ್ಲೆಯ ಎಲ್ಲ ಶಾಸಕರು, ವಿಧಾನ ಪರಿಷತ್ ಸದಸ್ಯರು, ಎಲ್ಲ ಹಿರಿಯ ಅಧಿಕಾರಿಗಳು, ಜೀವ ವೈವಿಧ್ಯದಲ್ಲಿ ಪರಿಣಿತಿ ಹೊಂದಿದ ಹಾಗೂ ಪಾರಂಪರಿಕ ವೈದ್ಯ ಪದ್ದತಿಯಲ್ಲಿ ಸಾಧನೆ ಮಾಡಿದವರನ್ನು ಸಮ್ಮೇಳನಕ್ಕೆ ಅವ್ಹಾನಿಸಲಾಗಿದೆ. ಸಮ್ಮೇಳನದಲ್ಲಿ ಕೈಗೊಳ್ಳಬಹುದಾದ ನಿರ್ಣಯಕ್ಕೆ ಸರ್ಕಾರ ರೂಪ, ರೇಷ ಸಿದ್ದಪಡಿಸಿ ಅವುಗಳನ್ನು ಅಭಿವೃದ್ಧಿಪಡಿಸಲು ಮುಂದಾಗಲಿದೆ. ಸಮ್ಮೇಳನದಲ್ಲಿ ಗೊತ್ತುವಳಿ ಮಂಡಿಸಲಾಗುತ್ತದೆ. ಅದನ್ನು ಸಹ ಸರ್ಕಾರ ಗಂಭೀರವಾಗಿ ಪರಿಗಣಿಸಲಿದೆ. ಒಟ್ಟಾರೆ ಈ ಸಮ್ಮೇಳನದಿಂದ ಪಾರಂಪರಿಕ ವೈದ್ಯ ಪದ್ದತಿ ಹಾಗೂ ಪ್ರಾಕೃತಿಕ ಚಿಕಿತ್ಸೆಗೆ ಉತ್ತೇಜನ ನೀಡಿ ಪಾರಂಪರಿಕ ವೈದ್ಯರ ಏಳಿಗೆಗಾಗಿ ನಮ್ಮ ಸರ್ಕಾರ ಬದ್ದವಾಗಿದೆ ಎಂದರು.

ರಾಜ್ಯದ ಪೌರಾಡಳಿತ ಸಚಿವ ರಹಿಮ್ ಖಾನ್, ನಗರ ಸಭೆ ಅಧ್ಯಕ್ಷ ಮಹಮ್ಮದ್ ಗೌಸುದ್ದಿನ್, ಪಾರಂಪರಿಕ ವೈದ್ಯ ಪರಿಷತ್ ಅಧ್ಯಕ್ಷ ಜಿ.ಮಹಾದೇವಯ್ಯ, ಕಾರ್ಯದರ್ಶಿ ಕೃಷ್ಣಮೂರ್ತಿ, ಕೋಶಾಧ್ಯಕ್ಷ ಜಂಗಿರಮಠ, ಸಮ್ಮೇಳನದ ಕೋಶಾಧ್ಯಕ್ಷ ಎ.ಬಿ ಪಾಟೀಲ, ಸಂಯೋಜಕರಾದ ಡಾ.ಜಗನ್ನಾಥ ಹೆಬ್ಬಾಳೆ ಪತ್ರಿಕಾಗೋಷ್ಠಿಯಲ್ಲಿದ್ದರು.

## ಹೋರಾಟಕ್ಕೆ ದಕ್ಷಿಣ ರಾಜ್ಯಗಳ ಜತೆ ಮಾತುಕತೆ

ಕಂಟಕವಾಗಿರುವ ಹೊಸ ಶಿಕ್ಷಣ ನೀತಿ ಮತ್ತು ಯುಜಿಸಿ ನಿಯಮಾವಳಿಗಳಿಗೆ ತಿದ್ದುಪಡಿಯೂ ಸೇರಿದಂತೆ ಕೇಂದ್ರ ಸರ್ಕಾರದ ಪ್ರತಿಯೊಂದು ಕ್ರಮವೂ ರಾಜ್ಯವನ್ನು ಶಿಕ್ಷಿಸುವ ದುರುದ್ದೇಶದಿಂದ ಕೂಡಿದೆ ಎನ್ನುವುದು ಸ್ಪಷ್ಟವಾಗುತ್ತಿದೆ.ಈ ಎಲ್ಲ ಅನ್ಯಾಯದ ವಿರುದ್ಧ

ರಾಷ್ಟ್ರಮಟ್ಟದಲ್ಲಿ ದನಿ ಎತ್ತದಂತೆ ಮಾಡಲು ಸಂಸತ್ ನಲ್ಲಿ ದಕ್ಷಿಣದ ರಾಜ್ಯಗಳ ದನಿಯನ್ನು ಇನ್ನಷ್ಟು ಕ್ಷೀಣಗೊಳಿಸುವ ದುರುದ್ದೇಶದಿಂದ ಕೇಂದ್ರದ ಬಿಜೆಪಿ ಸರ್ಕಾರ ಈಗ ಕ್ಷೇತ್ರ ಮರುವಿಂಗಡಣೆಯ ಹೊಸ ಅಸ್ತ್ರವನ್ನು ಎತ್ತಿಕೊಂಡಿದೆ ಎಂದು ಸಿಎಂ ಕಿಡಿ ಕಾರಿದ್ದಾರೆ. ಕ್ಷೇತ್ರ ಮರುವಿಂಗಡಣೆಯ ಪರಿಣಾಮಗಳ ಬಗ್ಗೆ ಹಲವಾರು ಅಧ್ಯಯನಗಳು ನಡೆದಿವೆ. ಇವುಗಳ ಪ್ರಕಾರ ಇತ್ತೀಚಿನ ಜನಗಣತಿಯನ್ನು(2021 ಇಲ್ಲವೇ 2031) ಮಾತ್ರ ಆಧರಿಸಿ ಕ್ಷೇತ್ರ ಮರುವಿಂಗಡಣೆ ನಡೆದರೆ ಕರ್ನಾಟಕದ ಲೋಕಸಭಾ ಕ್ಷೇತ್ರಗಳ ಸಂಖ್ಯೆ 28ರಿಂದ 26ಕ್ಕೆ ಇಳಿಯುವ ಸಾಧ್ಯತೆ ಇದೆ. ಇದೇ ರೀತಿ ಆಂಧ್ರಪ್ರದೇಶದ ಲೋಕಸಭಾ ಕ್ಷೇತ್ರಗಳ ಸಂಖ್ಯೆ 42ರಿಂದ 34, ಕೇರಳದ ಸಂಖ್ಯೆ 20ರಿಂದ 12ಕ್ಕೆ, ತಮಿಳುನಾಡಿನ ಸಂಖ್ಯೆ 39ರಿಂದ 31ಕ್ಕೆ ಇಳಿಯಲಿದೆ.ಇದೇ ವೇಳೆ ಉತ್ತರಪ್ರದೇಶದ ಲೋಕಸಭಾ ಕ್ಷೇತ್ರಗಳ ಸಂಖ್ಯೆ 80ರಿಂದ 91, ಬಿಹಾರದ ಸಂಖ್ಯೆ 40ರಿಂದ 50, ಮಧ್ಯಪ್ರದೇಶದ ಸಂಖ್ಯೆ 29ರಿಂದ 33ಕ್ಕೆ ಏರಿಕೆಯಾಗಲಿದೆ. ಇದನ್ನು ಅನ್ಯಾಯ ಎನ್ನದೆ ನ್ಯಾಯ ಎನ್ನಲು ಸಾಧ್ಯವೇ?

ಈ ಅನ್ಯಾಯವನ್ನು ಖಂಡಿತ ಸಹಿಸಲು ಸಾಧ್ಯವಿಲ್ಲ. ಕ್ಷೇತ್ರ ಮರುವಿಂಗಡಣೆಯಿಂದ ಕರ್ನಾಟಕವೂ ಸೇರಿದಂತೆ ದಕ್ಷಿಣದ ರಾಜ್ಯಗಳಿಗೆ ಅನ್ಯಾಯ ಆಗಬಾರದೆಂದರೆ ಒಂದೋ 1971ರ ಜನಗಣತಿಯನ್ನು ಆಧಾರವಾಗಿಟ್ಟುಕೊಳ್ಳಬೇಕು. ಇಲ್ಲವಾದರೆ ಜನಸಂಖ್ಯೆಯ ಮಾನದಂಡವನ್ನು ಕೈಬಿಟ್ಟು ಈಗಿನ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಅನುಪಾತಕ್ಕನುಗುಣವಾಗಿ ಹೆಚ್ಚಿಸಬೇಕು ಎಂದಿದ್ದಾರೆ.

ಇತ್ತೀಚಿನ ಜನಸಂಖ್ಯೆಯ ಅನುಪಾತದಲ್ಲಿ ಕ್ಷೇತ್ರ ಮರುವಿಂಗಡಣೆ ನಡೆದರೆ ದಕ್ಷಿಣದ ರಾಜ್ಯಗಳಿಗೆ ಅನ್ಯಾಯ ಕಟ್ಟಿಟ್ಟ ಬುತ್ತಿ ಎನ್ನುವುದು ನಮಗೆ ಸ್ಪಷ್ಟವಾಗಿ ಅರ್ಥವಾಗಿದೆ.

ಈ ಅನ್ಯಾಯವನ್ನು ತಪ್ಪಿಸಲಿಕ್ಕಾಗಿಯೇ ಸಂವಿಧಾನಕ್ಕೆ ತಿದ್ದುಪಡಿ ಮಾಡಿ ಹಿಂದಿನ ಎರಡು ಕ್ಷೇತ್ರ ಮರುವಿಂಗಡಣೆಗೆ 1971ರ ಜನಗಣತಿಯನ್ನೇ ಆಧಾರವಾಗಿಟ್ಟುಕೊಳ್ಳಲಾಗಿತ್ತು.ಕಳೆದ 50 ವರ್ಷಗಳಲ್ಲಿ ದಕ್ಷಿಣದ ರಾಜ್ಯಗಳು ಪರಿಣಾಮಕಾರಿ ಕ್ರಮಗಳ ಮೂಲಕ ಜನಸಂಖ್ಯೆಯನ್ನು ನಿಯಂತ್ರಿಸಿರುವುದು ಮಾತ್ರವಲ್ಲ, ಅಭಿವೃದ್ದಿಯ ಪಥದಲ್ಲಿ ಮುನ್ನಡೆಯುತ್ತಿವೆ. ಇದೇ ವೇಳೆ ಉತ್ತರಪ್ರದೇಶ, ಬಿಹಾರ, ಮಧ್ಯಪ್ರದೇಶದಂತಹ ಉತ್ತರದ ರಾಜ್ಯಗಳು ಜನಸಂಖ್ಯೆಯ ನಿಯಂತ್ರಣದಲ್ಲಿ ಸಂಪೂರ್ಣವಾಗಿ ವಿಫಲವಾಗಿರುವುದು ಮಾತ್ರವಲ್ಲ, ಅಭಿವೃದ್ದಿಯ ಹಾದಿಯಲ್ಲಿ ಇನ್ನೂ ಕುಂಟುತ್ತಾ ಸಾಗಿದೆ.

ಇದರಿಂದಾಗಿ ಕ್ಷೇತ್ರ ಮರುವಿಂಗಡಣೆಯನ್ನು ಇತ್ತೀಚಿನ ಜನಗಣತಿಯಿಂದ ಪಡೆದ ಜನಸಂಖ್ಯೆಯ ಅನುಪಾತದ ಮೇಲೆ ನಡೆಸಿದರೆ ಜನಸಂಖ್ಯೆ ನಿಯಂತ್ರಣ ಮಾಡಿರುವ ಕರ್ನಾಟಕವೂ ಸೇರಿದಂತೆ ದಕ್ಷಿಣದ ರಾಜ್ಯಗಳ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಕಡಿಮೆಯಾಗಲಿದೆ. ಇಲ್ಲದೆ ಇದ್ದರೆ ಉತ್ತರದ ರಾಜ್ಯಗಳ ಕ್ಷೇತ್ರಗಳ ಪ್ರಮಾಣದಲ್ಲಿ ಏರಿಕೆ ಆಗಲಾರದು.

ಈ ಎರಡೂ ಬೆಳವಣಿಗಳಿಂದ ದಕ್ಷಿಣದ ರಾಜ್ಯಗಳೇ ನಷ್ಟ ಅನುಭವಿಸಲಿದೆ ಎನ್ನುವುದು ಗೃಹ ಸಚಿವ ಅವರಿಗೆ ತಿಳಿದಿಲ್ಲವೇ? ಎಂದು ಸಿಎಂ ಪ್ರಶ್ನಿಸಿದ್ದಾರೆ.ರಾಜ್ಯಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತಬೇಕಾದ ರಾಜ್ಯ ಬಿಜೆಪಿ ನಾಯಕರು ಪರಸ್ಪರ ಕೆಸರೆರಚಾಟ ನಡೆಸುತ್ತಾ ಬೀದಿ ಜಗಳದಲ್ಲಿ ಮಗ್ನರಾಗಿದ್ದಾರೆ.ಇಂತಹ ಸಂದರ್ಭದಲ್ಲಿ ಜಾತಿ–ಧರ್ಮ ಪಕ್ಷ –ಪಂಥಗಳ ಭೇದವನ್ನು ಮರೆತು ಕನ್ನಡಿಗರೆಲ್ಲರೂ ಒಂದಾಗಿ ಒಂದೇ ದನಿಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ದ ದನಿ ಎತ್ತಬೇಕಾಗಿದೆ.

ಈ ಅನ್ಯಾಯದ ವಿರುದ್ದ ಸಮಗ್ರ ರೂಪದ ಹೋರಾಟವನ್ನು ನಡೆಸಲು ನೆರೆಯ ದಕ್ಷಿಣದ ರಾಜ್ಯಗಳ ಜೊತೆಯಲ್ಲಿಯೂ ಮಾತುಕತೆ ನಡೆಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಅನ್ಯಾಯಕ್ಕೀಡಾಗಿರುವ ಎಲ್ಲ ರಾಜ್ಯಗಳ ಜೊತೆಗೂಡಿ ಸಂಘಟಿತವಾದ ಹೋರಾಟ ನಡೆಸಲಾಗುವುದು ಎಂದು ಸಿಎಂ ಹೇಳಿದ್ದಾರೆ.

## ಕ್ರಮ ವಹಿಸಿ: ಮಾಣಿಕರಾವ ಪಾಟೀಲ

ಬೋರವೆಲ್, ಬಾವಿ ಇದೆ ಎಂಬ ಮಾಹಿತಿಯನ್ನು ಒದಗಿಸಬೇಕು. ಜೆಜೆಎಂ ಕಾಮಗಾರಿಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಿ ಜನರಿಗೆ ನೀರಿನ ಸಮಸ್ಯೆಯಾಗದಂತೆ ತಡೆಗಟ್ಟಿ ಎಂದರು.

ಬೇಸಿಗೆಯಲ್ಲಿ ನೀರಿನ ಸಮಸ್ಯೆಯಾಗಿ ಜನರು ಪರದಾಡುವಂತಹ ಪರಿಸ್ಥಿತಿ ಬರದಂತೆ ನೋಡಿಕೊಳ್ಳಿ ಯಾವ ಯಾವ ಗ್ರಾ.ಪಂ. ವ್ಯಾಪ್ತಿಯಲ್ಲಿ ನೀರಿನ ಸಮಸ್ಯೆಯಾಗಬಹುದು ಎಂದು ಮಾಹಿತಿಯನ್ನು ಕಲೆ ಹಾಕಿದರೆ ಪರಿಹಾರದ ಮಾರ್ಗಗಳನ್ನು ಕಂಡುಕೊಳ್ಳಲು ಸಾಧ್ಯ ಎಂದು ತಾ.ಪಂ. ಸಹಾಯಕ ನಿರ್ದೇಶಕರಾದ ಹಣಮಂತರಾಯ ಕೌಟಗೆ ಹೇಳಿದರು.

ಜೊತೆಗೆ ಕಡಿಮೆ ತೆರಿಗೆ ವಸೂಲಾತಿ ಮಾಡಿರುವ ಗ್ರಾಮ ಪಂಚಾಯತಗಳು ಏಳು ದಿನಗಳ ಕಾಲ ವಿಶೇಷ ಅಭಿಯಾನ ಹಮ್ಮಿಕೊಂಡು ಹೆಚ್ಚಿನ ಮಟ್ಟದಲ್ಲಿ ತೆರಿಗೆ ವಸೂಲಾತಿ ಮಾಡಬೇಕು.

ಆಸ್ತಿ ಸಮೀಕ್ಷೆ & ಕ2 ದಲ್ಲಿ ನೋಂದಣಿ & ಗ್ರಾ.ಪಂ. ಸಭೆಗಳನ್ನು ಕ2 ದಲ್ಲಿ ಅಳವಡಿಸಿ ಪ್ರಗತಿ ಸಾಧಿಸಿ, ಡಿಜಿಟಲ್ ಗ್ರಂಥಾಲಯ & ಬ್ರಾಂಚ್ ಲೈಬ್ರರಿ, 14&15ನೇ ಹಣಕಾಸು ಯೋಜನೆ, ಬಯೋ ಮೆಟ್ರಿಕ್ ಹಾಜರಾತಿ, ಗ್ರಾಮ ಪಂಚಾಯತ ಆಯವ್ಯಯ ತಯಾರಿಕೆ, ಗ್ರಂಥಾಲಯ ಅಇಖಖ ಜಿಲ್ಲಾ ಪಂಚಾಯತ ಖಾತೆಗೆ ಪಾವತಿಸುವ ಕುರಿತು, ಆರೋಗ್ಯ ಅಮೃತ ಅಭಿಯಾನ, ಸ್ವಚ್ಚ ಭಾರತ ಮಿಷನ್, ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆ, ಜಲಜೀವನ ಮಿಷನ್, ಗ್ರಾಮೀಣ ವಸತಿ ಯೋಜನೆ ಕುರಿತು ಚರ್ಚಿಸಿದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಜೆ ಇ ಶಿವಕುಮಾರ, ಪಿಡಿಓಗಳಾದ ದತ್ತಾತ್ರಿ ಪೂಜಾರಿ, ಪ್ರಶಾಂತ, ರಾಜಕುಮಾರ ತಂಬಾಕೆ, ವಿಜಯಕುಮಾರ ಪಾಟೀಲ, ಮಲ್ಲೇಶ, ಬಾಬುರಾವ ಸಂಗಮಕರ, ಪ್ರಭುದಾಸ, ನಿರ್ಮಲಾ, ತಾನಾಜಿ ಪಾಟೀಲ ಸೇರಿದಂತೆ ಕಾರ್ಯದರ್ಶಿಗಳು, ಡಿಇಓ, ತಾ.ಪಂ. ಸಿಬ್ಬಂದಿಗಳಾದ ನೈಯೀಮ್, ಪೀಟರ್, ವಿದ್ಯಾಸಾಗರ, ಗಣೇಶ, ಸವಿತಾ ನಾಗೇಶ, ಕವಿತಾ, ಸ್ವಪ್ನಾ ಸೇರಿದಂತೆ ಇತರರು ಹಾಜರಿದ್ದರು.

## ತೀರ್ಪು ಕಾಯ್ದಿರಿಸಿದ ದೆಹಲಿ ಹೈಕೋರ್ಟ್

ವ್ಯಕ್ತಪಡಿಸಿಲ್ಲ. 1978 ರಲ್ಲಿ ಕಲಾ ಪದವಿ ಪಡೆದಿದ್ದು," ಎಂದು ಮೆಹ್ತಾ ತಿಳಿಸಿದ್ದಾರೆ.

ನೀರಜ್ ಎಂಬವರು ಆರ್‌ಟಿಐ ಅರ್ಜಿ ಸಲ್ಲಿಸಿದ ನಂತರ, ಕೇಂದ್ರ ಮಾಹಿತಿ ಆಯೋಗ(ಸಿಐಸಿ) ಡಿಸೆಂಬರ್ 21, 2016 ರಂದು, 1978 ರಲ್ಲಿ ಬಿಎ ಪರೀಕ್ಷೆಯಲ್ಲಿ ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳ ದಾಖಲೆಗಳನ್ನು ಪರಿಶೀಲಿಸಲು ಅವಕಾಶ ನೀಡಬೇಕು ಎಂದು ಆದೇಶಿಸಿತ್ತು. ಇದೇ ವರ್ಷ ಪ್ರಧಾನಿ ಮೋದಿ ಕೂಡ ಉತ್ತೀರ್ಣರಾಗಿದ್ದಾರೆ ಎನ್ನಲಾಗಿದೆ.

ಜನವರಿ 23, 2017 ರಂದು ದೆಹಲಿ ಹೈಕೋರ್ಟ್, ಸಿಐಸಿ ಆದೇಶಕ್ಕೆ ತಡೆ ನೀಡಿತ್ತು.

## ಪೂರ್ಣ ಕುಂಭಮೇಳ

ನನಗಿದೆ. ಆದರೆ ನಾಸಿಕ್‌ನಲ್ಲಿ ನಡೆಯುವ ಕುಂಭಮೇಳವು ತಾಂತ್ರಿಕವಾಗಿ ಮುಂದುವರಿದ ಕುಂಭವಾಗಲಿದೆ ಎಂದರು.

2027ರ ಪೂರ್ಣ ಕುಂಭಮೇಳವು ನಾಸಿಕ್‌ನಿಂದ ಸುಮಾರು 38 ಕಿ.ಮೀ ದೂರದಲ್ಲಿರುವ ಗೋದಾವರಿ ನದಿಯ ದಡದಲ್ಲಿರುವ ತ್ರಯಂಬಕೇಶ್ವರದಲ್ಲಿ ನಡೆಯಲಿದೆ.

ನಾಸಿಕ್ ಕುಂಭಮೇಳವು 2027ರ ಜು.17 ರಂದು ಪ್ರಾರಂಭವಾಗಲಿದ್ದು, ಆಗಸ್ಟ್ 17ರಂದು ಕೊನೆಗೊಳ್ಳಲಿದೆ ಎಂದು ವರದಿಗಳು ತಿಳಿಸಿವೆ.

## ಮಹಾ ಶಿವರಾತ್ರಿ ನಿಮಿತ್ತ ಸಂಗೀತ ಶಿವಾರಾಧನೆ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 27 : ಬೀದರ್ ತಾಲೂಕಿನ ಸುಕ್ಷೇತ್ರ ಬಾವಗಿ ಗ್ರಾಮದ ಆರಾಧ್ಯ ದೈವ, ಪವಾಡ ಪುರುಷ, ಶ್ರೀ ಗುರುಭದ್ರೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಮಹೋತ್ಸವದ ನಿಮಿತ್ತ ಶ್ರೀ ಗುರು ಭದ್ರೇಶ್ವರನ ಕರ್ತೃ ಗದ್ದುಗೆಗೆ ಸಂಗೀತ ಮಹಾ ರುದ್ರಾಭಿಷೇಕ, ಬಿಲ್ವಾರ್ಚನೆ ಹಾಗೂ ಸಾಯಂಕಾಲ ಸಾಮೂಹಿಕ ಇಷ್ಟಲಿಂಗ ಪೂಜೆ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಈ ವೇಳೆ ಶ್ರೀ ಭದ್ರೇಶ್ವರ ಸಂಸ್ಥಾನದ ವೇದಮೂರ್ತಿ ಭದ್ರಯ್ಯ ಸ್ವಾಮಿಯವರು ಮಾತನಾಡಿ ಈ ಜಗದ ಸೃಷ್ಟಿಕರ್ತ ದೇವನ ಆರಾಧನೆ ನಿರ್ಮಲ ಮನಸ್ಸಿನಿಂದ ಪರಿಶುದ್ಧ ಭಾವನೆಯಿಂದ ಮಾಡಬೇಕು. ನಿರಂತರ ಭಕ್ತಿಯಿಂದ ತನು, ಮನ, ಭಾವ ಶುದ್ದವಾಗುತ್ತದೆ. ಶಿವನು ಭೋಳೆ ಶಂಕರ ಭಕ್ತರು ಬೇಡಿದವರವನ್ನು ಇಚ್ಛೈಸುತ್ತಾನೆ, ಈ ವರ್ಷದ ಮಹಾ ಶಿವರಾತ್ರಿ ವಿಶೇಷ ವಾದದ್ದು ಏಕೆಂದರೆ ಪ್ರಯಾಗರಾಜ್ದಲ್ಲಿ ಮಹಾ ಕುಂಭಮೇಳ ನಡೆಯುತ್ತಿದ್ದು ಅನೇಕ ಭಕ್ತರು ಹೋಗಿ ಗಂಗೆಯಲ್ಲಿ ಮಿಂದೆದ್ದು ಪುಣ್ಯ ಸ್ನಾನ ಮಾಡಿ ಬರುತ್ತಿದ್ದಾರೆ, ಅನೇಕ ಸಂತರು ಲೋಕದ ಹಿತಕ್ಕಾಗಿ ತನ್ನ ಜೀವನ ಮುಡಿಪಾಗಿಟ್ಟಿದ್ದಾರೆ ಅಂಥವರ ದರ್ಶನ ಪಡೆದು ಧನ್ಯರಾಗುತ್ತಿದ್ದಾರೆ ಎಂದು ನುಡಿದರು. ಈ ಸಂದರ್ಭದಲ್ಲಿ ಶಾಂತಕುಮಾರ ಸ್ವಾಮಿ ಚನ್ನಮಲ್ಲಪ್ಪ ಹಜ್ಜರಗಿ, ಸಂಗಮೇಶ ಹಜ್ಜರಗಿ, ಲೋಕೇಶ್ ಕನಶೆಟ್ಟಿ, ರೇವಣಸಿದ್ದಪ್ಪ ಭದ್ರಣ್ಣ, ಬಸವರಾಜ ಖೌದಿ, ಶಿವಶರಣಪ್ಪ ರೇಶಟ್ಟಿ, ಮಡೆಪ್ಪಾ ಹಜ್ಜರಗಿ, ಸುನೀಲ ಚಿದ್ರಿ, ಕಾಶಪ್ಪ ಕರಕನಳ್ಳಿ. ವಿಜಯ ಕುಮಾರ ಬಾಪೂರ್, ಸಂಗಮೇಶ ಬಾಪೂರ್, ಸುನೀಲ ಪೋಶಟ್ಟಿ ದಿಲೀಪ್ ಚಿದ್ರಿ, ಆನಂದ ಸ್ವಾಮಿ, ಅನೇಕ ಸದ್ಭಕ್ತರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ನಂತರ ಬೀದರನ ಖ್ಯಾತ ಕಲಾವಿದರಿಂದ ಸಂಗೀತ ಶಿವಾರಾಧನೆ ನಡೆಯಿತು.

## ಹೆಂಡತಿ ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆಗೆ ಮುಂದಾದ ಮಾಜಿ ಸೈನಿಕ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 27 : ದೇಶ ಕಾಯುವ ಯೋಧರಿಗೆ ಸದಾ ಶತ್ರು ಸೈನಿಕರ ಕಾಟ ಇರುವುದು ಸಾಮಾನ್ಯ. ಆದರೆ ಇಲ್ಲೋರ್ವ ಮಾಜಿ ಸೈನಿಕನಿಗೆ ತನ್ನ ಹೆಂಡತಿಯೇ ಬೇತಾಳದಂತೆ ಕಾಡುತ್ತಿದ್ದು, ಆಕೆಯ ಕಿರುಕುಳ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ. ತಾಲೂಕಿನ ಜನವಾಡ ಗ್ರಾಮದ ನಿವಾಸಿ ಮಾಜಿ ಸೈನಿಕ ಬಂಡೆಪ್ಪ ತಂದೆ ಶಿವಶೆಟ್ಟಿ ಬಟನಾಪುರೆ ಎಂಬುವವರು 2018ರಲ್ಲಿ ಪಕ್ಕದ ಮಮದಾಪುರ ಗ್ರಾಮದ ನಿವಾಸಿ ಭೀಮರಾವ ಧೂಳೆ ಅವರ ಕಿರಿಯ ಸುಪುತ್ರಿ ಸಂಗೀತಾಳ ಜೊತೆ ವಿವಾಹವಾಗಿದೆ. ಅವರಿಗೆ ಐದು ವರ್ಷದ ಒಂದು ಗಂಡು ಮಗು ಸಹ ಇದೆ. ಇವರಿಬ್ಬರ ದಾಂಪತ್ಯ ಜೀವನ ಕಳೆದ ಮೂರು ವರ್ಷಗಳ ಹಿಂದಷ್ಟೆ ಹಳಸಿ ಹೋಗಿದ್ದು, ಕೋರ್ಟ್ ಮೆಟ್ಟಿಲೇರಿದೆ. ಗಂಡ ಕರ್ತವ್ಯದಲ್ಲಿದ್ದಾಗ ಹೆಂಡತಿ ಸಂಗೀತಾ ಅತ್ತೆ, ಮಾವರ ಬಳಿಯೆ ಜನವಾಡದಲ್ಲಿದ್ದರು. ಎಲ್ಲವು ಚೆನ್ನಾಗಿಯೇ ಇತ್ತು. ಇದ್ದಕ್ಕಿದ್ದಂತೆ ಅತ್ತೆ, ಮಾವನೊಂದಿಗೆ ಜಗಳ ಮಾಡಿಕೊಂಡು ಅವರಿಂದ ದೂರ ಇರುವುದಾಗಿ ಹಟ ಹಿಡಿದ ಕಾರಣ ಗಂಡ ಬಂಡೆಪ್ಪ ಅವರು ತನ್ನ ಮಗ ಹಾಗೂ ಹೆಂಡತಿಯನ್ನು ಬೀದರ್ ನಗರದ ಬಸವನಗರ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿರಿಸಿದ್ದರು. ರಜೆ ಮುಗಿಸಿ ಮತ್ತೆ ಸೈನಿಕ ಸೇವೆಗೆ ತೆರಳುವ ಸಂದರ್ಭದಲ್ಲಿ ಹೆಂಡತಿ ಸಂಗೀತಾ ತನ್ನ ಗಂಡನ ಸರ್ವಿಸ್ ಐ ಕಾರ್ಡ್ ಬಚ್ಚಟ್ಟಿದ್ದು, ತನ್ನ ಸಹೋದರನಿಗೆ ಕೊಟ್ಟಿರುತ್ತಾರೆ. ಅವರ ಸಹೋದರ ತನಗೆ ಫೋನ್ ಮಾಡಿ ಏಳು ಲಕ್ಷ ಕೊಟ್ಟರೆ ನಿಮ್ಮ ಸರ್ವಿಸ್ ಐ ಕಾರ್ಡ್ ಕೊಡುವುದಾಗಿ ಬ್ಲಾಕ್ ಮೇಲ್ ಮಾಡಿದ್ದರು. ನನ್ನ ಬಳಿ ನಿರಂತರವಾಗಿ ಹಣ ವಸುಲಿ ಮಾಡಬೇಕೆಂಬ ದುರುದ್ದೇಶದಿಂದ ನನ್ನ ಹೆಂಡತಿ ಹಾಗೂ ಆಕೆಯ ಪೋಷಕರು ನನ್ನ ವಿರೂದ್ಧ ಇಲ್ಲ ಸಲ್ಲದ ಆರೋಪ ಮಾಡಿ ಮಹಿಳಾ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಇದು ಸಾಲದು ಎಂಬಂತೆ ಇದರಲ್ಲಿ ನನ್ನ ತಂದೆ ಶಿವಶೆಟ್ಟಿ, ತಾಯಿ



ಮಹಾದೇವಿ, ನನ್ನ ಸಹೋದರರನ್ನು ಎಳೆದು ತರಲಾಗಿದೆ. ನನ್ನ ಹೆಂಡತಿಯನ್ನು ಬೀದರ್‌ನಲ್ಲಿ ಬಾಡಿಗೆ ಮನೆಯಲ್ಲಿಟ್ಟರೂ ಉದ್ದೇಶಪೂರ್ವಕವಾಗಿ ನನ್ನ ಕುಟುಂಬದವರನ್ನು ಸಹ ಈ ಕೇಸ್‌ನಲ್ಲಿ ಎಳೆದು ತಂದಿದ್ದಾರೆ. ನನ್ನ ಹೆಂಡತಿ ಮಕ್ಕಳು ಚೆನ್ನಾಗಿರಲಿ ಎಂದು ಸೇವೆಯಿಂದ ನಿವೃತ್ತಿಯಾಗಿ ಬಂದ ಬಳಿಕ ನಾನೇ ಖುದ್ದು ನಿಂತು ಹೆರಿಗೆ ಮಾಡಿಸಿದ್ದೆ. ಆದರೆ ಸುಖಾ ಸುಮ್ಮನೆ ಗರ್ಭಪಾತ ಮಾಡಿಸಿದ್ದಾರೆ, ನನ್ನನ್ನು ಹಾಗೂ ನನ್ನ ಮಗನಿಗೆ ಮನೆಯಿಂದ ಹೊರದೂಡಿದ್ದಾರೆ ಎಂದು ಹಸಿ ಸುಳ್ಳು ಹೇಳಿ ನನ್ನ ಮೇಲೆ 498 ಸೇರಿದಂತೆ ಐದು ಕೇಸ್ ದಾಖಲಿಸಿ ನಿತ್ಯ ನನಗೆ ಹಾಗೂ ನನ್ನ ಇಡೀ ಕುಟುಂಬವನ್ನು ಕೋರ್ಟ್ಗೆ ಅಡ್ಡಾಡುವಂತೆ ಮಾಡಿದ್ದಾಳೆ. ಸಾಲದು ಎಂಬಂತೆ ಇತ್ತಿಚೀಗೆ ನನ್ನನ್ನು ಜೈಲಿಗೆ ತಳ್ಳುವಂಥ ಹೀನ ಕಾರ್ಯ ನನ್ನ ಹೆಂಡತಿ ಹಾಗೂ ಅವರ ಕುಟುಂಬದವರು ಮಾಡಿದ್ದಾರೆ ಎಂದು ಸ್ವತಃ ಬಂಡೆಪ್ಪ ಮಾಧ್ಯಮದವರ ಮುಂದೆ ತನ್ನ ಅಳಲು ತೋಡಿಕೊಂಡಿದ್ದಲ್ಲದೆ ಇಂಥ ಸ್ಥಿತಿ ಓರ್ವ ಶತ್ರುವಿಗೂ ಬರಬಾರದು. ಖುಷಿಯಾಗಿ ಹೆಂಡತಿ ಮಕ್ಕಳೊಂದಿಗೆ ಬದುಕುವ ನನಗೆ ನನ್ನ ಕೈ ಹಿಡಿದು ಸಪ್ತಪದಿ ತುಳಿದು ನನಗೆ ಜೈಲಿಗಟ್ಟ ಇಂಥ ಸ್ಥಿತಿ ತಂದಿರುವ ನನ್ನ ಮಡದಿ ಹಾಗೂ ಅವರ ಪೋಷಕರ ವಿರೂದ್ಧ ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ. ಇಂದು ನೂರಾರು ಕುಟುಂಬಗಳು ಬೀದಿ ಪಾಲಾಗಲು ಅವರಲ್ಲಿನ ಉದ್ದಟತನ, ಸಿಟ್ಟು, ಸಹನಶೀಲತೆಯ ಕೊರತೆ ನೇರವಾಗಿ ಎದ್ದು ಕಾಣುತ್ತಿದೆ. ಹಿಂದೆ 25 ವರ್ಷದ ದಾಂಪತ್ಯ ಜೀವನದ ಬೆಳ್ಳಿ ಮಹೋತ್ಸವ, 50 ವರ್ಷದ ಸುವರ್ಣ ಮಹೋತ್ಸವ ಆಚರಿಸಿಕೊಳ್ಳುತ್ತಿದ್ದರು. ಆದರೆ ಇಂದು ಕ್ಷುಲ್ಲಕ ಕಾರಣಕ್ಕೆ ಹಾಗೂ ಹಣದ ಆಮಿಷಕ್ಕೆ ಒಳಗಾಗಿ ಮದುವೆಯಾದ ಕೆಲವೇ ವರ್ಷಗಳಲ್ಲಿ ಗಂಡ ಒಂದು ಕಡೆ ಹಾಗೂ ಹೆಂಡತಿ ಮತ್ತೊಂದು ಕಡೆ ಬದುಕುತ್ತಿರುವರು. ಇವರಿಗೆ ಹುಟ್ಟಿದ ಮಕ್ಕಳ ಗೋಳು ಕೇಳವರಾರು? ಪ್ರತಿಯೊಂದು ಕುಟುಂಬಗಳು ದಾಂಪತ್ಯ ವಿಚಾರದಲ್ಲಿ ಗಂಭೀರವಾಗಿ ಅರಿತು ತಮ್ಮ ಕುಡಿಗಳಿಗೂ ಒಳ್ಳೆಯ ಸಂಸ್ಕಾರ ನೀಡಬೇಕು ಜೊತೆಗೆ ತಮ್ಮ ದಾಂಪತ್ಯ ಜೀವನ ಹಸುನು ಮಾಡಿಕೊಳ್ಳಬೇಕು. ಮೇಲೆ ತಿಳಿಸಿದ ಈ ಪ್ರಕರಣದಲ್ಲಿರುವ ಮಾಜಿ ಸೈನಿಕ ಬಂಡೆಪ್ಪ ಹಾಗೂ ಆತನ ಹೆಂಡತಿ ಸಂಗೀತಾ ಇಬ್ಬರು ಮತ್ತೆ ಒಂದಾಗಿ ತಮ್ಮ ದಾಂಪತ್ಯ ಭಾವಿ ಜೀವನ ಸುಖಮಯವಾಗಿಸಿಕೊಳ್ಳಲಿ, ತಮಗೆ ಜನಿಸಿದ ಮಗುವಿನ ಬಗ್ಗೆ ಯೋಚಿಸಿ ಸೂಕ್ತ ನಿರ್ಧಾರ ಕೈಗೊಂಡು ಖುಷಿಯಿಂದ ಬಾಳುವಿರೆಂಬುದು ಪ್ರಜ್ಞಾವಂತರ ಅಭಿಪ್ರಾಯ.

# ಅಮರೇಶ್ವರ ದೇವಸ್ಥಾನದಲ್ಲಿ

# ಶಾಸಕ ಪ್ರಭು ಚವ್ಹಾಣರಿಂದ ವಿಶೇಷ ಪೂಜೆ

ಔರಾದ:ಫೆ.27:ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಫೆ.25ರಂದು ಔರಾದ(ಬಿ) ಪಟ್ಟಣದ ಅಮರೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ, ಅರ್ಚನೆ, ಅಭಿಷೇಕ, ಹೋಮ–ಹವನಗಳನ್ನು ನೆರವೇರಿಸಿ ನಾಡಿನ ಒಳಿತಿಗಾಗಿ ಪ್ರಾರ್ಥಿಸಿದರು.

ಉತ್ತರ ಪ್ರದೇಶದ ಪ್ರಯಾಗರಾಜ್‌ನ ತ್ರಿವೇಣಿ ಸಂಗಮದಿಂದ ತಂದಿರುವ ಪವಿತ್ರ ಗಂಗಾಜಲದಿಂದ ದೇವಸ್ಥಾನದಲ್ಲಿ ಪೂಜೆ ನೆರವೇರಿಸಿ ಅಲ್ಲಿಂದ ತರಲಾದ ವಿಶೇಷ ಪ್ರವಾದವನ್ನು ದೇವಸ್ಥಾನಕ್ಕೆ ಸಮರ್ಪಿಸಿದರು. ಬಳಿಕ ಭಕ್ತಿಯಿಂದ ಹೋಮ–ಹವನಗಳನ್ನು ನೆರವೇರಿಸಿದರು.

ಬಳಿಕ ಮಾತನಾಡಿದ ಶಾಸಕರು, ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಐತಿಹಾಸಿಕ ಮಹಾಕುಂಭ ಮೇಳದಲ್ಲಿ ಭಾಗವಹಿಸಿ ಗಂಗಾ, ಯಮುನಾ ಹಾಗೂ ಸರಸ್ವತಿ ನದಿಗಳು ಕೂಡುವ ತ್ರೀವೇಣಿ ಸಂಗಮದಲ್ಲಿ ಪವಿತ್ರಸ್ನಾನ ಮಾಡಿದ್ದು, ತ್ರಿವೇಣಿ ಸಂಗಮದಿಂದ ಪವಿತ್ರ ಗಂಗಾಜಲ ಮತ್ತು ವಿಶೇಷ ಪ್ರಸಾದವನ್ನು ತಂದಿದ್ದು, ದೇವರಿಗೆ ಸಮರ್ಪಿಸಿ ಪೂಜೆ ನೆರವೇರಿಸಿದ್ದೇನೆ. ನಾಡಿನ ಒಳಿತಿಗಾಗಿ, ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕುಗಳ ಸಮೃದ್ಧಿ, ಜನತೆಯ ಸುಖ, ಶಾಂತಿ, ನೆಮ್ಮದಿಗಾಗಿ ಪ್ರಾರ್ಥನೆ ಸಲ್ಲಿಸಿದ್ದೇನೆ ಎಂದು ಹೇಳಿದರು.

ಔರಾದನ ಆರಾಧ್ಯದೈವ, ಉದ್ಭವಲಿಂಗ ಅಮರೇಶ್ವರ ಜಾತ್ರೆ ಐತಿಹಾಸಿಕ ಜಾತ್ರೆಯಾಗಿದೆ. ಪುಣ್ಯಕ್ಷೇತ್ರವಾಗಿರುವ ಅಮರೇಶ್ವರ ದೇವಸ್ಥಾನ ಪುರಾತನ ಮತ್ತು ಐತಿಹಾಸಿಕ ಪ್ರಸಿದ್ದಿಯನ್ನು ಪಡೆದಿದೆ. ಇಲ್ಲಿ ಪ್ರತಿ ವರ್ಷದಂತೆ ಜಾತ್ರಾ ಮಹೋತ್ಸವ ಆರಂಭಗೊಂಡಿದ್ದು, ಈ ವರ್ಷವೂ ಅದ್ದೂರಿಯಾಗಿ ನಡೆಯಲಿದೆ. ಕರ್ನಾಟಕ ಸೇರಿದಂತೆ ತೆಲಂಗಾಣಾ, ಮಹಾರಾಷ್ಟ್ರದಿಂದ ಬಹಳಷ್ಟು ಭಕ್ತಾದಿಗಳು ಆಗಮಿಸುತ್ತಾರೆ. ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕುಗಳ ಅಸಂಖ್ಯಾತ ಭಕ್ತರು ಆಗಮಿಸಿ ಪುನೀತರಾಗುತ್ತಾರೆ.

ಜಾತ್ರೆಯಶಸ್ವಿಯಾಗಿ ನಡೆಸಲು ತಾಲ್ಲೂಕು ಆಡಳಿತದಿಂದ ಅಗತ್ಯ ತಯಾರಿಗಳನ್ನು ಮಾಡಿಕೊಳ್ಳಲಾಗಿದೆ. ಜಾತ್ರೆಯಲ್ಲಿ ಸಾರ್ವಜನಿಕರಿಗೆ ಯಾವುದೇ ರೀತಿಯ ಕೊರತೆಗಳಾಗದಂತೆ ವ್ಯವಸ್ಥೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಅಮರೇಶ್ವರರ ಮೊರೆಹೋಗುವ ಭಕ್ತರ ಎಲ್ಲ ಸಂಕಷ್ಟಗಳು ನಿವಾರಣೆಯಾಗುತ್ತವೆ. ಇಷ್ಟಾರ್ಥಗಳೆಲ್ಲ ಈಡೇರುತ್ತವೆ. ಹಾಗಾಗಿ ಜಾತ್ರಾ ಮಹೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನತೆ ಆಗಮಿಸಬೇಕೆಂದು ಶಾಸಕರು ಕೋರಿದ್ದಾರೆ.



ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಸರುಬಾಯಿ ಘೂಳೆ, ಮುಖಂಡರಾದ ರಾಮಶೆಟ್ಟಿ ಪನ್ನಾಳೆ, ಧೊಂಡಿಬಾ ನರೋಟೆ, ಮಾರುತಿ ಚವ್ಹಾಣ, ಶಿವರಾಜ ಅಲ್ಲಾಜೆ, ದಯಾನಂದ ಘೂಳೆ, ಸಂತೋಷ ಪೋಕಲವಾರ, ಕೇರಬಾ ಪವಾರ್, ಸಂಜು ವಡೆಯರ್, ಗುಂಡಪ್ಪ ಮುಧಾಳೆ, ಬಸವರಾಜ ಹಳ್ಳೆ, ಸಂದೀಪ ಪಾಟೀಲ, ಸಿದ್ರಾಮಪ್ಪ ನಿಡೋದೆ, ಜೈಪಾಲ ರಾಠೋಡ, ಡಾ.ಬಾಬುರಾವ ಔರಾದೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

ದೇವಸ್ಥಾನದ ಪೂಜಾರಿಗಳಾದ ರವೀಂದ್ರ ಸ್ವಾಮಿಯವರ ನೇತೃತ್ವದಲ್ಲಿ ಪೂಜೆ, ಅಭಿಷೇಕ, ಅರ್ಚನೆ ಮತ್ತು ಅಂತೇಶ್ವರ ಮಹಾರಾಜರ ನೇತೃತ್ವದಲ್ಲಿ ಹೋಮ–ಹವನಗಳನ್ನು ನಡೆದವು. ಬಳಿಕ ಶಾಸಕರು ದೇವಸ್ಥಾನದ ಆವರಣದಲ್ಲಿ ಪ್ರಸಾದ ವಿತರಣೆ ಸ್ಥಳಕ್ಕೆ ತೆರಳಿ ತಮ್ಮ ಕೈಯಿಂದ ಭಕ್ತಾದಿಗಳಿಗೆ ಪ್ರಸಾದ ವಿತರಿಸಿದರು.

## ಜಕನಾಳದಲ್ಲಿ ಪಡಿತರ ವಿತರಣೆ ಪರಿಶೀಲಿಸಿದ ಶಾಸಕ ಪ್ರಭು ಚವ್ಹಾಣ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಮಾಜಿ ಸಚಿವರು ಹಾಗೂ ಔರಾದ(ಬಿ)ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಮಂಗಳವಾರ ಜಕನಾಳ ಗ್ರಾಮಕ್ಕೆ ಭೇಟಿ ನೀಡಿ ಪಡಿತರ ವಿತರಣೆಯನ್ನು ಪರಿಶೀಲಿಸಿದರು. ಕಳೆದ ತಿಂಗಳು ಗ್ರಾಮ ಸಂಚಾರದ ಸಂದರ್ಭದಲ್ಲಿ ಶಾಸಕರು ಜಕನಾಳ ಗ್ರಾಮಕ್ಕೆ ಭೇಟಿ ನೀಡಿದ್ದಾಗ, ಪಡಿತರ ಪಡೆಯಲು ಬೇರೆ ಊರಿಗೆ ಹೋಗುವ ಪರಿಸ್ಥಿತಿಯಿದ್ದು, ಒಂದು ದಿನ ಹೆಬ್ಬೆಟ್ಟಿನ ಗುರುತು ನೀಡಲು ಹೋಗಬೇಕು. ಮತ್ತೊಮ್ಮೆ ಪಡಿತರ ಪಡೆಯಲು ಹೋಗಬೇಕು. ಪ್ರತಿ ತಿಂಗಳು 2-3 ದಿನ ಪಡಿತರಕ್ಕಾಗಿ ಅಲೆದಾಡಬೇಕಾಗುತ್ತಿದೆ ಎಂದು ಗ್ರಾಮಸ್ಥರು ಶಾಸಕರ ಎದುರು ಸಮಸ್ಯೆ ಹಂಚಿಕೊಂಡಿದ್ದರು.

ಈ ವೇಳೆ ಶಾಸಕರು ಕೂಡಲೇ ಸಮಸ್ಯೆ ಪರಿಹರಿಸುವಂತೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದರು. ಅದರಂತೆ ಜಕನಾಳ ಗ್ರಾಮದಲ್ಲಿ ಪಡಿತರ ವಿತರಣೆ-ಯಾಗುತ್ತಿದ್ದು, ಶಾಸಕರು ನ್ಯಾಯಬೆಲೆ ಅಂಗಡಿಗೆ ತೆರಳಿ ಪಡಿತರ ವಿತರಣೆಯನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರು ಶಾಸಕರಿಗೆ ಧನ್ಯವಾದ ಸಲ್ಲಿಸಿದರು.

ಶಾಸಕರು ಮಾತನಾಡಿ, ಗ್ರಾಮ ಸಂಚಾರದ ಸಂದರ್ಭದಲ್ಲಿ ಕೊಟ್ಟ ಮಾತಿನಂತೆ ಗ್ರಾಮದಲ್ಲಿ ಪಡಿತರ ವಿತರಿಸುವ ವ್ಯವಸ್ಥೆ ಮಾಡಿದ್ದೇನೆ. ಮುಂದೆ ಗ್ರಾಮದಲ್ಲಿ ನಿರಂತರವಾಗಿ ಪಡಿತರ ವಿತರಣೆಯಾಗಲಿದೆ. ಏನೆ ಸಮಸ್ಯೆಯಿದ್ದರೂ ನೇರವಾಗಿ ನನಗೆ ತಿಳಿಸಿದಲ್ಲಿ ಸರಿಪಡಿಸುತ್ತೇನೆ ಎಂದರು.

ಪಡಿತರ ನಿಯಮಿತವಾಗಿ ವಿತರಿಸಬೇಕು. ಯಾವುದೇ ರೀತಿಯ ಅಕ್ರಮ ಮತ್ತು ತಾರತಮ್ಯಗಳಿಗೆ ಆಸ್ಪದ ಇಲ್ಲದಂತೆ ಕೆಲಸ ಮಾಡಬೇಕು. ಬಡವರಿಂದ ಹಣ ವಸೂಲಿಯಂತಹ ದೂರುಗಳು ಬಂದರೆ ಸುಮ್ಮನಿರುವುದಿಲ್ಲವೆಂದು ನ್ಯಾಯಬೆಲೆ ಅಂಗಡಿಯವರಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ರಾಮಶೆಟ್ಟಿ ಪನ್ನಾಳೆ, ಶಿವರಾಜ ಅಲ್ಮಾಜೆ, ರಾವಸಾಬ್ ಪಾಟೀಲ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಗವಿಮಠದಲ್ಲಿ ಮಹಾಶಿವರಾತ್ರಿ ಹಬ್ಬದ ನಿಮಿತ್ತವಾಗಿ ಸಾಮೂಹಿಕ ಇಷ್ಟಲಿಂಗ ಪೂಜೆ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ಫೆ 27. ಪ್ರತಿವರ್ಷದಂತೆ ಈ ವರ್ಷವೂ ಕೂಡ ಇಲ್ಲಿನ ಇತಿಹಾಸ ಪ್ರಸಿದ್ಧ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಪೂಜ್ಯಶ್ರೀ ಷ. ಬ್ರ. ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ದಿವ್ಯಸಾನಿಧ್ಯದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್, ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ಮತ್ತು ಸಮಸ್ತ ಸದ್ಭಕ್ತರ ಸಹಯೋಗದಲ್ಲಿ ಮಹಾಶಿವರಾತ್ರಿ ನಿಮಿತ್ತ ಸಾಮೂಹಿಕ ಇಷ್ಟಲಿಂಗ ಪೂಜೆ ಜರುಗಿತು. ಈ ಸಂದರ್ಭದಲ್ಲಿ ಪೂಜ್ಯಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ ಮಹಾಶಿವರಾತ್ರಿಯು ಒಂದು ಪವಿತ್ರ ಹಾಗೂ ಶ್ರೇಷ್ಠ ದಿನ. ಆ ಮಹಾಶಿವನನ್ನು ನಾವು ಇಷ್ಟಲಿಂಗ ರೂಪದಲ್ಲಿ ನಿತ್ಯ ಪೂಜಿಸುತ್ತೇವೆ. ಇಂದು ಆ ಮಹಾ ಶಿವನು ಕೈಲಾಸದಿಂದ ಭೂಲೋಕಕ್ಕೆ ಬಂದು ತನ್ನನ್ನು ಪೂಜಿಸುವ ಭಕ್ತರಿಗೆ ಆಶೀರ್ವದಿಸುತ್ತಾನೆ ಎಂಬ ನಂಬಿಕೆಯಿಂದ ಇಂದು ಮಹಾ ಶಿವನಿಗೆ ವಿಶೇಷ ಪೂಜೆ ಗೈದು ಆರಾಧಿಸುವ ಪರಂಪರೆ ನಮ್ಮ ಭಾರತೀಯ ಧರ್ಮ ಹಾಗೂ ಸಂಸ್ಕೃತಿ. ಹೀಗಾಗಿ ಪ್ರತಿವರ್ಷ ನಾವು ಹಾಗೂ ಭಕ್ತರು ಸೇರಿ ನಮ್ಮ ಗವಿಮಠದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ ನೆರವೇರಿಸುತ್ತಿದ್ದೇವೆ. ನಿತ್ಯ ಇಷ್ಟಲಿಂಗ ಪೂಜೆ ಮಾಡುವುದರ ಮೂಲಕ ಆ ಮಹಾ ಶಿವನ ಕೃಪೆ ಸದಾ ನಿಮ್ಮೆಲ್ಲರಿಗೆ ದೊ-ರೆಯಲಿ ಎಂದು ಭಕ್ತರಿಗೆ ಆಶೀರ್ವದಿಸಿದರು. ಪುಣ್ಯಕೋಟಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಸೂರ್ಯಕಾಂತ ಶೀಲವಂತ ಮಾತನಾಡಿ ಮಹಾ ಶಿವನ ಸ್ವರೂಪವಾದ ಇಷ್ಟಲಿಂಗವನ್ನು ಗುರು, ಲಿಂಗ, ಜಂಗಮ ಎಂದು ಪೂಜಿಸುವುದು ನಮ್ಮ ಧರ್ಮದ ವೈಶಿಷ್ಟತೆ. ಹಾಗೇ ಗವಿಮಠದ ಪೂಜ್ಯರು ಪ್ರತಿವರ್ಷ ನಮಗೆ ಮಹಾಶಿವರಾತ್ರಿ ಪವಿತ್ರ ದಿನದಂದು ಇಷ್ಟಲಿಂಗ ಪೂಜೆ ಮಾಡಿಸುವುದರ ಮೂಲಕ ಧರ್ಮ ಸಂಸ್ಕಾರ ಕೊಟ್ಟು ಪುಣ್ಯ ಸಂಪಾದನೆಗೆ ಅವಕಾಶ ಕಲ್ಪಿಸಿದ್ದು ನಮ್ಮೆಲ್ಲ ಸದ್ಭಕ್ತರ ಭಾಗ್ಯ ಎಂದು ಕೃತಜ್ಞತೆ ನುಡಿಗಳನ್ನಾಡಿದರು. ಈ ಸಂದರ್ಭದಲ್ಲಿ ಅಪಾರ ಸದ್ಭಕ್ತರು ಪಾಲ್ಗೊಂಡು ಇಷ್ಟಲಿಂಗ ಪೂಜೆ ಗೈದು ಗುರುಗಳ ದರ್ಶನ ಮಾಡಿ ಆಶೀರ್ವಾದ ಪಡೆದು ಹಣ್ಣು ಹಾಗೂ ಪಾಯಸ ಪ್ರಸಾದ ಸ್ವೀಕರಿಸಿ ಧನ್ಯರಾದರು. ವೇ.ನೀಲಕಂಠಯ್ಯ ಮಠ ಮಂಠಾಳ ಪುರೋಹಿತ ಕಾರ್ಯ ಮಾಡಿದರು. ಅದಕ್ಕೂ ಮುಂಚೆ ಪೂಜ್ಯ ಶ್ರೀ ಡಾ.ಅಭಿನವ ಘನಲಿಂಗ ಗುರುಗಳು ಭಕ್ತರಿಗೆ ಇಷ್ಟಲಿಂಗ ದೀಕ್ಷೆ ಕರುಣಿಸಿದರು.

## ಕಠಿಣ ಪರಿಶ್ರಮದಿಂದ ಜೀವನದ ಗುರಿ ತಲುಪಿ-ರಾಜೋಳೆ




ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ವಿದ್ಯಾರ್ಥಿಗಳು ನಿಷ್ಠೆ,ಶ್ರದ್ಧೆ,ಏಕಾಗ್ರತೆಯಿಂದ ಅಧ್ಯಯನಗೈದು ತಮ್ಮ ಜೀವನದ ಗುರಿ ತಲುಪಬೇಕು ಎಂದು ನಿವೃತ್ತ ಪ್ರಾಚಾರ್ಯ ಅಶೋಕ ರಾಜೋಳೆ ಕರೆ ನೀಡಿದರು.

ಪಟ್ಟಣದ ಶಿವಾಜಿ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡ 2024-25ನೇ ಸಾಲಿನ ದ್ವಿತೀಯ ಪಿಯು ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಛತ್ರಪತಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ವಿದ್ಯೆ,ಧನ ಮತ್ತು ಬಲ ಈ ಮೂರು ಅಸ್ತ್ರಗಳ ಮೂಲಕ ಬೇಕಾದನ್ನು ಸಾಧಿಸಲು ಸಾಧ್ಯವಿದೆ.ಬದುಕಿನ ಯಶಸ್ವಿಗೆ ಸಪ್ತಮಾರ್ಗೋಪಾಯಗಳಾದ ಬೆಳಿಗ್ಗೆ ಬೇಗ ಏಳುವುದು,ಕಡಿಮೆ ಮಾತನಾಡುವುದು,ಸಮತೋಲಿತ ಆಹಾರ ಸೇವಿಸುವುದು,ಮಾಡುವ ಕಾರ್ಯದಲ್ಲಿ ಏಕಾಗ್ರತೆ ಕಾಪಾಡಿಕೊಳ್ಳುವುದು,ತಾಳ್ಮೆ ಶಕ್ತಿ ಬೆಳೆಸಿಕೊಳ್ಳುವುದು,ಕೋಪ-ತಾಪಗಳಿಗೆ ಕಡಿವಾಣ ಹಾಕುವುದು ಮತ್ತು ಪ್ರತಿನಿತ್ಯ ಸರಳ ವ್ಯಾಯಾಮ,ಯೋಗ ಹಾಗೂ ಧ್ಯಾನ ಅನುಸರಿಸಿದರೆ ಆದರ್ಶ ನಾಗರಿಕರಾಗಿ ಬಾಳಬಹುದು.ಪಿಯು ಶಿಕ್ಷಣ ವಿದ್ಯಾರ್ಥಿ ಜೀವನದ ಪ್ರಮುಖ ಘಟ್ಟವಾಗಿರುವುದರಿಂದ ಅದರಲ್ಲಿ ಯಶಸ್ಸು ಸಾಧಿಸಿದರೆ ಭವಿಷ್ಯದ ಶಿಕ್ಷಣ ಸುಲಭವಾಗಿ ಗಿಟ್ಟಿಸಿಕೊಳ್ಳಬಹುದು ಎಂದು ಹೇಳಿ,ಪ್ರಾಚಾರ್ಯ ಚಂದ್ರಕಾಂತ ಬಿರಾದಾರ ಅವರ ನೇತೃತ್ವದಲ್ಲಿ ಪ್ರತಿ ವರ್ಷ ಶಿವಾಜಿ ಕಾಲೇಜಿನ ಪಿಯು ಫಲಿತಾಂಶ ಸುಧಾರಣೆಯಾಗುತ್ತಿರುವುದು ಸಂತಸದ ಸಂಗತಿಯಾಗಿದೆ ಎಂದರು.

ಅಧ್ಯಕ್ಷತೆವಹಿಸಿ ಮಾತನಾಡಿದ ಪ್ರಾಚಾರ್ಯ ಚಂದ್ರಕಾಂತ ಬಿರಾದಾರ,ನಮ್ಮ ಶಿವಾಜಿ ಕಾಲೇಜಿನಲ್ಲಿ ಶಿ.ಪ್ರ.ಮಂಡಳದ ಅಧ್ಯಕ್ಷ ಅನೀಲಕುಮಾರ ಶಿಂದೆ ಅವರ ಮಾರ್ಗದರ್ಶನದಲ್ಲಿ ಗ್ರಾಮೀಣ ಭಾಗದ ಬಡ ರೈತಾಪಿ ಕುಟುಂಬದ ಮಕ್ಕಳಿಗೆ ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ ಎಂದರು.

ಶಿವಾಜಿ ಪದವಿ ಕಾಲೇಜಿನ ಪ್ರಾಚಾರ್ಯ ನೀಲಕಂಠ ಕಾಳೆ ಮಾತನಾಡಿ,ನಿಮ್ಮ ಗುರಿ ತಲುಪಲು ಗುರುವಿನ ಮಾರ್ಗದರ್ಶನ ಅಗತ್ಯ ಎಂದರು.

ಶಿವಾಜಿ ಪ್ರೌಢಶಲೆಯ ಮುಖ್ಯಗುರು ಮಾಧವರಾವ ಶಿಂದೆ ಮಾತನಾಡಿ,ವಿದ್ಯಾರ್ಥಿಗಳು ದುಶ್ಚಟ,ದುರ್ಗುಣಗಳಿಂದ ದೂರ ಉಳಿದರೆ ಮಾತ್ರ ಪಾಲಕರ ಆಸೆ ಈಡೇರಿಸಬಹುದು ಎಂದು ಹೇಳಿದರು.

ವಿದ್ಯಾರ್ಥಿನಿಯರಾದ ಆಶಾ,ಸುಲೋಚನಾ,ರಂಜಾನಾ ತಮ್ಮ 2 ವರ್ಷದ ಅನುಭವ ಹಂಚಿಕೊಂಡರು.

ಕೆ.ಎಚ್.ದೇಶಪಾಂಡೆ,ಆರ್.ಎವ್.ಬಿರಾದಾರ,ಡಿ.ಜಿ.ಬಿರಾದಾರ,ಜಿ.ಟಿ.ಜಾಧವ',ಪ್ರಣೀತಾ ಠಿಗಳೆ,ಪೂಜಾ ಸುನೀಲಕುಮಾರ,ಬಾಲಾಜಿ ಬಾಚಿಪಳ್ಳೆ,ಸಂಜೀವಕುಮಾರ ಬಿರಾದಾರ,ಧೋಂಡಿಬಾ ಬಿರಾದಾರ,ಸಂದೀಪ ಫುಲೆ',ಎಚ್.ಜಿ.ಬಿರಾದಾರ,ಜಿ.ವಿ.ಬಿರಾದಾರ,ಪಿ.ಡಿ.ಮಾನಕರ್,ಪಿ.ಎನ್.ಸೂರ್ಯವಂಶಿ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಆರತಿ ಪಾತ್ರೆ ಸ್ವಾಗತಿಸಿದರು. ಅರ್ಚನಾ ಸಾಳುಂಕೆ ನಿರೂಪಿಸಿದರು.ನಾಗೇಶ್ವರಿ ಜಗತಾಪ ವಂದಿಸಿದರು.

ಸದ್ಗುರು ಲಿಂ. ಚನ್ನಬಸವ ಶಿವಯೋಗಿಗಳ 173ನೇ ಜಯಂತಿ ಮಹೋತ್ಸವ ನಿಮಿತ್ಯ

## ಗ್ರಾಮದಲ್ಲಿ ಶಿವಯೋಗಿಗಳ ಭಾವಚಿತ್ರ ಪ್ರದಕ್ಷಣೆ



ಮಲ್ಲಮ್ಮ ನುಡಿ ವಾರ್ತೆ.

ಬಸಕಲ್ಯಾಣ :- ಫೆ 27. ತಾಲೂಕಿನ ಸುಕ್ಷೇತ್ರ ಹಾರಕೂಡ ಗ್ರಾಮದಲ್ಲಿ ಲಿಂಗೈಕ್ಯ ಸದ್ಗುರು ಚನ್ನಬಸವ ಶಿವಯೋಗಿಗಳ 173ನೇ ಜಯಂತಿ ಮಹೋತ್ಸವದ ನಿಮಿತ್ತ ಪೂಜ್ಯಶ್ರೀ ಮಲ್ಲಿನಾಥ ಹಿರೇಮಠ ಹಾರಕೂಡ ಇವರ ನೇತೃತ್ವದಲ್ಲಿ ಗುರುವಾರ ಶಿವರಾತ್ರಿ ಅಮಾವಾಸ್ಯೆ ಶುಭದಿನದಂದು ಸದ್ಗುರು ಲಿಂಗೈಕ್ಯ ಚನ್ನಬಸವ ಶಿವಯೋಗಿಗಳ ಭಾವಚಿತ್ರ ಮೆರವಣಿಗೆ ಜರಗಿತು. ಈ ಸಂದರ್ಭದಲ್ಲಿ

ಶ್ರೀ ಚನ್ನಬಸವೇಶ್ವರ ಭಜನಾ ಸಂಘ ಹಾರಕೂಡ ಸೇರಿದಂತೆ ಗ್ರಾಮದ ಅನೇಕ ಭಕ್ತರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

## ಹೇಮರೆಡ್ಡಿ ಮಲ್ಲಮ್ಮ ಮಂದಿರದಲ್ಲಿ ಶಿವಾರಾಧನೆ



ಮಹಾಶಿವರಾತ್ರಿ ನಿಮಿತ್ತ ಬೀದರನ ಹೇಮರೆಡ್ಡಿ ಮಲ್ಲಮ್ಮ ಮಂದಿರದಲ್ಲಿ ಭಜನೆ ಕಾರ್ಯಕ್ರಮ ನಡೆಯಿತು.

ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 27 :- ಇಲ್ಲಿಯ ಅಮಲಾಪುರ ರಸ್ತೆಯಲ್ಲಿ ಇರುವ ಹೇಮರೆಡ್ಡಿ ಮಲ್ಲಮ್ಮ ಮಂದಿರದಲ್ಲಿ ಮಹಾ ಶಿವರಾತ್ರಿ ನಿಮಿತ್ತ ಬುಧವಾರ ಭಜನೆ, ಕೀರ್ತನೆ ಹಾಗೂ ಶಿವಾರಾಧನೆ ಕಾರ್ಯಕ್ರಮ ನಡೆಯಿತು.

ಸಮಾಜದ ಜನರು ಶ್ರದ್ಧೆ, ಭಕ್ತಿಯಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಜಿಲ್ಲಾ ರೆಡ್ಡಿ ಸಮಾಜದ ಅಧ್ಯಕ್ಷ ಶಂಕರ ರೆಡ್ಡಿ ಚಿಟ್ಟಾ, ಪದಾಧಿಕಾರಿಗಳು ಹಾಗೂ ಪ್ರಮುಖರು ಇದ್ದರು.

## ಪ್ರಜ್ಞಾ ಕಿರಿಯ ಪ್ರಾಥಮಿಕ ಶಾಲೆ ಗಂಗನಾಳ ದಶಮಾನೋತ್ಸವ



ಮಲ್ಲಮ್ಮ ನುಡಿ ವಾರ್ತೆ.

ಶಾಹಪುರ ಪ್ರಗ್ನೆಕ್ರಿಯ ಪ್ರಾಥಮಿಕ ಶಾಲೆ ಗಂಗನಾಳ ದಶಮಾನೋತ್ಸವ ಹಾಗೂ ಸಾಂಸ್ಕೃತಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಖಾಸಗಿ ಶಾಲೆಗಳು ಒಕ್ಕೂಟದ ಅಧ್ಯಕ್ಷರು ಆರ್ ಚನ್ನಬಸು ವನದುರ್ಗ ಹಳ್ಳಿಯ ಪ್ರತಿಭೆ ಶಾಶ್ವತವಾಗಿ ಉಳಿಯಲಿ

ಗ್ರಾಮೀಣ ಭಾಗದಲ್ಲಿ ಶಾಲೆ ನಡೆಸುವುದು ಬಹಳ ಕಷ್ಟ ಅಂತದರಲ್ಲಿ ಒಳ್ಳೆ ಶಿಕ್ಷಣವನ್ನು ಕೊಟ್ಟು ಇಂಥ ಪ್ರತಿಭೆಯನ್ನು ಮಾಡಿಸುವುದು ಒಳ್ಳೆಯ ಬೆಳವಣಿಗೆ ಎಷ್ಟೇ ತೊಂದರೆಗಳನ್ನು ಬಂದರು ಕೂಡ ಶಿಕ್ಷಣ ಕೊಡುವುದರಲ್ಲಿ ಸತತ ಪ್ರಯತ್ನವನ್ನು ಪಡುತ್ತಿರುವ ಬಡತನದಲ್ಲಿ ಕಷ್ಟಗಳು ಎದುರಿಸಿ ಬಂದಿರುವ ಹೊನ್ನಪ್ಪ ಗಂಗನಾಳ ಅವರಿಗೆ ಅಭಿನಂದನೆಗಳು ಈ ಪ್ರಯತ್ನ ನಿರಂತರವಾಗಿರಲಿ ಎಂದರು

ಸಭೆಯ ಅಧ್ಯಕ್ಷತೆಯನ್ನು ಸಿದ್ದಣ್ಣ ಕಿಲಾರಿ ಮುಖ್ಯ ಅತಿಥಿಗಳಾಗಿ ನಾರಾಯಣ ಸರ್ ಸಗರ್ ಚಂದ್ರನಾಥ್ (ಅ.ವಿ) ಪಿಎಸ್ಐ ಗೋಗಿ ಪ್ರಾಸ್ತಾವಿಕವಾಗಿ ಹೊನ್ನಪ್ಪ ಗಂಗನಾಳ ಅತಿಥಿಗಳಾಗಿ ತಿಪ್ಪಮ್ಮ ಗಂಡ ಸಕ್ರೆಪ್ಪ ಸಗರ್ ಗ್ರಾಮ ಪಂಚಾಯತ್ ಅಧ್ಯಕ್ಷರು ನಾಗನಟಿಗಿ ಧರ್ಮರಾಜ ಸಿ ಆರ್ ಪಿ ನಾಗನಟಿಗಿ ರಾಮು ಜಿ ಸಗರ್ ಹರಿಲಾಲ್ ರಾಠೋಡ್ ಮಲ್ಲಪ್ಪ ಕವಲಿ ನಿರೂಪಣೆ ಹನುಮಂತ ವಟ್ಟಿ ಸ್ವಾಗತ ನೀಲಮ್ಮ ಎಂ ಅಂಗಡಿ ವಂದನಾರ್ಪಣೆ ಮಾಯಮ್ಮ ಎಂ ಅರಿಕೇರಿ ಮಾಡಿದರು.

## ಇಷ್ಟಲಿಂಗ ಪೂಜೆಯಿಂದ ಮಾನಸಿಕ ನೆಮ್ಮದಿಯೊಂದಿಗೆ ಏಕಾಗ್ರತೆ ಮೂಡುತ್ತದೆ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ಫೆ 27. ಇಷ್ಟಲಿಂಗ ಪೂಜೆಯಿಂದ ಮಾನಸಿಕ ನೆಮ್ಮದಿಯೊಂದಿಗೆ ಏಕಾಗ್ರತೆ ಮೂಡುತ್ತದೆ ಎಂದು ಅನುಭವ ಮಂಟಪ ಸಂಚಾಲಕರಾದ ಪೂಜ್ಯ ಶ್ರೀ ಶಿವಾನಂದ ದೇವರು ತಿಳಿಸಿದರು. ಇಲ್ಲಿನ ಅನುಭವ ಮಂಟಪದಲ್ಲಿ ಸರ್ವ ಶಿವಶರಣರ ಸ್ಮರಣೋತ್ಸವ ಹಾಗೂ ಮಹಾಶಿವರಾತ್ರಿ ನಿಮಿತ್ತ ಸಾಮೂಹಿಕ ಇಷ್ಟಲಿಂಗ ಪೂಜೆ ಸಮಾರಂಭದಲ್ಲಿ ಇಷ್ಟಲಿಂಗದ ಮಹತ್ವದ ಕುರಿತು ತಿಳಿಸಿದ ಅವರು ಬಸವಾದಿ ಶಿವಶರಣರು ಇಷ್ಟಲಿಂಗಕೆ ಬಹಳ ಮಹತ್ವ ನೀಡಿದವರಾಗಿದರು ಇದು ವೈಜ್ಞಾನಿಕ ದೃಷ್ಟಿಕೋನದಿಂದ ಸಹ ಮಹತ್ವ ಪಡೆದಿದೆ ಎಂದರು. ಅನೇಕ ಬಸವಾಭಿಮಾನಿಗಳು ಭಾಗವಹಿಸಿದ್ದರು. ಬಸವ ಪ್ರಾರ್ಥನೆಯನ್ನು ಸಂಗೀತ ಕಲಾವಿದರಾದ ರಾಜಕುಮಾರ ಹೂಗಾರ. ಭಕ್ತಿ ದಾಸೋಹವನ್ನು ವಿರೇಶ ಕುಂಬಾರ್ ಸಲ್ಲಿಸಿದರು.

# ಸಂತಾನ ಭಾಗ್ಯ ಕರುಣಿಸುವ ಕಾಮಧೇನು ಉದ್ಭವಲಿಂಗ ಅಮರೇಶ್ವರ



(ಶಿವಕುಮಾರ ಬಿರಾದಾರ)

ಔರಾದ :ಫೆ.27: ಕರ್ನಾಟಕದ ಕಿರೀಟ ಬೀದರ್ ಜಿಲ್ಲೆಯ ಸುಕ್ಷೇತ್ರ ಔರಾದ ಶ್ರೀ ಉದ್ಭವಲಿಂಗ ಅಮರೇಶ್ವರ ದೇವರ ಆಶೀರ್ವಾದಿಂದ ಮಾನವ ಮಹಾಂತನಾಗುತ್ತಾನೆ. ಅಮರೇಶ್ವರರ ದರ್ಶನದಿಂದ ಜಗದ ಜನರ ದುಃಖ ದೂರವಾಗುತ್ತದೆ. ಪ್ರತಿ ವರ್ಷದ ಶಿವರಾತ್ರಿಯಲ್ಲಿ ನಡೆಯುವ ಅಮರೇಶ್ವರ ಜಾತ್ರೆಯಲ್ಲಿ ಭಕ್ತರು, ದರ್ಶನ ಪಡೆದು ಪುನೀತರಾಗುತ್ತಾರೆ. ಬೇಡಿಕೊಂಡ ವರವನ್ನು ಅಮರೇಶ್ವರ ಕುಣಿಸುತ್ತಾನೆ ಶ್ರೀ ಅಮರೇಶ್ವರರು ಬೇಡಿದ ವರ ನೀಡುವ ಕಲ್ಪತರು ಎಂಬ ಅಘಾದ ನಂಬಿಕೆ ಭಕ್ತಾದಿಗಳಲ್ಲಿದೆ. ಔರಾದ್ ಪಟ್ಟಣವು ಭಕ್ತರನ್ನು ಸೆಳೆಯುವ ಪ್ರಸಿದ್ಧ ಧಾರ್ಮಿಕ ಕೇಂದ್ರವಾಗಿದೆ, ಜಾತ್ರಾ ಮಹೋತ್ಸವದಲ್ಲಿ ನೆರೆಯ ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ ರಾಜ್ಯದ ಸಾವಿರಾರು ಭಕ್ತರು ಸೇರುವುದೇ ಇದಕ್ಕೆಲ್ಲ ಸಾಕ್ಷಿ, ಸತತ ಐದು ದಿನಗಳ ಕಾಲ ನಡೆಯುವ ಪಲ್ಲಕ್ಕಿ ಹಾಗೂ ಉತ್ಸವ ಮೂರ್ತಿ ಮೆರವಣಿಗೆ ನೋಡಲು ಎರಡು ಕಣ್ಣು ಸಾಲದು, ಪಟ್ಟಣದ ಪೊಲೀಸ್ ಠಾಣೆ ಪಕ್ಕದಲ್ಲಿರುವ ಅಮರೇಶ್ವರ ಅಗ್ನಿಕುಂಡ ಹಾಯ್ದು ಭಕ್ತರು ಭಕ್ತಿ ಸಮರ್ಪಣೆ ಮಾಡುತ್ತಾರೆ.

## ಔರಾದ್ ತಾಲೂಕಿನ ವಿಶೇಷತೆ :



ಹಳೆಯಮತ್ತುಹೊಸಶಿಲಾಯುಗದಲ್ಲಿ ಔರಾದ್ ತಾಲೂಕು ಪ್ರದೇಶ ಜನರಿಂದ ವಾಸಿಸಲ್ಪಡುತ್ತಿತ್ತು ಎನ್ನುವುದು ಸಂಶೋಧನೆಗಳಿಂದ ತಿಳಿದುಬಂದಿದೆ. ತಾಲೂಕಿನ ಕೌಡಗಾಂವ್, ವನಮಾರಪಳ್ಳಿ, ಏಕಲಾರ್, ಶೆಂಬೆಳ್ಳಿ, ಬೆಳಕುಣಿ, ನಾಗೂರ್ ಸೇರಿದಂತೆ ಅನೇಕ ಹಳ್ಳಿಗಳಲ್ಲಿ ಹಳೆಯ ಶಿಲಾಯುಗದ ಕಲ್ಲಿನ ಆಯುಧಗಳು, ಮಡಿಕೆಗಳು ದೊರೆತಿವೆ. ಆಹಾರದ ಬೇಟೆಗಾಗಿ ಆಗ ಮನುಷ್ಯ ಆಯುಧಗಳನ್ನು ಉಪಯೋಗಿಸುತ್ತಿದ್ದುದು ಹಾಗೂ ಅವುಗಳ ಸಂಗ್ರಹಣೆ ಮತ್ತು ನಿರ್ವಹಣೆಗಾಗಿ ಮಡಿಕೆಗಳನ್ನು ಬಳಸಿರುತ್ತಾನೆ. ಹೀಗಾಗಿ ಈ ಭಾಗದಲ್ಲಿ ದೊರೆತ ಮಡಿಕೆಗಳ ತುಂಡುಗಳು ಶಿಲಾಯುಗದ ಅವಶೇಷಗಳೆಂದು ಸಂಶೋಧಕರಾದ ಡಾ.ಎಲ್.ಆರ್. ಕುಲಕರ್ಣಿ ಧೃಢಪಡಿಸಿರುತ್ತಾರೆ.

## ಅಮರೇಶ್ವರ ಇತಿಹಾಸ

ವಿಜ್ಞಾನಕ್ಕೆ ಸವಸಲೆಸೆಯುವ ಶ್ರೀ ಅಮರೇಶ್ವರ ಗರ್ಭಗುಡಿಯಲ್ಲಿನ ಹುತ್ತದ ಆಕಾರದ ಉದ್ಭವಲಿಂಗದ ನೀರಿನ ಮೂಲ ಹುಡುಕಲು ಯಾರಿಗೂ ಸಾಧ್ಯವಾಗಿಲ್ಲ ಇಂತಹ ಪವಾಡ ಪುರುಷ ಸಂತ ಉದ್ಭವಲಿಂಗ ಶ್ರೀ ಅಮರೇಶ್ವರ ಜಾತ್ರೆಯಲ್ಲಿನ ಸಾಂಸ್ಕೃತಿಕ ವೈಭವದ ಮೆರುಗುವ ಪಟ್ಟಣದ ಖ್ಯಾತಿಯನ್ನು ಶಿಖರಕ್ಕೆ ಎರಿದೆ

ಓಂ ಭಲಾ ಶಂಕರ ಭಲಾ ಜೈ ಘೋಶದೊಂದಿಗೆ ಅಗ್ನಿ ತುಳಿದು ಭಕ್ತಿ ಸಮರ್ಪಣೆ

ಅಮರೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಮಹಾಶಿವರಾತ್ರಿ ಆದ ನಸುಕಿನ ಜಾವ ಭಕ್ತರು ಅಗ್ನಿಕುಂಡ ಹಾಯ್ದು ಭಕ್ತಿ ಸಮರ್ಪಣೆ ಮಾಡುತ್ತಾರೆ. ಅಗ್ನಿ ತುಳಿದರೆ ಭಕ್ತರ ಕಷ್ಟ ದೂರ ಆಗುತ್ತೆ, ಜೀವನದ ಪಾಪ ಪರಿಹಾರವಾಗುತ್ತದೆ ಎಂಬ ನಂಬಿಕೆ ಭಕ್ತರದಾಗಿದೆ. ಆದಕಾರಣ ಅಗ್ನಿ ತುಳಿಯಲು ಭಕ್ತ ಸಾಗರವೆ ಹರಿದು ಬರುತ್ತದೆ.

ದಟ್ಟ ಕಾನನದಲ್ಲಿ ಉದ್ಭವಲಿಂಗ ಅಮರೇಶ್ವರ ಪ್ರತ್ಕೆಕ್ಷ.

ಪ್ರಸ್ತುತ ಪಟ್ಟಣದ ಹೃದಯಭಾಗದಲ್ಲಿರುವ ದೇವಸ್ಥಾನದ ಸ್ಥಳದಲ್ಲಿ ಈ ಹಿಂದೆ ದಟ್ಟವಾದ ಅರಣ್ಯವಿತ್ತು. ಅಲ್ಲಿ ಒಂದು ದೊಡ್ಡದಾದ ಹುತ್ತು ನಿರ್ಮಾಣವಾಗಿದ್ದು, ಅಲ್ಲಿಗೆ ಪ್ರತಿನಿತ್ಯ ಗೋವು ಆಗಮಿಸಿ ಕಾಡಿನಲ್ಲಿರುವ ಹುತ್ತಕ್ಕೆ ಹಾಲೆರೆಯುವುದು, ಆ ಹುತ್ತದಲ್ಲಿ ಅಮರೇಶ್ವರರು ತಪಸ್ಸು ಕುಳಿತಿರುವುದು, ಅದನ್ನು ಕಂಡ ಜನರು ನಿತ್ಯವೂ ಗೋವು ಹಾಲೆರೆಯುವುದಾದರೂ ಯಾರಿಗೆ ಎಂದು ಕುತೂಹಲದಿಂದ ಹುತ್ತದಲ್ಲಿರುವುದಾದರೂ ಏನೆಂದು ಗುದ್ದಲಿ, ಸಲಾಕೆಯಿಂದ ಹುತ್ತಕ್ಕೆ ಹೊಡೆಯಲು, ಒಳಗಿಂದ ಅಶರೀರ ವಾಣಿಯೊಂದು ಮಾರ್ಧ್ವನಿಸಿ ನಾನು ಅಮರೇಶ್ವರನಿದ್ದಿನಿ ಎಂಬ ಮಾತು ಕೇಳಬಂದಿತಂತೆ...

ಅದನ್ನು ಕೇಳಿದ ಜನರು ಅಶರೀರ ವಾಣಿ ದೇವವಾಣಿಯಾಗಿದೆ ಇಂದಿನಿಂದ ಈ ಗ್ರಾಮದಲ್ಲಿ ಅಮರೇಶ್ವರನ ಪೂಜೆ ಪುನಸ್ಕಾರಗಳು ಆರಂಭವಾಗಲಿ ಎಂಬ ನಿರ್ಧಾರವಾಗಿ ನಿಧಾನವಾಗಿ ಅಲ್ಲಿಂದ ಅಮರೇಶ್ವರಲಿಂಗಕ್ಕೆ ನಿತ್ಯವೂ ಜನರು ಪೂಜೆಗೈಯ್ಯಲು ಆರಂಭಿಸಿದ್ದು, ಪ್ರಸ್ತುತ ಕಲ್ಯಾಣ ಕರ್ನಾಟಕ ಭಾಗದ ಬಹುದೊಡ್ಡ ಜಾತ್ರೆಯಾಗಿ ಮಾರ್ಪಟ್ಟಿದೆ ಎನ್ನುವುದು ನಾವುಗಳು ಕಾಣಬಹುದಾಗಿದೆ.ಅಲ್ಲಿಂದ ಗ್ರಾಮದ ಜನರೆಲ್ಲರೂ ಸೇರಿ ಅಶರೀರ ವಾಣಿಯೊಂದು ಕೇಳಿ ಬಂದಿರುವುದು ನಮ್ಮ ಗ್ರಾಮ ದೇವತೆ ಅಮರೇಶ್ವರರದ್ದು, ಈಶ್ವರನ ಪ್ರತೀಕವಾದ ಉದ್ಭವಲಿಂಗ ಅಮರೇಶ್ವರ ಜಾತ್ರೆಯು ಮಹಾಶಿವರಾತ್ರಿಯಂದು



ಅದ್ಧೂರಿಯಾಗಿ ಎಲ್ಲರೂ ಸೇರಿ ಆಚರಿಸುವುದು ಇಂದಿಗೂ ಬೆಳೆದು ಬಂದಿದೆ.

## ಭಕ್ತ ಸಾಗರದ ಮಧ್ಯೆ ವಿಜ್ರಂಭಣೆಯ ರಥೋತ್ಸವ

ಮಹಾಶಿವರಾತ್ರಿ ನಿಮಿತ್ತ ನಡೆಯುವ ಐದು ದಿನಗಳ ಕಾಲ ನಡೆಯುವ ಐತಿಹಾಸಿಕ ಪರಂಪರೆಯ ಶ್ರೀ ಉದ್ಭವಲಿಂಗ ಅಮರೇಶ್ವರ ಜಾತ್ರಾ ಮಹೋತ್ಸವದ ಐದನೇ ದಿನ ಸಾವಿರಾರು ಭಕ್ತ ಸಾಗರದ ಮಧ್ಯೆ ವೈಭವದ ರಥೋತ್ಸವ ಜರುಗುತ್ತದೆ. ಅಮರೇಶ್ವರ ರಥಕ್ಕೆ ಭಕ್ತರು ವಿವಿಧ ಪುಷ್ಪಗಳಿಂದ ಅಲಂಕಾರ ಮಾಡಿ ಐದನೇ ದಿನದ ಮೆರವಣಿಗೆ ನಂತರ ಉತ್ಸವ ಮೂರ್ತಿಯನ್ನು ತೇರಿನಲ್ಲಿ ಸ್ಥಾಪನೆ ಮಾಡಿ ಪೊಲೀಸ್ ಠಾಣೆ ಪಕ್ಕದಲ್ಲಿರುವ ಅಗ್ನಿಕುಂಡಕ್ಕೆ ತಲುಪುತ್ತದೆ. ಅಲ್ಲಿಯ ಅಗ್ನಿ ಬಸವಣ್ಣನಿಗೆ ವಿಶೇಷ ಪೂಜೆ ಸಲ್ಲಿಸಿ ಮರಳಿ ದೇವಸ್ಥಾನ ತಲುಪುತ್ತದೆ. ರಥೋತ್ಸವ ಸಮಯದಲ್ಲಿ ಭಕ್ತರು ಭೆಂಡು ಬತಾಸೆ ಅರ್ಪಣೆ ಮಾಡುತ್ತಾರೆ, ಎಲ್ಲೆಡೆ ಓಂ ಭಲಾ ಶಂಕರ ಭಲಾ ಜೈಘೋಶ್ ಮುಗಿಲು ಮುಟ್ಟುತ್ತದೆ. ರಥೋತ್ಸವ ನಡೆಯುವ ದಾರಿಯುದ್ದಕ್ಕೂ ವಿವಿಧೆಡೆಯಿಂದ ಆಗಮಿಸಿದ ವಾದ್ಯ ತಂಡಗಳು, ಭಜನೆ ಕಿರ್ತನೆಗಳು, ಡಿಜೆ ಕುಣಿತ, ನಂದಿಕೋಲು, ಸಾಂಸ್ಕೃತಿಕ ಕಲಾ ತಂಡಗಳು ರಥೋತ್ಸವಕ್ಕೆ ಮೆರಗು ನೀಡುತ್ತವೆ.

## ಕಾಶಿ ಮಾದರಿಯ ಉದ್ಭವಲಿಂಗ



ಇಲ್ಲಿನ ಅಮರೇಶ್ವರ ದೇಗುಲ 10 ನೇ ಶತಮಾನದಲ್ಲಿ ನಿರ್ಮಿಸಲಾಗಿದೆ ಎಂದು ಇತಿಹಾಸದ ಮೂಲಕ ತಿಳಿದು ಬಂದಿದೆ. ಈ ದೇವಾಲಯದಲ್ಲಿ 11ನೇ ಶತಮಾನದ ಚಾಲುಕ್ಯರ ಕಾಲದ ಕನ್ನಡ ಮತ್ತು ಉರ್ದು ಭಾಷೆಯ ಶಾಸನಗಳು ದೊರೆತಿವೆ. ಹೀಗಾಗಿ ಇದು ಧಾರ್ಮಿಕ ಸಮನ್ವಯದ ಪ್ರತೀಕವಾಗಿದೆ ಎಂದು ಶಾಸನದಿಂದ ತಿಳಿದು ಬರುತ್ತದೆ. ದೇವಾಲಯದ ಭರ್ಗಗುಡಿಯಲ್ಲಿ ಕಾಶಿ ಮಾದರಿಯ ಉದ್ಭವ ಲಿಂಗವಿದೆ. ಅಮರೇಶ್ವರ ದೇವರಿಗೆ ಉದ್ಭವ ಲಿಂಗವೆಂದು ಕರೆಯುತ್ತಾರೆ. ಅಮರೇಶ್ವರ ದೇವಾಲಯ ಕಟ್ಟುವಾಗಲೇ ದಕ್ಷಣ ದಿಕ್ಕಿಗೆ ಒಂದು ಕಿ.ಮೀ ಅಂತರದಲ್ಲಿ ನಿರ್ಮಿಸಲಾದ ಪುರಾತನದ ಚಂದನ ಕೆರೆ, ದೇವಾಲಯದ ಉತ್ತರಕ್ಕೆ ಪುರಾತನ ಕಾಲದ ಅಮೃತ ಕುಂಡ ನಿರ್ಮಿಸಲಾಗಿದೆ. ಈ ಕುಂಡದಲ್ಲಿ ಸದಾಕಾಲ ನೀರಿನ ಚಿಲುಮೆ ಕಂಡು ಬರುವುದು ವಿಶೇಷ.

## ರಾಜ್ಯದ ಎಕಮಾತ್ರ ಒಂಟೆ ಜಾತ್ರೆ



ರಾಜ್ಯದ ಏಕೈಕ ಒಂಟಿ ಜಾತ್ರೆ ಎಂದು ಪ್ರಸಿದ್ಧಿ ಪಡೆದಿದ್ದ ಉದ್ಭವಲಿಂಗ ಶ್ರೀ ಅಮರೇಶ್ವರ ಜಾತ್ರೆಯ ಒಂಟಿ ಪ್ರದರ್ಶನ ನಡೆಯುವದು ಔರಾದ್‌ನಲ್ಲಿ ಇತಿಹಾಸವಿದೆ. 1950ರಲ್ಲಿ ಆರಂಭವಾದ ಅಮರೇಶ್ವರ ಜಾತ್ರೆ ಇಡೀ ದೇಶದ ಗಮನ ಸೆಳೆದಿದೆ. ರಾಜಸ್ಥಾನ, ಬಿಹಾರ, ಉತ್ತರಪ್ರದೇಶ, ಮಹಾರಾಷ್ಟ್ರ ಸೇರಿದಂತೆ ದೇಶದ ವಿವಿಧೆಡೆಯಿಂದ ಔರಾದನಲ್ಲಿ ಒಂಟೆ ವ್ಯಾಪಾರಿಗಳು ಬರುತ್ತಿದ್ದರು. ಒಂದು ತಿಂಗಳ ಕಾಲ ಪಟ್ಟಣದಲ್ಲಿ ಸಾವಿರಾರು ಒಂಟೆಗಳು ಓಡಾಡುತ್ತಿರುವುದು ಜಾತ್ರೆ ಕಳೆ ಕಟ್ಟುತ್ತಿತ್ತು. ದೇಶದಲ್ಲಿಯೇ ಏಕೈಕ ಒಂಟೆಯ ಜಾತ್ರೆ ಎಂದು ಗಮನ ಸೆಳೆದ ಶ್ರೀ ಅಮರೇಶ್ವರ ಜಾತ್ರೆ ಈದೀಗ ಮರಿಚೀಕೆಯಾಗಿದೆ ಎಂದು ಭಕ್ತಾದಿಗಳು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

## ಅಮರವಾಡಿ ಯಿಂದ ಔರಾದ ವಾದ ಇತಿಹಾಸ

ಉದ್ಭವಲಿಂಗ ಅಮರೇಶ್ವರ ದೇವರ ಅಸ್ತಿತ್ವ ಮಾತ್ರದಿಂದಲೇ ಇಂದಿನ ಔರಾದ ಎನ್ನುವ ಹೆಸರು ಈ ಹಿಂದೆ ಅಮರೇಶ್ವರವಾಡಿ, ಅಮರವಾಡಿ, ಅವರವಾಡಿ, ಅವರಾಡಿ, ಅವರಾದ, ಔರಾದ ಎಂದು ಬದಲಾಗಿದೆ ಎಂಬುದು ಅಮರೇಶ್ವರ ದೇವಸ್ಥಾನದಲ್ಲಿ ದೊರೆತ ತುಂಡು ಶಾಸನ ಹಾಗೂ ಅಮರೇಶ್ವರ ಕಾಲೇಜು ಆವರಣದಲ್ಲಿರುವ ಪಾರ್ಶ್ವನಾಥ ತೀರ್ಥಂಕರರ ಒಡೆದ ಶಾಸನದ ಪೀಠದ ಕೆಳಗಿರುವ ಎರಡು ಸಾಲಿನ ಶಿಲಾಶಾಸನದಲ್ಲಿ "ವಿಖ್ಯಾತನಗರವರವಾಡಿ" ಎನ್ನುವ ಸಾಲು, ಇಂದಿನ ಔರಾದನ್ನು 'ಅವರವಾಡಿ' ಅಥವಾ "ಅಮರವಾಡಿ" ಎನ್ನುತ್ತಿದ್ದರೆಂದು ಪುಷ್ಟಿಕರಿಸುತ್ತದೆ.

ಸುಮಾರು 10ನೇ ಶತಮಾನದ್ದೆನ್ನಬಹುದಾದ ಅಮರೇಶ್ವರ ದೇವಸ್ಥಾನದಲ್ಲಿ ದೊರೆತ ತುಂಡು ಶಾಸನದಲ್ಲೂ "ಅವರವಾಡಿ ನೂರರ ಗ್ರಾಮದ ಸಮಸ್ತ ಪ್ರಭುಗಾವುಂಡರು ಅವರವಾಡಿಯ ಶ್ರೀ ಅಮರೇಶ್ವರ ದೇವರಿಗೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕಾಗಿ ತನಾರ್ಥಂ ಧಾರಾಪೂರ್ವಕ " ಎನ್ನುವ ಸಾಲು




ಉಲ್ಲೇಖಿಸಲಾಗಿದ್ದು ಇದು ಹಿಂದಿನ ಅಮರವಾಡಿಯೇ ಇಂದಿನ ಔರಾದ್ ಎಂಬುದನ್ನು ಒತ್ತಿ ಹೇಳುತ್ತದೆ.

## ಪುನರ್ ರಚನೆಗೊಂಡ ಔರಾದ

1905ಕ್ಕೆ ಮುಂಚೆ ಬೀದರ ಜಿಲ್ಲೆಯು ಬೀದರ, ಕೊಹಿರ್, ಕ್ಕೆ ಮುಂಚೆ ಬೀದರ ಜಿಲ್ಲೆಯು ಬೀದರ, ಕೊಹಿರ್, ಜನವಾಡಾ, ಔರಾದ, ಉದಗೀರ, ಅಹ್ಮದಪುರ ಮತ್ತು ನಿಲಂಗಾ ತಾಲೂಕುಗಳನ್ನು ಹೊಂದಿತ್ತು. ಜನವಾಡಾ ಮತ್ತು ಅಹ್ಮದಪುರಗಳು ನಿಜಾಮನ 'ಸರ್ಫ–ಎ–ಖಾಸಾ'ದ ಭಾಗಗಳಾಗಿದ್ದವು. 1905ರಲ್ಲಿ ಕಲಬುರ್ಗಿಯನ್ನು ವಿಭಾಗವನ್ನಾಗಿ ಮಾಡಿದಾಗ ಕೋಹಿರ್ ಮತ್ತು ಔರಾದನ್ನು ತಾಲೂಕು ಸ್ಥಾನದಿಂದ ತೆಗೆದುಹಾಕಲಾಯಿತು. ಆಗ ಔರಾದದ ಪ್ರದೇಶಗಳನ್ನು ಜನವಾಡಾ ತಾಲೂಕಿನ ವ್ಯಾಪ್ತಿಗೆ ತರಲಾಯಿತು. 1922ರಲ್ಲಿ ಕಲಬುರ್ಗಿ ವಿಭಾಗವನ್ನು ರದ್ದುಪಡಿಸಿ ಮತ್ತೆ 1929ರಲ್ಲಿ ಮರುಸ್ಥಾಪಿಸಿ 1948ರವರೆಗೆ ಮುಂದುವರೆಸಲಾಯಿತು. ಮುಂದೆ 1950ರಲ್ಲಿ ಹೈದ್ರಾಬಾದ್ ಪ್ರಾಂತ್ಯದಲ್ಲಿ ಹೈದ್ರಾಬಾದ್ ಜಾಗೀರದ್ದತಿ ಕಾಯ್ದೆ ಪ್ರಕಾರ ಬೀದರ ಜಿಲ್ಲೆಯನ್ನು ಮರುಸ್ಥಾಪಿಸಿದಾಗ ಔರಾದ ಪುನಃ ತಾಲೂಕಾಗಿ ರಚಿಸಲಾಯಿತು. ಈ ಹಿಂದೆ ಜನವಾಡಾ ತಾಲೂಕಿಗೆ ಹಂಚಿಕೆ ಮಾಡಲಾಗಿದ್ದ ಔರಾದದ ಪ್ರದೇಶಗಳನ್ನು ಹಿಂಪಡೆಯಲಾಯಿತು. 1953ರಲ್ಲಿ ರಾಜ್ಯ ಪುನರ ರಚನಾ ಆಯೋಗದ ವರದಿಯಾಧರಿಸಿ ಔರಾದನ್ನು ಹೈದ್ರಾಬಾದ್ ಪ್ರಾಂತ್ಯದಿಂದ ಪ್ರತ್ಯೇಕಗೊಳಿಸಿ ಬೀದರ ಜಿಲ್ಲೆಯಲ್ಲಿ ಕರ್ನಾಟಕಕ್ಕೆ ಸೇರಿಸಿ ಏಕೀಕರಣಗೊಳಿಸಲಾಯಿತು. ಮುಂದೆ 1956ರಲ್ಲಿ ರಾಜ್ಯ ಮನರ ವಿಂಗಡಣೆಯಾದಾಗ ಔರಾದ ಬೀದರ ಜಿಲ್ಲೆಯ ತಾಲೂಕು ಪ್ರದೇಶವಾಗಿ ಮುಂದುವರೆಯಿತು.



ಪಲ್ಲಕ್ಕಿ & ಉತ್ಸವ ಮೂರ್ತಿ ಮೂಲಕ ಮನೆ ಮನೆಗೆ ದರ್ಶನ ಶ್ರೀ ಅಮರೇಶ್ವರರ ಜಾತ್ರಾ ಮಹೋತ್ಸವ ನಿಮಿತ್ತ ಸತತ ಐದು ದಿನಗಳ ಕಾಲ ನಡೆಯುವ ಪಲ್ಲಕ್ಕಿ ಉತ್ಸವದಲ್ಲಿ ಉದ್ಭವಲಿಂಗ ಅಮರೇಶ್ವರರು ಉತ್ಸವ ಮೂರ್ತಿಯಾಗಿ ಜನರ ಮನೆ ಬಾಗಿಲಿಗೆ ದರ್ಶನ ನೀಡುತ್ತಾರೆ. ಹೀಗಾಗಿ ಪಟ್ಟಣದ ಹೆಂಗಳೆಯರು ಶ್ರೀ ಅಮರೇಶ್ವರರ ಪಲ್ಲಕ್ಕಿ ಉತ್ಸವ ಬರಮಾಡಿಕೊಳ್ಳಲು ಮನೆ ಮುಂದೆ ಸ್ವಚ್ಛ ಮಾಡಿ ವಿವಿಧ ಬಗೆಯ ರಂಗೋಲಿ ಬಿಡಿಸಿ ಸ್ವಾಗತ ಕೋರುತ್ತಾರೆ, ವಿಶೇಷ ಪೂಜೆ ಹೊದಿಕೆ ಅರ್ಪಿಸಿ ತಮ್ಮ ಹರಕೆ ತಿರಿಸುತ್ತಾರೆ, ಪಲ್ಲಕ್ಕಿ ಉತ್ಸವ ನೋಡುವುದೆ ಕಣ್ಣಿಗೆ ಹಬ್ಬ.

## ಅಂತರರಾಜ್ಯ ಮಟ್ಟದ ಕುಸ್ತಿ ಪಂದ್ಯ

ಅಮರೇಶ್ವರ ಜಾತ್ರಾ ಮಹೋತ್ಸವದಲ್ಲಿ ಅಂತರರಾಜ್ಯ ಮಟ್ಟದ ಕುಸ್ತಿ ಪಂದ್ಯ ನಡೆಯುತ್ತದೆ. ನೆರೆ ರಾಜ್ಯಗಳಾದ ಮಹಾರಾಷ್ಟ್ರದ ಸೊಲ್ಲಾಪೂರ, ಹಣೇಗಾಂವ, ಚಾಕುರ, ಆಂದ್ರ, ತೆಲಂಗಾಣ ರಾಜ್ಯದ ಹಾಗೂ ನಾನಾ ಗ್ರಾಮಗಳಿಂದ ಕುಸ್ತಿ ಪಂದ್ಯದಲ್ಲಿ ಪಾಲ್ಗೊಳ್ಳಲು ಕುಸ್ತಿಪಟುಗಳು ಬರುತ್ತಾರೆ. ಕುಸ್ತಿಪಟುಗಳು ತಮ್ಮ ಶಕ್ತಿ ಪ್ರದರ್ಶನ ಮಾಡುವದನ್ನು ಪಟ್ಟಣದ ಜನತೆ ಸೇರಿದಂತೆ ಸುತ್ತಮುತ್ತಲಿನ ನೂರಾರು ಜನರು ವಿಕ್ಷಣೆ ಮಾಡುತ್ತಾರೆ. 100 ರೂ.ಯಿಂದ ಪ್ರಾರಂಭಿಸುವ ಕುಸ್ತಿಯನ್ನು 11 ಸಾವಿರ ವರಗೆ ನಡೆಸಲಾಗುತ್ತದೆ. ಪ್ರಥಮ, ದ್ವಿತೀಯ, ತೃತೀಯ ಕುಸ್ತಿಪಟುಗಳಿಗೆ ಗುರುತಿಸಿ ಸತ್ಕಾರದ ಜತೆಗೆ ಬಹುಮಾನ ನೀಡಲಾಗುತ್ತದೆ.

## ಪಶು ಪ್ರದರ್ಶನ

ಅಮರೇಶ್ವರ ಜಾತ್ರೆಯಲ್ಲಿ ಪ್ರತಿವರ್ಷ ಗಡಿ ಭಾಗದ ರೈತರಿಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪಶು ಪ್ರದರ್ಶನ ಮಾಡಲಾಗುತ್ತದೆ. ಮಹಾರಾಷ್ಟ್ರ, ಆಂಧ್ರಪ್ರದೇಶ ಹಾಗೂ ತೆಲಂಗಾಣದ ರೈತರು ತಮ್ಮ ಎತ್ತ, ಆಕಳು ಎಮ್ಮೆ, ಕುದುರೆ, ಸೇರಿದಂತೆ ನಾನಾ ತಳಿಯ ಜಾನುವಾರುಗಳನ್ನು ಪ್ರದರ್ಶನಕ್ಕೆ ಇಡುತ್ತಾರೆ. ಕೃಷಿ ಉತ್ಪನ್ನ ಮಾರುಕಟ್ಟೆ ಇಲಾಖೆಯ ಅಧಿಕಾರಿಗಳು ಭಾಗವಹಿಸುವ ಜಾನುವಾರುಗಳಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಎಂದು ತೆಗೆದು ರೈತರಿಗೆ ಸತ್ಕಾರ ಮಾಡಿ ಬಹುಮಾನ ವಿತರಿಸುತ್ತಾರೆ.

## ಗೋಶಾಲೆ ನಿರ್ಮಾತುಜಯಶಂಕರ ಮಹಾರಾಜ

ಉದ್ಭವಲಿಂಗ ಶ್ರೀ ಅಮರೇಶ್ವರರ ದೇವಸ್ಥಾನದಲ್ಲಿರುವ ಒಂದು ಆಕಳಿಂದ ಶ್ರೀ ಅಮರೇಶ್ವರ ಇಂದು ಗೋ ಶಾಲೆ ಸ್ಥಾಪನೆಯಾಗಿ 200 ಕ್ಕೂ ಹೆಚ್ಚು ಆಕಳು ಗೋ ಶಾಲೆಯಲ್ಲಿವೆ. ಇದಕ್ಕೆ ಮೂಲ ಕಾರಣ ಲಿಂಗೈಕ್ಯ ಜಯಶಂಕರ ಮಹಾರಾಜರು. ದೇವಸ್ಥಾನದಲ್ಲಿರುವ ಒಂದು ಆಕಳು ಮೇಯಲು ಹೋಗಿ ಗಡಿಮೇಲಿಂದ ಬಿದ್ದು ಸಾವನ್ನಪ್ಪಿತ್ತು. ಜಯಶಂಕರ ಮಹಾರಾಜರು ಸಾವನ್ನಪ್ಪಿದ ಆಕಳನ್ನು ಅಮರೇಶ್ವರ ದೇವಸ್ಥಾನಕ್ಕೆ ತಂದು ಭಜನ ಕೀರ್ತನೆ ಮಾಡುವ ಮೂಲಕ ದಾನಿಗಳಿಂದ ಹಣ ಸಂಗ್ರಹಿಸಿ ಅಂತ್ಯಸಂಸ್ಕಾರ ನೇರವೇರಿಸಿದರು. ಅಂತ್ಯಸಂಸ್ಕಾರಕ್ಕೆ ಬಂದ ಹಣದಲ್ಲಿ ಉಳಿದ ಹಣವನ್ನು ಜಯಶಂಕರ ಮಹಾರಾಜರು, ಒಂದು ಆಕಳು ಖರೀದಿಸಿದರು. ಆಕಳ ಸಂತಾನದಿಂದ ಇಂದು ಪಟ್ಟಣದ ಮುಂಗನಾಳ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಗೋ ಶಾಲೆ ತಲೆಯತ್ತಿದೆ. ಅಲ್ಲದೇ ಗೋ ಶಾಲೆಗೆ 19 ಏಕರೆ 15 ಗುಂಟೆ ಜಮೀನು ಕುಡಾ ಜಯಶಂಕರ ಮಹಾರಾಜರು ಗಳಿಸಿದ್ದಾರೆ. ಜಯಶಂಕರ ಮಹಾರಾಜರು ಮೂಲತಃ ಹಂದಿಕೇರಾ ಗ್ರಾಮದವರಾಗಿದ್ದು, ತಂದೆ ಚಿಕ್ಕವಯಸ್ಸಿನಲ್ಲಿಯೇ ಕಳೆದುಕೊಂಡರು. ಆದ್ದರಿಂದ ಉಪಜೀವನಕ್ಕಾಗಿ ಭಾಲ್ಕಿ ಪಟ್ಟಣದಲ್ಲಿ ಸುಮಾರು 5 ವರ್ಷಗಳ ಕಾಲ ವಾಸಮಾಡಿ ನಂತರ 1949ರ ಸುಮಾರಿಗೆ ಔರಾದ್ ಅಮರೇಶ್ವರ ದೇವಸ್ಥಾನಕ್ಕೆ ತಾಯಿಯೊಂದಿಗೆ ಬಂದು ಶ್ರೀ ಅಮರೇಶ್ವರ ದೇವಸ್ಥಾನದಲ್ಲಿಯೇ ಉಳಿದುಕೊಂಡರು. ಇವರಿಗೆ ದೇವಸ್ಥಾನವೇ ಮನೆಯಾಗಿ ಬಲದಾವಣೆಯಾಗಿತ್ತು. ಎಲ್ಲ ಅನುದಾನ ದೇವಸ್ಥಾನದ ಅಭಿವೃದ್ಧಿಗೆ ಖರ್ಚು ಮಾಡಿದ್ದಾರೆ. 1950ರಲ್ಲಿ ಅಮರೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಒಂಟೆ ಜಾತ್ರೆ ನಡೆಯಿತು. ಜಾತ್ರೆಯಲ್ಲಿ ಇವರ ಪಾತ್ರ ಪ್ರಮುಖವಾಗಿತ್ತು. 1984ರಲ್ಲಿ ಜಯಶಂಕರ ಮಹಾರಾಜರು ದೇವಸ್ಥಾನದಲ್ಲಿ 1 ಕೋಟಿ ಓಂ ನಮಃ ಶಿವಾಯ ಜಪ ನಡೆಸಿದರು. ಅದರಂತೆ ಇಂದಿಗೂ ಪ್ರತಿ ವರ್ಷ 1 ಕೋಟಿ ಓಂ ನಮಃ ಶಿವಾಯ ಜಪ ನಡೆಯುತ್ತಿದೆ. ಜಪ ಸಮಾರೋಪದ ನಂತರ ಭಕ್ತರು ಮಹಾರಾಷ್ಟ್ರದ ಮನ್ಮಥಸ್ವಾಮಿ ದೇವಸ್ಥಾನದಲ್ಲಿ 7 ದಿನಗಳ ಕಾಲ ಸಪ್ತಾಹ ಇಟ್ಟುಕೊಂಡು ಬರುತ್ತಿದ್ದಾರೆ

## ನೋಡ ಬನ್ನಿ ನಮ್ಮೂರ ಜಾತ್ರೆ

ಐತಿಹಾಸಿಕ ಕ್ಷೇತ್ರ ಔರಾದ ಉದ್ಭವಲಿಂಗ ಶ್ರೀ ಅಮರೇಶ್ವರ ಜಾತ್ರೆಯ ಸಂಭ್ರಮ. ಸುತ್ತಮುತ್ತಲಿನ ಹಳ್ಳಿಗಳಲ್ಲದೆ, ದೂರದ ಊರಿನಿಂದಲೂ ಭಕ್ತರು ಇಲ್ಲಿಗೆ ಆಗಮಿಸುತ್ತಿದ್ದು ಜಾತ್ರೆಯ ಸಂಭ್ರಮದಲ್ಲಿ ಪಾಲ್ಗೊಳ್ಳುವ ಮೂಲಕ ಆಧಿದೇವತೆ ಉದ್ಭವಲಿಂಗ ಶ್ರೀ ಅಮರೇಶ್ವರರ ಕೃಪೆಗೆ ಪಾತ್ರರಾಗುತ್ತಿದ್ದಾರೆ. ಇಲ್ಲಿ ದಿನನಿತ್ಯ ವಿಶೇಷ ಪೂಜೆ ಹಾಗೂ ವಿವಿಧ ಧಾರ್ಮಿಕ ಕೈಂಕರ್ಯಗಳು ನಡೆಯುತ್ತಿವೆ.ವಿಶಿಷ್ಟ ಜಾತ್ರೆ: ಇತರೆ ಕಡೆಗಳಲ್ಲಿ ನಡೆಯುವ ಜಾತ್ರೆಗೆ ಹೋಲಿಸಿದರೆ ಔರಾದನಲ್ಲಿ ನಡೆಯುವ ಜಾತ್ರೆ ಒಂದೆರಡು ದಿನಕ್ಕೆ ಸೀಮಿತವಾಗಿರದೆ ಇಲ್ಲಿ ಬರೋಬ್ಬರಿ ಎರಡು ವಾರಗಳ

ಕಾಲ ಜಾತ್ರೆ ನಡೆಯುತ್ತದೆ.
ಹೋಗಬೇಕು ಹೋಗಬೇಕು
ನಮ್ಮೂರ ಜಾತ್ರೆಗೆ ಹೋಗಬೇಕು
ತೇರು ಎಳೆಯುವುದನ್ನು ನೋಡಬೇಕು
ದೇವರ ದರುಶನ ಮಾಡಬೇಕು
ಬೇಕಾದ ವರವನು ಕೇಳಬೇಕು
ಅಗ್ಗಿಯ ಬೀದಿಗೆ ಹೋಗಬೇಕು
ತೇರಿನ ಶೃಂಗಾರ ನೋಡಬೇಕು
ತೇರು ಎಳೆಯಲು ಹೋಗಬೇಕು
ದೇವರ ಅನುಗ್ರಹ ಪಡೆಯಬೇಕು.
ನೋಡಬೇಕು ನೋಡಬೇಕು
ಅಮರೇಶ್ವರನ ಸನ್ನಿಧಿ
ನೋಡಬೇಕು.

# ಕಲಬುರಗಿ ವಿಭಾಗಮಟ್ಟದ ತರಬೇತಿ ಕಾರ್ಯಾಗಾರ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಫೆ.27–ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಜಿಲ್ಲಾಡಳಿತ ಜಿಲ್ಲಾ ಪಂಚಾಯತ ಮಹಿಳಾ ಮತ್ತು ಮಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ /ಮಕ್ಕಳ ಸಹಾಯವಾಣಿ 1098/112 ಗುಲಬರ್ಗಾ ವಿಶ್ವವಿದ್ಯಾಲಯ ಹಾಗು ಕಲಬುರಗಿ ಜಿಲ್ಲೆಯ ವಿವಿದ ಇಲಾಖೆಗಳ ಸಂಯುಕ್ತಾಶ್ರಾಯದಲ್ಲಿ ಕಲಬುರಗಿ ವಿಭಾಗ ಮಟ್ಟದ ತರಭೇತಿ ಕಾರ್ಯಾಗಾರವನ್ನು ಫೆಬ್ರವರಿ 28 ರಂದು ಬೆಳಿಗ್ಗೆ 10.30 ಗಂಟೆಗೆ ಗುಲಬರ್ಗಾ ವಿಶ್ವವಿದ್ಯಾಲಯದ ಮಹಾತ್ಮಗಾಂಧಿ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಹ್ಮಮಿಕ್ಕೊಳ್ಳಲಾಗಿದೆ.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರಾದ ಶ್ರೀ ನಾಗಣ್ಣಗೌಡ.ಕೆಉದ್ಘಾಟಿಸುವರು. ಜಿಲ್ಲಾಧಿಕಾರಿಗಳಾದ ಫೌ–ಜಿಯಾ ತರುನ್ನಮ್, ಅಧ್ಯಕ್ಷತೆ ವಹಿಸುವರು. ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರುಗಳಾದ ಶ್ರೀಶೇಖರಗೌಡಜಿ.ರಾಮತ್ನಾಳ,ಶ್ರೀ ಶಶಿದರ ಕೋಸಂಭೆ,ಶ್ರೀಮತಿ ಅಪರ್ಣಾ ಎಮ್.ಕೋಳ್ಳಾ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸುವರು.

ಸಂಪನ್ಮೂಲ ವ್ಯಕ್ತಿಗಳಾಗಿ ಬೆಂಗಳೂರಿನ ಎಸ್. ಜೆ.ಪಿ.ಯು,ಸಿ.ಐ.ಡಿ. ಪೋಲಿಸ್ ತರಬೇತಿದಾರರು, ರೋಹಿತ ಸಿ.ಜಿ., ಕಲಬುರಗಿ ದಕ್ಷಿಣ ಬಿ.ಆರ್.ಸಿ. ಸಂಯೋಜಕ ಪ್ರಕಾಶ ರಾಠೋಡ್ ವಿಶೇಷ ಉಪನ್ಯಾಸ ನೀಡುವರ .

ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.. ರಾಮಲು,ಕಲಬುರಗಿಯ ಜಿಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಶ್ರೀನಿವಾಸ ನವಲೆ. ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತರು ಆಕಾಶ, ಪೋಲಿಸ್ ಆಯುಕ್ತರು ಶರಣಪ್ಪ ಎಸ್.ಡಿ ಮತ್ತು ಪೋಲಿಸ್ ವರಿಷ್ಠಾಧಿಕಾರಿಗಳಾದ ಅಡ್ಡೂರು ಶ್ರೀನಿವಾಸಲು. ಕಲಬುರಗಿ ಮಹಾನಗರ ಪಾಲಿಕೆಯ ಆಯುಕ್ತಅವಿನಾಶಸಿಂಧೆಸಂಜೀವನ, ಮಕ್ಕಳ ಕಲ್ಯಾಣ ಇಲಾಖೆಯ ಅಧ್ಯಕ್ಷರಾದ ಶ್ರೀವಿಶ್ವರಾದ್ಯ. ಕೆ.ಇಜೇರಿ,ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅದ್ಯಕ್ಷರಾದ ಶ್ರೀಮತಿ ವಾಸಂತಿ ಎಸ್ ಉಪ್ಪಾರ,ಭಾಗವಹಿಸವರು.

# ಬಿ ಎಸ್ ಯಡಿಯೂರಪ್ಪ ಅವರ ಹುಟ್ಟುಹಬ್ಬದ ಆಚರಣೆ.



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:–ನಗರದಲ್ಲಿ ಮಾಜಿ ಮುಖ್ಯಮಂತ್ರಿಗಳು ಹಾಗೂ ರೈತಪರ ನಾಯಕರಾದ ಶ್ರೀ ಬಿ ಎಸ್ ಯಡಿಯೂರಪ್ಪ ಅವರ ಹುಟ್ಟುಹಬ್ಬದ ಪ್ರಯುಕ್ತ ನಗರದ ಭಾಗ್ಯಲಕ್ಷ್ಮೀ ಬಾಂಡ್ ಫಲಾನುಭವಿಗಳಿಗೆ ಅಭಿನಂದಿಸಿ ಸನ್ಮಾನಿಸಲಾಯಿತು.

ಈಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಶ್ರೀ ಬಸವರಾಜ ವಿಭೂತಿಹಳ್ಳಿ ಮಾತನಾಡಿದ ಅವರು ರಾಜ್ಯದಲ್ಲಿ ಯಡಿಯೂರಪ್ಪ ಜನಮೆಚ್ಚುಗೆ ಪಡೆದ ನಾಯಕ. ಹಲವು ಹೋರಾಟಗಳ ಮೂಲಕ ಅಧಿಕಾರಕ್ಕೆ ಬಂದಿದ್ದರು. ಅಧಿಕಾರಕ್ಕೆ ಬಂದ ಮೇಲೆ ಎಲ್ಲ ಸಮುದಾಯಗಳಿಗೂ ಕಾರ್ಯಕ್ರಮ ಕೊಟ್ಟರು. ಕೆಳಲಸ್ತರವರಿಗೆ, ಬಡವರಿಗೆ, ಮಹಿಳೆಯರು, ಮಕ್ಕಳಿಗೆ, ರೈತರಿಗೆ ಕಾರ್ಯಕ್ರಮ ಕೊಟ್ಟರು. ಜನ ಯಡಿಯೂರಪ್ಪ ಅವರ ಕಾರ್ಯಕ್ರಮಗಳನ್ನು ಬಯಸುತ್ತಿದ್ದಾರೆ. ಇವತ್ತು ಕಾಂಗ್ರೆಸ್ ದುರಾಡಳಿತ ದೂರ ಮಾಡಿ ಮತ್ತೆ ಬಿಜೆಪಿಯನ್ನು ಅಧಿಕಾರಕ್ಕೆ ತರುವ ಸಂಕಲ್ಪ ಮಾಡುವ ದಿನ ಎಂದು ಹೇಳಿದರು.

ಈಸಂದರ್ಭದಲ್ಲಿ ನಗರಮಂಡಲ ಅಧ್ಯಕ್ಷ ಚಂದ್ರಶೇಖರ ಯಾಳಗಿ, ಯುವ ಮುಖಂಡ ಅಪ್ಪುಗೌಡ ಪಾಟೀಲ ಯಾಳಗಿ,ಹಿರಿಯ ಮುಖಂಡ ಡಾ.ಚಂದ್ರಶೇಖರ ಸುಬೇದಾರ,ಜಿಲ್ಲಾಉಪಾಧ್ಯಕ್ಷರಾದ ದೇವಿಂದ್ರಪ್ಪ ಕೊನೇರ, ಅಡಿವೆಪ್ಪ ಜಾಕಾ, ಜಿಲ್ಲಾಪ್ರ,ಕಾ,ಗುರುಕ ಾಮಾ,ಪ್ರಮುಖರಾದ

ಬಸವರಾಜ ಆರುಣಿ, ಲಕ್ಷ್ಮೀಕಾಂತ ಬಿರಾಳ, ಪ್ರಭು ದೊಡ್ಡಮನಿ, ಶರಣು

# ವಿಜೃಂಭಣೆಯಿಂದ ನಡೆದ ಪುಟ್ಟಿ ಮರಗಮ್ಮ ದೇವಿ ಜಾತ್ರಾ ಮಹೋತ್ಸವ.



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ. ಪ್ರತಿವರ್ಷದಂತೆ ಈ ವರ್ಷವೂ ಕೂಡ ಯಾದಗಿರಿ 9 ನೇ ವಾರ್ಡಿ ನ ದೇವಿ ಪುಟ್ಟಿ ಮರಗಮ್ಮ ಜಾತ್ರೆಯು ಗುರುವಾರ ಅದ್ದೂರಿಯಾಗಿ ಜರುಗಿತು.

ಬೆಳಿಗ್ಗೆ ದೇವಿ ಪುಟ್ಟಿಮರಗಮ್ಮಗಳ ಮೂರ್ತಿ ಪಲ್ಲಕ್ಕಿ ಹೊತ್ತು ಭೀಮಾ ನದಿಗೆ ಗಂಗಾ ಸ್ನಾನಕ್ಕೆ ಮುಗಿಸಿ ಡೊಳ್ಳು, ಹಲಗೆಗಳ ಮೂಲಕ ಜಯಘೋಷಗಳೊಂದಿಗೆ

ಭವ್ಯ ಮೆರವಣಿಗೆ ಮೂಲಕ ಗರ್ಭ ಗುಡಿ ಸೇರುವ ಮುನ್ನ ಭಕ್ತರು ದೇವಿ ಬರುವ ಹಾದಿಗೆಲ್ಲ ಹರಕೆ ಕೊಡ ನೀರು ಚೆಲ್ಲಿ ಭಕ್ತಿ ಮೆರೆದರು.

ದೇವಸ್ಥಾನದ ಎದಿರು ಅರ್ಚಕರಾದ ಶ್ರೀ ಮಲ್ಲಯ್ಯ ಪೂಜಾರಿ ನೇತೃತ್ವದಲ್ಲಿ ನಾಲಿಗೆ ಶಸ್ತ್ರ,ಹಾಗೂ ಸರಪಳಿ ಹರಿಯುವ ಸಂಧರ್ಭ ಸಾವಿರಾರು ಭಕ್ತರು ಭಂಡಾರ ಚೆಲ್ಲಿ ದೇವಿ ಭಕ್ತಿಗೆ ಪಾತ್ರರಾದರು.

ಈ ಸಂಧರ್ಭದಲ್ಲಿ ಬಿಜೆಪಿ ಯುವ ಮುಖಂಡ ಮಹೇಶ್ ರೆಡ್ಡಿಗೌಡ ಮುದ್ನಾಳ್, ಮಾಜಿ ನಗರಸಭೆ ಉಪಾಧ್ಯಕ್ಷೆ ಹಾಗೂ ಹಾಲಿ ಸದಸ್ಯೆ ಪ್ರಭಾವತಿ ಮಾರುತಿ ಕಲಾಲ್, ನಗರಸಭೆ ಸದಸ್ಯರಾದ ಚನ್ನಕೇಶವ ಗೌಡ ಬಾಣತಿಹಾಳ್,ಸ್ವಾಮಿದೇವ್ ದಾಸನಕೇರಿ,

ಪ್ರಮುಖರಾದ ಲಿಂಗಪ್ಪ ಹತ್ತಿಮನಿ, ಶಂಕರ್ ಗೋಸಿ, ಮಹದೇವಪ್ಪಗಣಪೂರ್,ನಾಗಪ್ಪ ಬೆನಕಲ್, ಮಹಾದೇವಪ್ಪ ಪಾಮಳ್ಳಿ,ಲಕ್ಷ್ಮಿಕಾಂತ್ ಬಾವೂರ್, ಮಹೇಂದ್ರಕುಮಾರ್ ಅನಪೂರ್, ಮಾರುತಿ ಕಲಾಲ್ ಸೇರಿದಂತೆ ಸಾವಿರಾರು ಭಕ್ತಾದಿಗಳು ನೆರೆದಿದ್ದರು.

# ಮಹಾಶಿವರಾತ್ರಿ ತ್ರಿವೇಣಿ ಸಂಗಮದಲ್ಲಿ ಶಾಯಿ ಸ್ನಾನ ಮಾಡಿದ ಮಹಿಳಾ ತಂಡ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಈಗಾಗಲೇ ದೇಶದಲ್ಲಿ ಹಾಗೂ ವಿಶ್ವದಲ್ಲಿ ಆಧ್ಯಾತ್ಮಿಕ ಅಲೆ ಎಬ್ಬಿಸಿರುವ ಪ್ರಯಾಗರಾಜ್‌ನಲ್ಲಿ ನಡೆ–ಯುತ್ತಿದ್ದ ಮಹಾಕುಂಭಮೇಳ – 2025 ಕೊನೆಯ ದಿನ ಮಹಾಶಿವರಾತ್ರಿ ದಿನದಂದು ಗಿರಿಜಿಲ್ಲೆಯಿಂದ ಅಲ್ಲಿಗೆ ತೆರಳಿದ ಮಹಿಳಾ ಭಕ್ತರ ತಂಡ ತ್ರಿವೇಣಿ ಸಂಗಮನಲ್ಲಿ ಶಾಯಿ ಸ್ನಾನ ಮಾಡಿ, ಪುನೀತರಾಗಿದ್ದಾರೆ,

ಕಳೆದ 3 ದಿನಗಳ ಹಿಂದೆ ನಗರದ ಹಿರಿಯ ವೈಧ್ಯೆ ಡಾ.ಮಹಾದೇವಿ ಪಾಟೀಲ್ ಲಕಣಾಪೂರ ನೇತೃತ್ವದಲ್ಲಿ 20 ಮಹಿಳೆಯರು, 5 ಜನ ಪುರುಷರು,ಮಕ್ಕಳು ಸೇರಿದಂತೆ 32 ಜನರ ತಂಡ ಖಾಸಗಿ ವಾಹನದಲ್ಲಿ ಪ್ರಯಾಗರಾಜಗೆ ಪ್ರಯಾಣ ಬೆಳೆಸಿದ್ದರು.

ಶಾಯಿ ಸ್ನಾನದ ನಂತರ ದೇಶದ ಸಾಂಸ್ಕೃತಿಕ ರಾಜಧಾನಿ ವಾರಣಾಸಿಗೆ ತೆರಳಿ ಕಾಶಿ ವಿಶ್ವನಾಥ ಜ್ಯೋತಿರ್ಲಿಂಗ, ಶಕ್ತಿ ಮಾತೆ ಅನ್ನಪೂರ್ಣೇಶ್ವರಿ ದರ್ಶನ ಪಡೆದು, ಅಲ್ಲಿರುವ ಕರ್ನಾಟಕದ ಜಂಗಮವಾಡಿ ಮಠಕ್ಕೆ ಭೇಟಿ ನೀಡಿ, ಅಲ್ಲಿನ ಶ್ರಿಗಳ ಇಷ್ಟಲಿಂಗ ಪೂಜೆಯಲ್ಲಿ ಪಾಲ್ಗೊಂಡು, ಗಂಗಾ ನದಿ ತೀರಕ್ಕೆ ತೆರಳಿ ಪ್ರಮುಖ ಘಾಟ್‌ಗಳನ್ನು ವಿಕ್ಷೀಸಿ,ಗಂಗೆಗೆ ಪೂಜೆ ಸಲ್ಲಿಸಿ, ಅಯೋಧ್ಯೆಗೆ ಪ್ರಯಾಣ ಬೆಳೇಸಿ, ಸರಯೂ ನದಿ ದಂಡೆಯ ಮೇಲಿರುವ ಬಾಲರಾಮನ ದರ್ಶನ ಪಡೆದು ಸಂತೃಪ್ತರಾಗಿದ್ದಾರೆ.

ತಂಡದಲ್ಲಿ ಡಾ. ನೀಲಮ್ಮ ಎಸ್. ರಡ್ಡಿ ಯಲ್ಹೇರಿ, ಡಾ. ಮಾಧುರಿ ಪಾಟೀಲ್,ಗುರುತಾಯಿ ಈರಮ್ಮ ಜಾಕಾಮಠ, ಪಾರ್ವತಿ ಶರಣಪ್ಪಗೌಡ ಪಾಟೀಲ್ ಕೌಳೂರ, ಇಂದಿರಾ ಚಾಮಾ, ಸರಸ್ವತಿ ಸಜ್ಜನ್, ನೀಲಮ್ಮ, ರೇಣುಕಾ, ಬಸ್ಸಮ್ಮ, ಬಾನುಪ್ರೀಯಾ, ಮೇಘಾ ಪಾಟೀಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಪ್ರವಾಸೋದ್ಯಮ ಇಲಾಖೆ; ಮಾ.3ರಿಂದ ಕರ್ನಾಟಕ ದರ್ಶನ ಪ್ರವಾಸ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಫೆ 27–ಇಲ್ಲಿನ ಪ್ರವಾಸೋದ್ಯಮ ಇಲಾಖೆಯಿಂದ 2024–25ನೇ ಸಾಲಿನಲ್ಲಿ ಜಿಲ್ಲೆಯ ಸರ್ಕಾರಿ ಪ್ರೌಢ, ಮೊರಾರ್ಜಿ ದೇಸಾಯಿ ಹಾಗೂ ಕ್ರೈಸ್ ವಸತಿ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ಕಲಿಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅರ್ಹ ವಿದ್ಯಾರ್ಥಿಗಳಿಗೆ 04 ದಿನಗಳ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ರಾಯಚೂರು ತಾಲೂಕಿನಿಂದ ಮಾ.3ರಿಂದ 7ರವರೆಗೆ ಪ.ಜಾತಿ 67 ಹಾಗೂ ಪ.ಪಂ 80 ಸೇರಿದಂತೆ ಒಟ್ಟು 147 ವಿದ್ಯಾರ್ಥಿಗಳೊಂದಿಗೆ ನಗರದ ಮಹಾತ್ಮಾಗಾಂಧಿ ಕ್ರೀಡಾಂಗಣದಿಂದ ಪ್ರಯಾಣ ಹೊರಡಲಾಗುವುದು. ಲಿಂಗಸೂಗೂರು ತಾಲೂಕಿನಿಂದ ಮಾ.4ರಿಂದ 8ರವರೆಗೆ ಪ.ಜಾತಿ 67 ಹಾಗೂ ಪ.ಪಂ 79 ಸೇರಿದಂತೆ ಒಟ್ಟು 146 ವಿದ್ಯಾರ್ಥಿಗಳೊಂದಿಗೆ ಲಿಂಗಸೂಗೂರಿನ ಶಾಸಕರ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಿಂದ ಪ್ರಯಾಣ ಹೊರಡಲಾಗುವುದು.

ಮಾನವಿ ತಾಲೂಕಿನಿಂದ ಮಾ.5ರಿಂದ 9ರವರೆಗೆ ಪ.ಜಾತಿ 67 ಹಾಗೂ ಪ.ಪಂ 76 ಸೇರಿದಂತೆ ಒಟ್ಟು 143 ವಿದ್ಯಾರ್ಥಿಗಳೊಂದಿಗೆ ಮಾನವಿಯ ಬಿಇಒ ಕಚೇರಿಯಿಂದ ಪ್ರಯಾಣ ಹೊರಡಲಾಗುವುದು. ದೇವದುರ್ಗ ತಾಲೂಕಿನಿಂದ ಮಾ.6ರಿಂದ 10ರವರೆಗೆ ಪ.ಜಾತಿ 67 ಹಾಗೂ ಪ.ಪಂ 79 ಸೇರಿದಂತೆ ಒಟ್ಟು 146 ವಿದ್ಯಾರ್ಥಿಗಳೊಂದಿಗೆ ದೇವದುರ್ಗ ಕೆ.ಪಿ.ಎಸ್ ಆವರಣ ಬಿಇಒ ಕಚೇರಿಯಿರಿಂದ ಪ್ರಯಾಣ ಹೊರಡಲಾಗುವುದು. ಸಿಂಧನೂರು ತಾಲೂಕಿನಿಂದ ಮಾ.7ರಿಂದ 11ರವರೆಗೆ ಪ.ಜಾತಿ 67 ಹಾಗೂ ಪ.ಪಂ 79 ಸೇರಿದಂತೆ ಒಟ್ಟು 146 ವಿದ್ಯಾರ್ಥಿಗಳೊಂದಿಗೆ ಸಿಂಧನೂರಿನ ಬಿಇಒ ಕಚೇರಿಯಿಂದ ಪ್ರಯಾಣ ಹೊರಡಲಾಗುವುದು. ಪ್ರತಿ ತಾಲೂಕಿನಿಂದ 6ಮಂದಿ ಶಿಕ್ಷಕರು ಹಾಗೂ ಪ್ರತಿ ತಾಲೂಕಿಗೆ 3 ಸರ್ಕಾರಿ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜೆಸ್ಕಾಂ ಗ್ರಾಮೀಣ; ಮಾ.01ರಂದು ವಿದ್ಯುತ್ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಫೆ 27– ಇಲ್ಲಿನ ಜೆಸ್ಕಾಂ ಗ್ರಾಮೀಣ ಕಾರ್ಯ ಮತ್ತು ಪಾಲನೆ ಉಪ ವಿಭಾಗದ 33/11 ಕೆ.ವಿ ಉಪ–ಕೇಂದ್ರ ಕಲ್ಮಲಾದಲ್ಲಿ ತುರ್ತು ದುರಸ್ಥಿ ಕಾರ್ಯ ಹಮ್ಮಿಕೊಂಡ ಪ್ರಯುಕ್ತ ಮಾ.01ರ ಬೆಳಿಗ್ಗೆ 10ಗಂಟೆಯಿಂದ ಸಾಯಂಕಾಲ 05ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕೋರಲಾಗಿದೆ.

ಅಂದು ಬೆಳಿಗ್ಗೆಯಿಂದ ಸಿದ್ಧನಭಾವಿ ಕ್ಯಾಂಪ್, ಕಸ್ಬೆಕ್ಯಾಂಪ್, ಶ್ರೀರಾಮನಗರ ಕ್ಯಾಂಪ್, ಗೋನಾಳ, ಪತ್ತೇಪುರ, ಹೊಸ್ಪೇಟೆ, ಮಂಚ್ಲಾಪುರ, ಜೇಗರಕಲ್, ಮರ್ಚೇಡ್, ಮಲ್ಲಾಪುರ, ಹಂಬೆರಳು, ತಿಮ್ಮಪುರ, ಜಿ.ಹನುಮಾಪುರ, ಮೀರಾಪುರ, ಯಕ್ಲಾಸ್‌ಪುರ, ವಿಜಯನಗರಕ್ಯಾಂಪ್, ಮಾರೆಮ್ಮ ಕ್ಯಾಂಪ್, ಕಲ್ಮಲಾ, ಸೀತಾನಗರ ಕ್ಯಾಂಪ್, ಮುರಾಂಪುರ ಮತ್ತು ಸುಲ್ತಾನಪುರ, ಮಮದಾಪುರ ಮತ್ತು ನೆಲಹಾಳ ಸೇರಿದಂತೆ ಸುತ್ತುಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಗ್ರಾಮೀಣ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕುಡಿಯುವ ನೀರಿನ ಕೆರೆಗಳ ತುಂಬಿಸಲು ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳಿಂದ ಆದೇಶ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರುಫೆ27–ಬೇಸಿಗೆಯಲ್ಲಿ ಕುಡಿಯುವ ನೀರಿನ ಕೊರತೆ–ಯಾಗದಂತೆ ನೋಡಿಕೊಳ್ಳಲು ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ ಹಾಗೂ ವಿತರಣಾ ಕಾಲುವೆಗಳಡಿಯಲ್ಲಿ ಬರುವ ಎಲ್ಲಾ ಕುಡಿಯುವ ನೀರಿನ ಕೆರೆಗಳನ್ನು ತುಂಬಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶಿಸಿದ್ದಾರೆ. ತುಂಗಭದ್ರಾ ಜಲಾಶಯದಿಂದ ರಾಯಚೂರು ಜಿಲ್ಲೆಗೆ ಕುಡಿಯುವ ನೀರನ್ನು ಒದಗಿಸುವ ಪ್ರಯುಕ್ತ, ಜಿಲ್ಲೆಯ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ ಹಾಗೂ ವಿತರಣಾ ಕಾಲುವೆಗಳ ಅಡಿಯಲ್ಲಿ ಬರುವ ಎಲ್ಲಾ ಕುಡಿಯುವ ನೀರಿನ ಕೆರೆಗಳನ್ನು ತುಂಬಿಸಲು ಆದೇಶಿಸಲಾಗಿದ್ದು, ಬೇಸಿಗೆಯಲ್ಲಿ ಕುಡಿಯುವ ನೀರಿನ ಕೊರತೆಯಾಗದಂತೆ ಸೂಕ್ತಕ್ರಮಕೈಗೊಳ್ಳಲು ಜಿಲ್ಲೆಯ ಎಲ್ಲಾ ತಹಶೀಲ್ದಾರರು, ಎಲ್ಲಾ ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳು, ಎಲ್ಲಾ ಪುರಸಭೆ ಹಾಗೂ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಗಳು, ಎಲ್ಲಾ ನೀರಾವರಿ ಇಲಾಖೆಯ ಅಧಿಕಾರಿಗಳು ಹಾಗೂ ಎಲ್ಲಾ ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಅಧಿಕಾರಿಗಳು ಸಮನ್ವಯ ಹಾಗೂ ಸಹಯೋಗದೊಂದಿಗೆ ಮಾ.10ರೊಳಗೆ ಕುಡಿಯುವ ನೀರಿಗೆ ಸಂಬಂಧಿಸಿದ ಎಲ್ಲಾ ಕೆರೆಗಳನ್ನು ತುಂಬಿಸಬೇಕು. ಅಲ್ಲದೆ ಈ ಕಾರ್ಯಕ್ಕೆ ಯಾವುದೇ ಅಡೆತಡೆ ಉಂಟಾದಲ್ಲಿ ಪೋಲಿಸ ಇಲಾಖೆಯ ಸಹಕಾರ ಪಡೆದುಕೊಳ್ಳಬೇಕೆಂದು ಸೂಚಿಸಿದ್ದಾರೆ. ಈ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಬೇಕು. ಹಾಗೂ ಈ ಕಾರ್ಯದ ಮೇಲುಸ್ತುವಾರಿಯನ್ನು ಜಿಲ್ಲೆಯ ಎರಡು ಉಪ ವಿಭಾಗಗಳ ಸಹಾಯಕ ಆಯುಕ್ತರು ಮಾಡಬೇಕೆಂದು ಸೂಚಿಸಲಾಗಿದೆ.

ಕುಡಿಯುವ ನೀರಿನ ಕೆರೆಗಳನ್ನು ತುಂಬಿಸುವ ಮಹತ್ವದ ಕಾರ್ಯಕ್ಕೆ ಯಾವುದೇ ಸಾರ್ವಜನಿಕರು ಅಡ್ಡಪಡಿಸಬಾರದು. ಮುಂಬರುವ ಬೇಸಿಗೆ ದಿನಗಳಲ್ಲಿ ಕುಡಿಯುವ ನೀರಿನ ಕೊರತೆಯಾಗದಿರುವ ನಿಟ್ಟಿನಲ್ಲಿ ಸಾರ್ವಜನಿಕರು ಸಹಕರಿಸಿಬೇಕೆಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

# ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಹಣ ದುರ್ಬಳಕೆ ಖಂಡಿಸಿ ಫೆ. 27ರಿಂದ ಸರ್ಕಾರದ ವಿರುದ್ಧ ಬಿಜೆಪಿ ರಾಜ್ಯಾದ್ಯಂತ ಜನಾಂದೋಲನ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಫೆಬ್ರುವರಿ 27 ರಿಂದ ಮಾರ್ಚ್ 4 ವರೆಗೆ ದಲಿತ ದ್ರೋಹಿ ಸರ್ಕಾರದ ವಿರುದ್ದ ಜನಾಂದೋಲ ಹಮ್ಮಿಕೊಳ್ಳಲಾಗಿದೆ ಎಂದು ಜನಾಂದೋಲನದ ಸಂಯೋಜಕ ಮಹೇಂದ್ರನಾಯಕ ಹೇಳಿದರು.

ನಗರದಲ್ಲಿ ಬಿಜೆಪಿ ಜಿಲ್ಲಾ ಕಛೇರಿಯಲ್ಲಿ ಮಂಗಳವಾರ ಜರುಗಿದ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಹಣ ದುರ್ಬಳಕೆ ಮಾಡಿಕೊಂಡ ಕಾಂಗ್ರೆಸ್ ದಲಿತ ದ್ರೋಹಿ ಸರ್ಕಾರದ ವಿರುದ್ಧ ಜನಾಂದೋಲನ ಹೋರಾಟದ ಪೂರ್ವ ಭಾವಿ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ರಾಜ್ಯಾದ್ಯಂತ 14 ತಂಡಗಳಲ್ಲಿ ಫೆ. 27ರಿಂದ ಮಾರ್ಚ್ 4ರವರೆಗೆ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಹಣ ದುರ್ಬಳಕೆ ಮಾಡಿಕೊಂಡ ಕಾಂಗ್ರೆಸ್ ದಲಿತ ದ್ರೋಹಿ ಸರ್ಕಾರದ ವಿರುದ್ಧ ಜನಾಂದೋಲನ ಹಮ್ಮಿಕೊಳ್ಳಲಾಗಿದ್ದು,

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಶಾಸಕ ಪ್ರಭು ಚೌವ್ಹಾಣ್, ವಿಧಾನ ಪರಿಷತ್ ಸದಸ್ಯ ಸಾಬಣ್ಣ ತಳವಾರ, ಅವಣ್ಣ ಮ್ಯಾಳಿಕೇರಿ, ಇವರುಗಳ ನೇತೃತ್ವ 14 ತಂಡಗಳನ್ನು ರಚಿಸಲಾಗಿದೆ. ರಾಜ್ಯಾದ್ಯಂತ ಈ ತಂಡಗಳು ಫೆಬ್ರವರಿ 27ರಿಂದ ಮಾರ್ಚ 04 ವರೆಗೆ ಪ್ರವಾಸ ಮಾಡಲಿದ್ದು ಸರ್ಕಾರದ ವಿರುದ್ಧ ಬೃಹತ್ ಆಂಧೋಲನ ನಡಯಲಿದೆ. ಯಾದಗಿರಿ ಜಿಲ್ಲೆಯಲ್ಲಿಯೂ ಕೂಡಾ ಆಂದೋಲನದ ರೂಪರೇಶಗಳ ಬಗ್ಗೆ ತಿಳಿಸುತ್ತಾ ಬೃಹತ್ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಜಿಲ್ಲಾಡಳಿತ ಭವನಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜ ವಿಭೂತಿಹಳ್ಳಿ ಮಾತನಾಡಿ, ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಹಣ ದುರ್ಬಳಕೆ ಮಾಡಿಕೊಂಡ ಕಾಂಗ್ರೆಸ್ ಸರಕಾರ ವಿರುದ್ಧ ಈ ಜನಾಂದೋಲನದ ಹೋರಾಟ ವಿಭಿನ್ನವಾಗಿರಲಿದೆ. ಕಾರಣ ಎಲ್ಲ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಆಂದೋಲನವನ್ನು ಯಶಸ್ವಿಗೊಳಿಸಬೇಕು ಎಂದರು.

ರಾಜ್ಯ ಕಾರ್ಯದರ್ಶಿ ಮತ್ತು ನಗರಸಭೆ ಅಧ್ಯಕ್ಷೆ ಕು.ಲಲಿತಾ ಅನಪುರ, ಯುವ ಮುಖಂಡ ಮಹೇಶರಡ್ಡಿ ಮುದ್ನಾಳ, ಮಾಜಿ ನಿಗಮದ ಅಧ್ಯಕ್ಷ ದೇವಿಂದ್ರನಾಥ ನಾದ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಎಸ್.ಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಮಲ್ಲಿಕಾರ್ಜುನ ಹಳ್ಳಿಮನಿ, ಜಿಲ್ಲಾ ಉಪಾಧ್ಯಕ್ಷ ಬಸವರಾಜ ಸೋನ್ನದ ಮತ್ತು ಅಡಿವೆಪ್ಪ ಜಾಕ, ಜಿಲ್ಲಾ ಎಸ್.ಟಿ ಮೋರ್ಚಾ ಜಿಲ್ಲಾಧ್ಯಕ್ಷ ಚಂದಪ್ಪ ರಾಮಸಮುದ್ರ, ಎಸ್.ಸಿ ಮೋರ್ಚಾ ಜಿಲ್ಲಾಧ್ಯಕ್ಷ ಭೀಮಾಶಂಕರ ಬಿಲ್ಲವ್, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಸುನಿತಾ ಚೌವ್ಹಾಣ್, ವೆಂಕಟಪ್ಪ ಅವಂಗಪುರ, ಚಂದುಲಾಲ ಚೌದರಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರು ಕಾಮ ಸ್ವಾಗತಿಸಿದರು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪರುಶುರಾಮ ಕುರಕುಂದಿ ನಿರೂಪಿಸಿದರ, ಜಿಲ್ಲಾ ಕಾರ್ಯದರ್ಶಿ ಮಲ್ಲಿಕಾರ್ಜುನ ಹೋನಿಗೆರ ವಂದಿಸಿದರು..

# ಗುಲಬರ್ಗಾ ವಿಶ್ವವಿದ್ಯಾಲಯದ ಮೇಲೆ ಲೋಕಾಯುಕ್ತ ದಾಳಿ




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಫೆ.27–ಲೋಕಾಯುಕ್ತ ಎಸ್‌ಪಿ ಬಿ.ಕೆ.ಉಮೇಶ್ ಅವರ ನೇತೃತ್ವದಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯದ ಮೇಲೆ ಇಂದು ದಾಳಿ ನಡೆಸಲಾಗಿದೆ.

ವಿದ್ಯಾರ್ಥಿಗಳಿಗೆ ಅಂಕಪಟ್ಟಿ ನೀಡುವಲ್ಲಿ ವಿಳಂಬ, ನಕಲಿ ಪದವಿ ಪ್ರಮಾಣ ಪತ್ರ ಮತ್ತು ಲಂಚ ಪಡೆಯುತ್ತಿರುವ ಆರೋಪ ಕೇಳಿ ಬಂದ ಈ ಹಿನ್ನೆಲೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ಎಸ್‌ಪಿ ಬಿ.ಕೆ.ಉಮೇಶ್ ಅವರ ನೇತೃತ್ವದಲ್ಲಿ ಇಂದು ಬೆಳಿಗ್ಗೆ 10.30ರ ಸುಮಾರಿಗೆ ಏಕಕಾಲಕ್ಕೆ 5–ತಂಡಗಳಲ್ಲಿ ದಾಳಿ ನಡೆಸಿ ಹಾಜರಿ ಪುಸ್ತಕ, ಚಲನವಲನ ರಿಜಿಸ್ಟರ್, ಕ್ಯಾಸಿಸ್ಟರ್ ಪರಿಶೀಲನೆ ನಡೆಸಿದರು.

ಡಿವೈಎಸ್ಪಿಗಳಾದ ಗೀತಾ ಬೇನಾಳ, ಹನುಮಂತ್‌ರಾಯ, ಇನ್ಸ್‌ಪೆಕ್ಟರ್‌ಗಳಾದ ಸಂತೋಷ್, ಅರುಣ್‌ಕುಮಾರ್, ಸಿದ್ದರಾಯ, ರಾಜಶೇಖರ್ ಹಾಗೂ ಪೊಲೀಸ್ ಸಿಬ್ಬಂದಿಗಳಾದ ಬಸವರಾಜ್, ಪ್ರದೀಪ್‌ಕುಮಾರ್, ರೇಣುಕಾ, ಜಯಶ್ರೀ, ಮಸೂದ್, ಗುಂಡುರಾವ್ ಹಾಜರಿದ್ದರು.

# ಒಬ್ಬ ವ್ಯಕ್ತಿಯ ಮಾನಸಿಕ ಆರೋಗ್ಯವು ಆತನು ನಿರ್ವಹಿಸುವ ಕೆಲಸ ಕಾರ್ಯಗಳ ಮೇಲೆ ಅವಲಂಬನೆಯಾಗಿರುತ್ತದೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಫೆಬ್ರವರಿ27-ಮಾನಸಿಕ ಆರೋಗ್ಯವೆಂಬುದು ನಮ್ಮ ಭಾವನೆಗಳ ಅಭಿವ್ಯಕ್ತಿಯಾಗಿದ್ದು, ಬೇಡಿಕೆಗಳ ವ್ಯಾಪ್ತಿಗೆಯಶಸ್ವಿಯಾಗಿ ಹೊಂದಿಕೊಳ್ಳುವುದಾಗಿರುತ್ತದೆ. ಒಬ್ಬ ವ್ಯಕ್ತಿಯ ಮಾನಸಿಕ ಆರೋಗ್ಯವು ಆತನು ನಿರ್ವಹಿಸುವ ಕೆಲಸ ಕಾರ್ಯಗಳ ಮೇಲೆ ಅವಲಂಬನೆಯಾಗಿರುತ್ತದೆ ಎಂದು ಯಾದಗಿರಿ ಜಿಲ್ಲಾ ಕಾನೂನು ಸೇವೆಗಳ ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಗೌರವಾನ್ವಿತ ಶ್ರೀ ಮರಿಯಪ್ಪ ಅವರು ಹೇಳಿದರು.




ಯಾದಗಿರಿ ನಗರದ ಶ್ರೀ ಶಕ್ತಿ ಭವನದಲ್ಲಿ ಇತ್ತೀಚೀನ ನಡೆದ 2025ರ ಫೆಬ್ರವರಿ 25ರ ರಂದು ಬೆಂಗಳೂರು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ,ಯಾದಗಿರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸಂಯುಕ್ತಾಶ್ರಯದಲ್ಲಿ ಯಾದಗಿರಿ ಶಿಶು ಅಭಿವೃದ್ಧಿ ಇಲಾಖೆಯದಿಂದ ಮಕ್ಕಳಿಗಾಗಿ ಮಕ್ಕಳ ಸ್ನೇಹಿ ಕಾನೂನು ಸೇವೆಗಳು ಮತ್ತು ಮಾನಸಿಕ ಅಸ್ವಸ್ಥ ಹಾಗೂ ಬೌದ್ಧಿಕ ಅಸಾಮರ್ಥ್ಯ ಹೊಂದಿರುವ ವ್ಯಕ್ತಿಗಳಿಗೆ ಇರುವ ಕಾನೂನು ಸೇವೆಗಳ ಬಗ್ಗೆ ಐಖಗ-C, LSU-M ಸಮಿತಿ ಸದಸ್ಯರುಗಳಿಗೆ, ಪ್ಯಾನಲ್ ವಕೀಲರಿಗೆ ಹಾಗೂ ಸ್ವಯಂ ಸೇವಕರಿಗೆ, ತರಬೇತಿ ಕಾರ್ಯಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಮಾನಸಿಕ ಆರೋಗ್ಯವೆಂಬುದು ನಮ್ಮ ಭಾವನೆಗಳ ಅಭಿವ್ಯಕ್ತಿಯಾಗಿದ್ದು, ಬೇಡಿಕೆಗಳ ವ್ಯಾಪ್ತಿಗೆಯಶಸ್ವಿಯಾಗಿ ಹೊಂದಿಕೊಳ್ಳುವುದಾಗಿರುತ್ತದೆ. ಒಬ್ಬ ವ್ಯಕ್ತಿಯ ಮಾನಸಿಕ ಆರೋಗ್ಯವು ಆತನು ನಿರ್ವಹಿಸುವ ಕೆಲಸ ಕಾರ್ಯಗಳ ಮೇಲೆ ಅವಲಂಬನೆಯಾಗಿರುತ್ತದೆ. ವಿಪರೀತ ಒತ್ತಡಗಳ ಸಂದಂಭದಲ್ಲಿ ಮನುಷ್ಯನ ಮಾನಸಿಕ ಚಿತ್ತವು ಹಾಳಾಗುವ ಸಾಧ್ಯತೆ ಇರುತ್ತದೆ. ಮಾನಸಿಕ ಆರೋಗ್ಯಕರ ಸ್ಥಿತಿಯನ್ನು ಸಾಮಾನ್ಯವಾಗಿ ಸಕಾರಾತ್ಮಕ ಶಿಕ್ಷಣದ ರೂಪದಲ್ಲಿ ನೋಡಲಾಗುತ್ತದೆ. ವ್ಯಕ್ತಿಯು ಗುರುತಿಸಬಲ್ಲ ಯಾವುದೇ ಮಾನಸಿಕ ಆರೋಗ್ಯಸ್ಥಿತಿಯನ್ನು ಹೊಂದಿರದಿದ್ದರೂ ಕೂಡ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಬೇಕಾಗಿರುವುದು ಅತೀ ಮುಖ್ಯವಾಗಿರುತ್ತದೆ. ಸಂಪೂರ್ಣ ಸೃಜನಾತ್ಮಕ ಜೀವನ ನಡೆಸುವ ಸಾಮರ್ಥ ಹಾಗೂ ಜೀವನದ ಅನಿವಾರ್ಯ ಸವಾಲುಗಳೊಂದಿಗೆ ವ್ಯವಹರಿಸುವ ವ್ಯವದಾನವನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ. ಇಂದಿನ ಒತ್ತಡದ ಜೀವನದಲ್ಲಿ ಎಲ್ಲರೂ ಒಂದಿಲ್ಲಲೊಂದು ಬಗೆಯಲ್ಲಿ ಮಾನಸಿಕ ಗೊಂದಲವನು ವನ್ನು ಅನುಭವಿಸಬೇಕಾಗಿ ಬರುತ್ತದೆ. ಅದನ್ನು ಮೆಟ್ಟಿ ನಿಲ್ಲುವುದರ ಮೂಲಕ ಒತ್ತಡ ಜೀವನದಿಂದ ಹೊರಬರಬೇಕಾಗಿದೆ ಎಂದು ತಿಳಿಸಿದರು.

ಯಾದಗಿರಿ ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗ ಮನೋವೈದ್ಯರು ಡಾ.ಅಮೀತ್ ಕುಮಾರ ಕಾಳಗಿ ಅವರು ಮಾತನಾಡಿ, ಮಾನಸಿಕ ಕಾಯಿಲೆಯ ಲಕ್ಷಣಗಳ ಬಗ್ಗೆ ಮಾತನಾಡಿ ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ 100 ಕ್ಕೆ 10% ಜನರು ಅಲ್ಪಮಟ್ಟದ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದಾರೆ. ಖಿನ್ನತೆ, ಆತಂಕ,ಮನೋಗೀಳು ರೋಗ, ಮನೋದೈಹಿಕ ಬೇನೆಗಳು, ವ್ಯಕ್ತಿತ್ವ ದೋಷಗಳು 100 ಕ್ಕೆ 1% ಜನರು ತೀವ್ರತರದ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದಾರೆ ಚಿತ್ತವಿಕಲತೆ ಸ್ಕಿಜೋಫ್ರೇನಿಯಾ, ಬೈಪೋಲಾರ್.ಮನೋವಿಕಲತೆ ಮರುವಿನ ರೋಗ ಮತ್ತು ಮಾದಕ ವಸ್ತುಗಳ ವ್ಯಸನಗಳ ಪರಿಣಾಮವಾಗಿ ಬರುವಂತಹ ಮಾನಸಿಕ ಕಾಯಿಲೆಗಳ ಬಗ್ಗೆ ಮಾಹಿತಿ ನೀಡಿದರು.

ಚಿಕಿತ್ಸಾ ಮನೋಶಾಸ್ತ್ರ ತಜ್ಞರು ಮಲ್ಲಿಕಾರ್ಜುನ ಮ್ಯಾಗೇರಿ ಅವರು ಮಾತನಾಡಿ, ಒಬ್ಬ ವ್ಯಕ್ತಿವು ಸಾಮಾಜಿಕ ಮತ್ತು ಕೌಟುಂಬಿಕ ವ್ಯವಸ್ಥೆಯಲ್ಲಿ ಜೀವಿಸಬೇಕಾದರೆ ದೈಹಿಕ ಆರೋಗ್ಯ ಹೇಗೆ ಮುಖ್ಯವೋ ಅದೇ ರೀತಿ ಮಾನಸಿಕ ಆರೋಗ್ಯವೂ ಕೂಡ ಅಷ್ಟೆ ಪ್ರಾಮುಖ್ಯವಾಗಿದೆ. ಆದ್ದರಿಂದ ಮಾನಸಿಕ ಗೊಂದಲಗಳ ಪರಿಹಾರಕ್ಕಾಗಿ 14416 ಶುಲ್ಕ ರಹಿತ ದೊರವಾಣಿ ಸಂ-ಖ್ಯೆಗೆ ಟೇಲಿ ಮಾನಸ್‌ಗೆ ಕರೆ ಮಾಡಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ತಿಳಿಸಿದರು.

ಮಾನಸಿಕ ಆರೋಗ್ಯ ಶಿಕ್ಷಣದ ಸಂಯೋಜಕರಾದ ಶರಣಪ್ಪ ಸಿ.ಅಮರಪುರ ಅವರು ಮಾತನಾಡಿದರು, ಮಕ್ಕಳ ಹಕ್ಕುಗಳ ಕಾರ್ಯಕರ್ತರು ಯಾದಗಿರಿ ಮಾತನಾಡಿ ಮಕ್ಕಳಿಗಿರುವ ಹಕ್ಕುಗಳ ಬಗ್ಗೆ ಮತ್ತು ಮಕ್ಕಳ ಕಾನೂನು ಕುರಿತು ವಿವರವಾಗಿ ಮಾತನಾಡಿದರು. ಅಲ್ಲದೇ, ಮಕ್ಕಳ ನ್ಯಾಯ ಮಕ್ಕಳ ಘೋಷಣೆ ಮತ್ತು ರಕ್ಷಣೆ ಕಾಯ್ದೆ 2018, ಬಾಲ್ಯ ವಿವಾಹ ನಿಷೇಧ ಕಾಯ್ದೆ 2006, ಬಾಲ್ಯ ವಿವಾಹ ನಿಷೇಧ ಕಾಯ್ದೆ ಕರ್ನಾಟಕ ತಿದ್ದುಪಡಿ ಕಾಯ್ದೆ 2016, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ 2012, ಮಕ್ಕಳು ಮತ್ತು ಕಿಶೋರ ಕಾರ್ಮಿಕ ಪದ್ಧತಿ, ನಿಷೇಧ ಮತ್ತು ನಿಯಂತ್ರಣ ಕಾಯ್ದೆ 1986, ಅನೈತಿಕ ಮಾನವ ಕಳ್ಳ ಸಾಗಣಿಗೆ ತಡೆ ಕಾಯ್ದೆ 1956, ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಾಯ್ದೆ 2005ರ ಬಗ್ಗೆ ವಿವರಿಸಿ ತಿಳಿಸಿದರು.

ಮಕ್ಕಳ ಹಕ್ಕುಗಳ ಒಡಂಬಡಿಕೆಯು 1989 ನವಂಬರ್ 20ರಂದು ವಿಶ್ವ ಸಂಸ್ಥೆ ಜಾರಿಗೆ ತಂದಿದ್ದು ಬಗ್ಗೆ ತಿಳಿಸಿ ತಿಳಿಸಿದರು, ನಮ್ಮ ಭಾರತ ದೇಶವು 1992 ಡಿಸೆಂಬರ್ 11 ರಂದು ಸಹಿ ಮಾಡಿದೆ ಎಂದು ಹೇಳಿದರು. ನಂತರ ಮಕ್ಕಳ ಹಕ್ಕುಗಳ ಒಡಂಬಡಿಕೆಯ 54 ಪರಿಚ್ಛೇದಗಳನ್ನು ವಿವರಿಸಿದರು. ಹಾಗೂ ಒಂದರಿಂದ 40 ರವರೆಗೆ ಪರೀಕ್ಷೆಗಳು ಮಕ್ಕಳಿಗೆ ನೇರವಾಗಿ ಸಂಬಂಧ ಪಡುತ್ತವೆ ಮತ್ತು 41 ರಿಂದ 54 ಪರೀಕ್ಷೆಗಳು ಆಡಳಿತಾತ್ಮಕವಾಗಿ ಮಕ್ಕಳ ಹಕ್ಕುಗಳು ಉಲ್ಲಂಘನೆ ಆದಲ್ಲಿ ಪರಿಹಾರ ಕಂಡುಕೊಳ್ಳುವುದು ಮತ್ತು ವಿಶ್ವಸಂಸ್ಥೆಗೆ ವರದಿಯನ್ನು ಸಲ್ಲಿಸುವುದು ತಿಳಿಸುತ್ತವೆ ಎಂದರು. ಮಕ್ಕಳ ಹಕ್ಕುಗಳ ಪರಿಚ್ಛೇದಗಳನ್ನು ಸರಳೀಕರಣ ಮಾಡಿ ನಾಲ್ಕು ಪ್ರಮುಖ ಹಕ್ಕುಗಳ ಗುಂಪುಗಳನ್ನಾಗಿ ಮಾಡಲಾಗಿದೆ ಅವುಗಳು ಬದುಕುವ ಹಕ್ಕು, ರಕ್ಷಣೆಯ ಹಕ್ಕು, ವಿಕಾಸ ಹೊಂದುವ ಹಕ್ಕು, ಭಾಗವಹಿಸುವ ಹಕ್ಕು ಈ ನಾಲ್ಕು ಪ್ರಮುಖ ಹಕ್ಕುಗಳ ಬಗ್ಗೆ ವಿವರಿಸಿ, ನಮ್ಮ ಭಾರತ ಸರ್ಕಾರವು ಮಕ್ಕಳ ರಕ್ಷಣೆಗಾಗಿ, ಮತ್ತು ಪೋಷಣೆಗಾಗಿ 15 ಮಕ್ಕಳ ಕಾನೂನು ಕಾಯ್ದೆಗಳನ್ನು ಜಾರಿ ಮಾಡಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ಯಾನೇಲ್ ವಕೀಲರು ಕಾನೂನು ಸ್ವಯಂ ಸೇವಕರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಇಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಫೆ.27-ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮವನ್ನು ಫೆ.28 ರಂದು ಬೆಳಿಗ್ಗೆ 10.30 ಕ್ಕೆ ಬಳ್ಳಾರಿ ತಾಲ್ಲೂಕಿನ ಮೋಕಾ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮುಹಮ್ಮದ್ ಹಾರಿಸ್ ಸುಮೇರ್ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಮೋಕಾ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ (ಪ್ರೌಢ ವಿಭಾಗ) ಉಪಪ್ರಾಂಶುಪಾಲರಾದ ಬಿ.ಭಾರತಿ ಅವರು ಅಧ್ಯಕ್ಷತೆ ವಹಿಸುವರು.

ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ ಎಸ್.ಎಂ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಬಿ.ಉಮಾದೇವಿ, ಕ್ಷೇತ್ರ ಶಿಕ್ಷಣಾಧಿಕಾರಿ ನಯೀಮುರ್ ರೆಹಮಾನ್ ಕೆ.ಎಸ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿಯ ಗಣಿತ ವಿಷಯ ನಿರ್ವಾಹಕರಾದ ಬಸವರಾಜ. ಎಂ ಹಾಗೂ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಸಂಪನ್ಮೂಲ ವ್ಯಕ್ತಿಗಳಾಗಿ ಸಿಂಧವಾಳ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕ ಹೆಚ್.ಪೀರ್ ಭಾಷಾ, ಮೋಕಾ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ (ಪ್ರೌಢ ವಿಭಾಗ) ಶಿಕ್ಷಕ ಎಸ್.ಎಂ ಹಿರೇಮಠ ಮತ್ತು ಜಿಲ್ಲಾ ಪಂಚಾಯತ್‌ನ ಜಿಲ್ಲಾ ಯೋಜನಾ ಸಂಯೋಜಕ ರಾಮ ಚಂದ್ರರೆಡ್ಡಿ ಜಿ.ಬಿ ಸೇರಿದಂತೆ ಶಾಲಾ ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

# ಮಾ.03 ರಂದು ಮಹಾನಗರ ಪಾಲಿಕೆಯ ಆಯ-ವ್ಯಯ ಮತ್ತು ಸಾಮಾನ್ಯ ಸಭೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಫೆ.27-ಬಳ್ಳಾರಿ ಮಹಾನಗರ ಪಾಲಿಕೆಯ ಆಯ-ವ್ಯಯ ಮತ್ತು ಸಾಮಾನ್ಯ ಸಭೆಯನ್ನು ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್ ಅವರ ಅಧ್ಯಕ್ಷತೆಯಲ್ಲಿ ಮಾ.03 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾ ಪಂಚಾಯತ್‌ನ ಹೊಸ ಅಬ್ದುಲ್ ನಜೀರ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಮಹಾನಗರ ಪಾಲಿಕೆಯ ಆಯುಕ್ತ ಜಿ.ಖಲೀಲ್ ಸಾಬ್ ಅವರು ತಿಳಿಸಿದ್ದಾರೆ.

# ಅನಾಮಧೇಯ ಮೃತ ವ್ಯಕ್ತಿಯ ವಾರಸುದಾರರ ಪತ್ತೆಗೆ ಮನವಿ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಫೆ.27-ನಗರದ ಮೃತ್ಯುಂಜಯನಗರ ರೈಲ್ವೆ ಗೇಟ್ ಬ್ರಿಡ್ಜ್ ಹತ್ತಿರ ಹಣ್ಣಿನ ಅಂಗಡಿ ಪಕ್ಕದಲ್ಲಿ ಅಂದಾಜು 40 ರಿಂದ 45 ವರ್ಷದ ಅನಾಮಧೇಯ ವ್ಯಕ್ತಿಯು ಯಾವುದೋ ಖಾಯಿಲೆಯಿಂದ ಮಲಗಿದ್ದ ಸ್ಥಳದಲ್ಲಿಯೇ ಫೆ.25 ರಂದು ಮೃತಪಟ್ಟಿದ್ದು, ಈ ಕುರಿತು ಬಳ್ಳಾರಿ ಎ.ಪಿ.ಎಂ.ಸಿ ಯಾರ್ಡ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತನ ವಾರಸುದಾರರ ಪತ್ತೆಗೆ ಸಹಕರಿಸಬೇಕು ಎಂದು ಪೋಲೀಸ್ ಸಬ್ ಇನ್ಸ್ಪೆಕ್ಟರ್ ಅವರು ಮನವಿ ಮಾಡಿದ್ದಾರೆ.

ಮೃತನ ಚಹರೆ:

ಎತ್ತರ 5.6 ಅಡಿ, ದುಂಡು ಮುಖ, ಕಪ್ಪು ಮೈಬಣ್ಣ,. ಸಾಧಾರಣ ತೆಳ್ಳನೆ ಮೈಕಟ್ಟು ಹೊಂದಿದ್ದು, ಕಪ್ಪು ಮಿಶ್ರಿತ ಮತ್ತು ಬಿಳಿ ಕೂದಲು, ಕಪ್ಪು ಮೀಸೆ ಮತ್ತು ಬಿಳಿ ಗಡ್ಡ ಇರುತ್ತದೆ.

ಮೃತ ದೇಹದ ಮೈಮೇಲೆ ಒಂದು ಮಾಸಿದ ಕಪ್ಪು, ನೀಲಿ ಮತ್ತು ಬಿಳಿ ಬಣ್ಣದ ಟೀ ಶರ್ಟ್ ಮತ್ತು ನಸಿ ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ.

ಮೃತನ ವಾರಸುದಾರರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಎ.ಪಿ.ಎಂ.ಸಿ ಯಾರ್ಡ ಪೋಲಿಸ್ ಠಾಣೆ ದೂರವಾಣಿ ಸಂಖ್ಯೆ; 08392-250033, 9480803096 ಅಥವಾ ಪೋಲಿಸ್ ಕಂಟ್ರೋಲ್ ರೂಂ, ಬಳ್ಳಾರಿ ದೂರವಾಣಿ ಸಂಖ್ಯೆ; 08392258100 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯಲಬುರ್ಗಾ ಬಿಜೆಪಿ ಮಂಡಲದಿಂದ ಮಾಜಿ ಮುಖ್ಯಮಂತ್ರಿ

# ಬಿಎಸ್ ಯಡಿಯೂರಪ್ಪ ಅವರ 82ನೇ ಹುಟ್ಟುಹಬ್ಬ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ಇಂದು ಕುಕನೂರಿನ ವಿದ್ಯಾನಂದ ಗುರುಕುಲ್ ಕಾಲೇಜಿನ ಆವರಣದಲ್ಲಿ ಇರುವ ವಿದ್ಯಾನಂದ ಗುರುಕುಲ ವೃದ್ಧಾಶ್ರಮದಲ್ಲಿ

ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ 82ನೇ ಹುಟ್ಟುಹಬ್ಬವನ್ನು ಕುಕನೂರು ಪಟ್ಟಣದ ವಿದ್ಯಾನಂದ ಗುರುಕುಲ್ ಕಾಲೇಜಿನ ಆವರಣದಲ್ಲಿರುವ ವೃದ್ಧಾಶ್ರಮದಲ್ಲಿ ಅಂದ ಅನಾಥರು ಹಾಗೂ ಹಿರಿಯ ಜೀವಗಳೊಂದಿಗೆ ಹಣ್ಣುಹಂಪಲು ಹಾಲು ವಿತರಣೆ ಮಾಡುವ ಮುಖಾಂತರ ಹುಟ್ಟುಹಬ್ಬ ಆಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲದ ಅಧ್ಯಕ್ಷರಾದ ಮಾರುತಿ ಗಾವರಾಳ, ಹಾಗೂ ಮಾಜಿ ಸಚಿವರಾದ ಹಾಲಪ್ಪ ಆಚಾರ ಅವರ ಪುತ್ರರಾದ ಅನಿಲ ಆಚಾರ, ಬಸವನಗೌಡ ತೊಂಡಿಹಾಳ, ಶಿವಕುಮಾರ ನಾಗಲಾಪುರಮಠ, ಮಂಜುನಾಥ ನಾಡಗೌಡ್ರು, ಬಸವರಾಜ ಆಳಕೇರಿ, ಕರಬಸಯ್ಯ ಬಿನ್ನಾಳ,

ಬಿಜೆಪಿ ಯುವ ಮೋರ್ಚ ತಾಲೂಕ ಅಧ್ಯಕ್ಷ ಕಲ್ಲೇಶಪ್ಪ ಕರಮುಡಿ, ಬಿಜೆಪಿ ಎಸ್ ಸಿ ಮೋರ್ಚ ತಾಲೂಕ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ್ ಕಾಳಿ. ಚಂದ್ರು ಬಗನಾಳ, ಗಂಗಾಧರ ನಾರಾಯಣ, ಕನಕಪ್ಪ ಬ್ಯಾಡರ, ಸಿದ್ದು ವಾಲ್ಮೀಕಿ, ಮಾಂತೇಶ್ ಹೂಗಾರ, ನಾಗಪ್ಪ ಕಲ್ಮನಿ, ಮಧು ಕಲ್ಮನಿ, ಮಲ್ಲಿಕಾರ್ಜುನ್ ಚೌದ್ರಿ, ಜಗನ್ನಾಥ್ ಭೋವಿ, ವೀರೇಶ ಸಬರದ, ವಿನಾಯಕ ಯಾಳಗಿ, ರಾಜಶೇಖರ ದ್ಯಾ0ಪೂರ, ವಿನಯ್ ಸರಗಣಾಚಾರ, ಮಂಜು ಬಡಿಗೇರ್, ಮಂಜು ಮಾಲಗಿತ್ತಿ, ರವಿ ಸಿಂದೆ, ಹಾಗೂ ಕುಕುನೂರು ನಗರದ ಪಟ್ಟಣ ಪಂಚಾಯಿತಿಯ ಸರ್ವ ಸದಸ್ಯರು ಬಿಜೆಪಿ ಪಕ್ಷದ ಹಿರಿಯರು ಯುವಕ ಮಿತ್ರರು ಇದ್ದರು.

ಜಾಹೀರಾತಿಗಾಗಿ ಇಂದೇ
ಸಂಪರ್ಕಿಸಿ:8971850542

# ಕಾವಲು ಸಮಿತಿಗಳು ಸರಿಯಾಗಿ ಕಾರ್ಯನಿರ್ಹಿಸಿದ್ದಲ್ಲಿ ಬಾಲ್ಯ ವಿವಾಹ, ಬಾಲ ಗರ್ಭಿಣಿ ನಿರ್ಮೂಲನೆ ಮಾಡಲು ಸಾಧ್ಯ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಫೆಬ್ರವರಿ 27-ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯಡಿ, ಬಾಲ್ಯ ವಿವಾಹ ನಿಷೇಧ, ಬಾಲ ಗರ್ಭಿಣಿ ನಿರ್ಮೂಲನೆ, ಕಾವಲು ಸಮಿತಿ ಬಲವರ್ಧನೆ ಕುರಿತು ತರಬೇತಿಯ ಕಾರ್ಯಕ್ರಮ ಕಾವಲು ಸಮಿತಿಗಳು ಸರಿಯಾಗಿ ಕಾರ್ಯನಿರ್ಹಿಸಿದ್ದಲ್ಲಿ ಬಾಲ್ಯ ವಿವಾಹ, ಬಾಲ ಗರ್ಭಿಣಿ ನಿರ್ಮೂಲನೆ ಮಾಡಲು ಸಾಧ್ಯ ಎಂದು ಯಾದಗಿರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ವೀರನಗೌಡ ಅವರು ತಿಳಿಸಿದ್ದಾರೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪಂಚಾಯತ್ ರಾಜ್ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಹಾಪೂರ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಸಂಯುಕ್ತಾಶ್ರಯದಲ್ಲಿ ವೇದಿಕೆ ಮೇಲೆ ಉಪಸ್ಥಿತರಿರುವ ಗಣ್ಯಮಾನ್ಯರು ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಿಷನ್ ಶಕ್ತಿ ಯೋಜನೆಯ "ಬೇಟಿ ಬಚಾವೋ, ಬೇಟಿ ಪಡಾವೋ" ಯೋಜನೆಯಡಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಸಹಾಯಕಿಯರು, ಆಶಾ ಕಾರ್ಯಕರ್ತೆಯರು" ಅವರಿಗೆ ಬಾಲ್ಯ ವಿವಾಹ ನಿಷೇಧ, ಬಾಲ ಗರ್ಭಿಣಿ ನಿರ್ಮೂಲನೆ ಹಾಗೂ ಕಾವಲು ಸಮಿತಿ ಬಲವರ್ಧನೆ ಕುರಿತು ತರಬೇತಿ ನೀಡಿದರು. ಹಾಗೂ ಬಾಲ್ಯ ವಿವಾಹ ಒಂದು ಅನಿಷ್ಟಾ ಪದ್ದತಿಯಾಗಿದ್ದು ಇದನ್ನು ಸಂಪೂರ್ಣವಾಗಿ ತೋಲಗಿಸಬೇಕಾಗಿದೆ, ಬಾಲ್ಯ ವಿವಾಹ ನಿಷೇಧ ಹಾಗೂ ಪೋಕ್ಸೋ ಕಾಯ್ದೆಗಳಲ್ಲಿ ತುಂಬಾ ಕಠಿಣ ಶಿಕ್ಷೆಗಳಿವೆ. ಬಾಲ್ಯ ವಿವಾಹ ಮಾಡಿದರೆ ಕುಟುಂಬಗಳು ಹಾಗೂ ಅಪ್ರಾಪ್ತ ಬಾಲಕಿ ಸಹಿತ ಸಂಕಷ್ಟಕ್ಕೆ ಸಿಲುಕುತ್ತಾರೆ, ಅಪ್ರಾಪ್ತ ಬಾಲಕಿಯು ವೈವಾಹಿಕ ಜೀವನ ನಡೆಸಲು ದೈಹಿಕವಾಗಿ ಸಮರ್ಥರಾಗಿರುವುದಿಲ್ಲ ಎಂದು ಹೇಳಿದರು.

ಬಾಲ್ಯ ವಿವಾಹ ಸಾಮಾಜಿಕ ಪಿಡುಗಾಗಿದ್ದು ಇಂತಹ ಅನಿಷ್ಟಾ ಪದ್ದತಿಯನ್ನು ಹೋಗಲಾಡಿಸಲು ಸಮನ್ವಯ ಇಲಾಖೆಗಳು ನವಗ್ರಹಗಳ ರೂಪದಲ್ಲಿ ಕಾರ್ಯನಿರ್ವಹಿಸಬೇಕು ಮತ್ತು ಗ್ರಾಮ ಪಂಚಯಾತ್ ವ್ಯಾಪ್ತಿಗಳಲ್ಲಿ ರಚನೆ ಮಾಡಿರುವ ಕಾವಲು ಸಮಿತಿಗಳು ಸರಿಯಾಗಿ ಕಾರ್ಯನಿರ್ಹಿಸಿದ್ದಲ್ಲಿ ಬಾಲ್ಯ ವಿವಾಹ ಮತ್ತು ಬಾಲ ಗರ್ಭಿಣಿ ನಿರ್ಮೂಲನೆ ಮಾಡಲು ಸಾಧ್ಯವಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ತಾಲ್ಲೂಕು ಕಾರ್ಯನಿರ್ವಹಕಾದಿಕಾರಿಗಳಾದ ಬಸವರಾಜ ಶರಭೈ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀಮಲ್ಲಣ್ಣ ದೇಸಾಯಿ, ದೋರನಹಳ್ಳಿ ವೈದ್ಯಧಿಕಾರಿ ಶ್ರೀಮತಿ ಡಾ. ರಾಜೇಶ್ವರಿ, ಜಿಲ್ಲಾ ಮಿಷನ್ ಸಂಯೋಜಕರು ಹಾಗೂ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಯಲ್ಲಪ್ಪ.ಕೆ, ಮೇಲ್ವಿಚಾರಕಿಯರು ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ಹಾಗೂ ಶಿಶು ಅಭಿವೃದ್ಧಿ ಯೋಜನೆ ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ವೃದ್ಧರಿಗೆ ಹಾಲು ಹಣ್ಣು ವಿತರಣೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ನಗರದ ಸುರಬಿ ವೃದ್ಧಾಶ್ರಮದಲ್ಲಿ ಇಂದು ಶ್ರೀ ಸಿದ್ದರಾಮೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಕೊಪ್ಪಳ ಇದರ ವೈಚ್ಛಾರಿಕ ಹಿನ್ನೆಲೆಯಲ್ಲಿ ಹಣ್ಣುಹಂಪಲಗಳನ್ನು ವಿತರಿಸಲಾಯಿತು.

ಈ ಮೂಲಕ ಮುಂದಿನ ದಿನಗಳಲ್ಲಿ ನಮ್ಮ ಸಂಸ್ಥೆ ಇನ್ನು ಹೆಚ್ಚಿನ ಉನ್ನತಿಗೆ ಏರಲು ಆಶ್ರಮಕ್ಕೆ ಬೇಟೆ ಕೊಟ್ಟು ಅವರ ಆಶಿ9ವಾದದೊಂದಿಗೆ ಅವರ ಜೊತೆ ಮತ್ತು ಆಶ್ರಮಕ್ಕೆ ಕುಂದುಕೊರತೆಗಳು ಕಂಡು ಬಂದಲ್ಲಿ ನಮ್ಮ ಸಂಸ್ಥೆ ಸದಾ ಕಾಲ ನಿಮ್ಮ ಜೊತೆ ನಿಮ್ಮ ಮಕ್ಕಳಾಗಿ ನಿಮಗಾಗಿ ನಾವು ಶ್ರಮಿಸುತ್ತೇವೆ ಎಂಬುವ ಧೈರ್ಯದ ಹಿತನುಡಿಗಳೊಂದಿಗೆ, ಸದಾ ಕಾಲ ನಗು ನಗುತ್ತಾ ಇರಿ ಎಂದು ಆಶಿಸಲಾಯಿತು

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಹೇಮಾವತಿ ಬಳ್ಳಾರಿ, ಉಪಾಧ್ಯಕ್ಷರು ರಾಮು ಪೂಜಾರ, ನಿರ್ದೇಶಕ ಅಮರೇಶ್ ಹಿತ್ತಲಮನಿ, ನವೀನ್ ಅಗಡಿ, ಯಲ್ಲಪ್ಪ ಉಪ್ಪಾರ, ಸಿಬ್ಬಂದಿ ವರ್ಗದರು, ಭಾಗ್ಯಶ್ರೀ, ಮೈಬೂಬ್ ಹನುಮಂತ ಪೂಜಾರ, ಬಾಳಪ್ಪ ಡೊಳ್ಳಿ, ಮೊಮ್ಮದ್ ರಫಿ. ಶಾಂತಪ್ಪ

ಭೋವಿ ಸಮಾಜದ ಹಿರಿಯ ಮುಖಂಡರು.ರಾಮಣ್ಣ ಅಳವಂಡಿ, ಕೃಷ್ಣ ಮಲ್ಲಸಮುದ್ರ ,ರಾಘು ಕುಣಿಕೇರಿ, ವೆಂಕಟೇಶ್ ಪೂಜಾರ, ಉಪಸ್ಥಿತರಿದ್ದರು.

# ಪ್ರಯಾಗ್ ರಾಜ್ ಗೆ ತೆರಳುತ್ತಿದ್ದ ವೇಳೆ ವಾಹನ ಅಪಘಾತ: ಜಿಲ್ಲೆಯ ಇಬ್ಬರ ಸಾವು

ಮಲ್ಲಮ್ಮ ನುಡಿ ವಾರ್ತೆ

ವಿಜಯಪುರ: ಫೆ.26: ಉತ್ತರ ಪ್ರದೇಶದ ಪ್ರಯಾಗ್ ರಾಜ್ ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳಕ್ಕೆ ತೆರಳುತ್ತಿದ್ದ ಜಿಲ್ಲೆಯ ಚಡಚಣ ಪಟ್ಟಣದ ಯಾತ್ರಾರ್ಥಿಗಳಿಬ್ಬರು ಗುಜರಾತ್ ರಾಜ್ಯದ ಪೊರ್ ಬಂದರ್ ಸಮೀಪ ವಾಹನ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಚಡಚಣ ಪಟ್ಟಣದ ವಿಶ್ವನಾಥ ಅವಜಿ (55) ಹಾಗೂ ಮಲ್ಲಿಕಾರ್ಜುನ ಸದ್ದಲಗಿ (40) ಮೃತಪಟ್ಟವರು.

ಚಾಲಕ ಸಮೇತ ಒಟ್ಟು 17 ಮಂದಿ ಪ್ರಯಾಣಿಸುತ್ತಿದ್ದ ಮ್ಯಾಕ್ಸಿ ಕ್ಯಾಬ್ ನಲ್ಲಿ ನಾಲ್ವರು ಪ್ರಯಾಣಿಕರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಗಾಯಾಳುಗಳಿಗೆ ಪೊರ್ ಬಂದರ್ ನ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಚಾಲಕನಿದ್ದೆಮಂಪರಿನಲ್ಲಿದ್ದಾಗ, ನಿಂತಿದ್ದ ಟಿಪ್ಪರಗೆ ಡಿಕ್ಕಿಯಾದ ಹಿನ್ನೆಲೆ ಈ ಅಪಘಾತ ಸಂಭವಿಸಿದೆ ಎನ್ನಲಾಗಿದೆ.

14ನೇ ವರ್ಷದ ಜಾನಪದ ಜಾಗರಣೆ/ ಸಾಧಕರಿಗೆ ಸನ್ಮಾನ/ ಹೆಚ್ಚಿನ ಸಂಖ್ಯೆಯಲ್ಲಿ ಜನತೆ ಭಾಗಿ

## ವೀರಕೇಸರಿ ಕಲಾ ಸಾಂಸ್ಕೃತಿಕ,ಗ್ರಾಮೀಣಾಭಿವೃದ್ಧಿ ಸಂಸ್ಥೆ ಕಾರ್ಯ ಇತರರಿಗೂ ಮಾದರಿ'



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ; ನಮ್ಮ ನಾಡು ವೈವಿಧ್ಯಮಯವಾದ ಜನಪದ ಕಲೆಗಳಿಂದ ಶ್ರೀಮಂತವಾಗಿದ್ದು, ಇಂಥ ಕಲೆಗಳನ್ನು ನಾವು ಜೀವಂತವಾಗಿರಿಸಿ ಕಲೆಗಳಿಗೆ, ಕಲಾವಿದರಿಗೆ ಪ್ರೋತ್ಸಾಹ ನೀಡುವ ಕಾರ್ಯ ಮಾಡುತ್ತಿರುವ ವೀರಕೇಸರಿ ಕಲಾ ಸಾಂಸ್ಕೃತಿಕ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಕಾರ್ಯ ಇತರರಿಗೂ ಮಾದರಿ ಎಂದು ನಮ್ಮ ಕರ್ನಾಟಕ ಸೇನೆಯ ರಾಜ್ಯಾಧ್ಯಕ್ಷ ಬಸವರಾಜ ಪಡು–ಕೋಟೆ ಹೇಳಿದರು.

ಭೀಮರಾಯನಗುಡಿಯ ಕಮ್ಯೂನಿಟಿ ಹಾಲ್ ಆವರಣದಲ್ಲಿ ವೀರಕೇಸರಿ ಕಲಾ, ಸಾಂಸ್ಕೃತಿಕ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ಮಹಾಶಿವರಾತ್ರಿ ಪ್ರಯುಕ್ತ 14 ನೇ ವರ್ಷದ ಜಾನಪದ ಜಾಗರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಅಳಿವಿನ ಅಂಚಿನಲ್ಲಿರುವ ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವಲ್ಲಿ ಮಾಡುತ್ತಿರುವ ಪ್ರಯತ್ನಗಳು ಶ್ಲಾಘನೀಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ವೀರಕೇಸರಿ ಕಲಾ ಸಾಂಸ್ಕೃತಿಕ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ಭೀಮಣ್ಣ ಶಖಾಪುರ ಮಾತನಾಡಿ ಮೀತಿ ಮೀರಿದ ಯಾಂತ್ರೀಕರಣದಿ0ದಾಗಿ ಪ್ರಸ್ತುತ ಜಾನಪದ ಸೊಬಗು ಕಾಣುವುದು ಅಪರೂಪವಾಗಿದೆ. ಗ್ರಾಮೀಣ ಕಲೆ ಮತ್ತು ಸೊಗಡು ಎಲ್ಲೆಡೆ ಪಸರಿಸಬೇಕಿದೆ ಆ ನಿಟ್ಟಿನಲ್ಲಿ ಪ್ರತಿ ವರ್ಷವು ಜಾನಪದ ಜಾಗರಣೆ ಕಾರ್ಯಕ್ರಮ ಮಾಡುತ್ತಾ ಗ್ರಾಮೀಣ ಭಾಗದಲ್ಲಿರುವ ಕಲೆಯಿರುವ ಪ್ರತಿಭೆಗಳನ್ನು ಗುರುತಿಸುವ ಕಾರ್ಯ ಸಂಸ್ಥೆ ಮಾಡಿಕೊಂಡು ಬರುತ್ತಿದೆ ಎಂದರು.

ಪೂಜ್ಯ ರಾಜುಗುರು ಸ್ವಾಮಿಜಿಗಳು ಬ್ರಹ್ಮಶ್ರೀ ಪೀಠ ಹುಬ್ಬಳ್ಳಿ, ಪೂಜ್ಯ ಮಲ್ಲಿಕಾರ್ಜುನ ಮುತ್ಯಾ, ಪರಶುರಾಮ ಮುತ್ಯಾ ದಿವ್ಯ ಸಾನಿಧ್ಯ ವಹಿಸಿ ಕೊಂಡಿದ್ದರು.

ಈ ಸಂದರ್ಭದಲ್ಲಿ ಯಾದಗಿರಿ ನಗರಸಭೆ ಅಧ್ಯಕ್ಷೆ ಲಲಿತ ಅನಪೂರ, ಮೋನಪ್ಪ ಶಿರವಾಳ, ಮಹಾರಾಜ ದಿಗ್ಗಿ, ರಾಯಪ್ಪ ಸಾಲಿಮನಿ, ನಾಗರಾಜ ಜಾಕನಹಳ್ಳಿ, ಉಮೇಶಗೌಡ, ಅಮರೇಶ ಬಿಲ್ಲವ, ಶ್ರೀದೇವಿ ಕಟ್ಟಿಮನಿ, ಶಶಿಪಾಲರೆಡ್ಡಿ, ಅಂಬ್ರೇಶ ದೊರನಹಳ್ಳಿ ವಿಶ್ವನಾಥರೆಡ್ಡಿ ದೇಸಾಯಿ, ಸದ್ಧಂ ಪಟೇಲ್, ಮಹಾದೇವ ದೇಸಾಯಿ, ಈರಪ್ಪ ನಾಯಕ್ ಸೇರಿದಂತೆ ಇತರರು ವೇದಿಕೆ ಮೇಲಿದ್ದರು. ಸಿದ್ದು ಪಟ್ಟೇದಾರ ಸ್ವಾಗತಿಸಿದರು, ತಿಪ್ಪಣ್ಣ ತಳವಾರ್ ನಿರೂಪಿಸಿದರು, ಬಸವರಾಜ ಗಂಗಾನೂರ್ ವಂದಿಸಿದರು.

ಸಾಧಕರಿಗೆ ಸನ್ಮಾನ;

ಮಲ್ಲೇಶ ಬಸಪ್ಪ ಕೊನ್ನಾಳ( ಸಾಹಿತ್ಯ ಸೇವಾ ಕ್ಷೇತ್ರ), ವಿರೇಶ ಕೆಂಭಾವಿ (ಮಾಧ್ಯಮ ಕ್ಷೇತ್ರ), ಲಕ್ಷ್ಮಣ ಗುತ್ತೆದಾರ ಜಾನಪದ, (ಸಾಹಿತ್ಯ ಸೇವಾ ಕ್ಷೇತ್ರ), ಪಿಎಸ್ಐ ವೆಂಕಟೇಶ ನಾಯಕ (ಸರ್ಕಾರಿ ಸಾರ್ವಜನಿಕ ಕ್ಷೇತ್ರ), ನಿರ್ಮಲ ಅವಂಟಿ(ಸಾಮಾಜಿಕ ಸೇವಾ ಕ್ಷೇತ್ರ ಮಹಿಳಾ ವಿಭಾಗ), ಶಿವಪುತ್ರ ಜವಳಿ (ಸಾಮಾಜಿಕ ಸೇವಾ ಕ್ಷೇತ್ರ ಪುರುಷ ವಿಭಾಗ) , ಪ್ರಭು ಚಾಮನೂರ(ಕ್ರೀಡಾ ಸೇವಾ ಕ್ಷೇತ್ರ), ಮಲ್ಲಿಕಾರ್ಜುನ ಕಮತಗಿ(ಕಲೆ ಮತ್ತು ಸಾಹಿತ್ಯ ಸೇವಾ ಕ್ಷೇತ್ರ), ಶ್ರೀಮತಿ ವಾಣಿಶ್ರೀ, ಶ್ರೀಮತಿ ಮಲ್ಲಮ್ಮ (ಶೈಕ್ಷಣೀಕ ಸೇವಾ ಕ್ಷೇತ್ರ) ಅವರಿಗೆ ವೀರಕೇಸರಿ ಸೇವಾ ಸಿರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬಾಕ್ಸ್;

ಜೀ ಕನ್ನಡ ಎಂಟರಟೆನಮೆಂಟ ಶೋ ಬೆಂಗಳೂರು, ಕಾಮಿಡಿ ಕಿಲಾಡಿಗಳು ತಂಡ, ಸರಿಗಮಪ ಹಾಗೂ ಕಲರ್ಸ್ ಕನ್ನಡ ಶೋ, ಕನ್ನಡ ಕೋಗಿಲೆ ತಂಡ, ತಕಧಿಮಿತ ತಂಡಗಳಿಂದ ರಸಮಂಜರಿ ಕಾರ್ಯಕ್ರಮ ಜರುಗಿದವು. ಸಂಗೀತ ಕಲಾವಿದರಾದ ಬಾಳು ಬೆಳಗುಂದಿ, ಶರಧಿ ಪಾಟೀಲ, ಕಶ್ಯಪ, ಶ್ರವಣಕುಮಾರ, ಕಾಸಿಂ ಅಲಿ ಅವರಿಂದ ಸಂಗೀತ ಕಾರ್ಯಕ್ರಮ ಹಾಗೂ ಅಪ್ಪಣ್ಣ, ಮಿಂಚು, ಉಮೇಶ ಕಿನ್ನಾಳ ಮುಂತಾದ ಕಲಾವಿದರಿಂದ ಕಾಮಿಡಿ, ರಸಮಂಜರಿ ಕಾರ್ಯಕ್ರಮಗಳು ನಡೆದವು.

'ಬಾಳು' ನೋಡಲು ಕಿಕ್ಕೀರಿದು ಸೇರಿದ ಜನ;

ಸುಮಾರು 14 ವರ್ಷಗಳಿಂದ ನಡೆದುಕೊಂಡು ಬರುತ್ತಿರುವ ಜಾನಪದ ಜಾಗರಣೆ ಕಾರ್ಯಕ್ರಮದಲ್ಲಿ ಇದೇ ಮೊದಲ ಭಾರಿಗೆ ನೀರಿಕ್ಷೆಗೂ ಮೀರಿ ಸಾವಿರಾರು ಸಂಖ್ಯೆಯಲ್ಲಿ ಜನತೆ ಸೇರಿದ್ದರು. ಬಾಳು ಬೆಳಗುಂದಿ ಅವರು ವೇದಿಕೆ ಬರಲು ತಡವಾದರೂ ಸಹ ಜನ ಸಮಯವನ್ನು ಲೆಕ್ಕಿಸದೆಯೇ ಶಾಂತ ರೀತಿಯಲ್ಲೇ ಕುಳಿತಿದ್ದರು. ಬಾಳು ಬೆಳಗುಂದಿ ವೇದಿಕೆಗೆ ಬಂದ ತಕ್ಷಣ ಅಭಿಮಾನಿಗಳು ಬಾಳುನ ಮಾತಿನುದ್ದಕ್ಕೂ ಎದ್ದುನಿಂತು ಶಿಳ್ಳೆ ಚಪ್ಪಾಳೆ ಹೊಡೆದು ಕುಣಿದು ಕುಪ್ಪಳಿಸಿದರು.

ಪುರಸಭೆ ಸದಸ್ಯರ ಪೂರ್ವಭಾವಿ ಸಭೆಯಲ್ಲಿ ಎಇಇ ಬಸವರಾಜ ಮಾಹಿತಿ

# ಮಾರ್ಚ್ 1ರಂದು ಅಮೃತ್ 2.0 ಯೋಜನೆಗೆ ಭೂಮಿ ಪೂಜೆ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ಕೇಂದ್ರ ಪುರಸ್ಕೃತ ಅಮೃತ 2.0 ಯೋಜನೆ ಅಡಿ ತಾಳಿಕೋಟಿ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜು ವಿತರಣಾ ವ್ಯವಸ್ಥೆ ಕಲ್ಪಿಸುವ ಯೋಜನೆ 24/7( ಹಂತ 1&2) ಕಾಮಗಾರಿಗೆ ಮಾರ್ಚ್ 1 ರಂದು ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಂ.ಬಿ. ಪಾಟೀಲರು ಚಾಲನೆ ನೀಡಲಿದ್ದು, ಮುದ್ದೇಬಿಹಾಳ ಮತಕ್ಷೇತ್ರ ಶಾಸಕರಾದ ಅಪ್ಪಾಜಿ ನಾಡಗೌಡರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬಾಗೇವಾಡಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಬಸವರಾಜ ಬಾಗಲಕೋಟ ಸಭೆಗೆ ಮಾಹಿತಿ ನೀಡಿದರು. ಗುರುವಾರ ಪಟ್ಟಣದ ಪುರಸಭೆಯಲ್ಲಿ ಜಿಲ್ಲಾಡಳಿತ ವಿಜಯಪುರ, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಪುರಸಭೆ ತಾಳಿಕೋಟಿ ಇವರ ಸಹಯೋಗದಲ್ಲಿ ಹಮ್ಮಿಕೊಂಡ ಪುರಸಭೆ ಸದಸ್ಯರು ಹಾಗೂ ಅಧಿಕಾರಿಗಳ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಸಭೆಗೆ ಯೋಜನೆಯ ವಿವರ ನೀಡಿದ ಅವರು ಈ ಯೋಜನೆ ಕೇಂದ್ರ ರಾಜ್ಯ ಹಾಗೂ ಸ್ಥಳೀಯ ಸಹಯೋಗದ ಅನುದಾನದಲ್ಲಿ ನಡೆಯಲಿದ್ದು ಒಟ್ಟು ಎಂಟು ಹಂತದಲ್ಲಿ ನಡೆಯಲಿರುವ ಕಾಮಗಾರಿಗೆ ಒಂದನೇ ಹಂತದಲ್ಲಿ ರೂ 14.55 ಕೋಟಿ, ಎರಡನೇ ಹಂತದಲ್ಲಿ ರೂ.17.20 ಕೋಟಿ ಅನುದಾನದ ಇರುವುದು. ಎರಡು ವರ್ಷದ ಅವಧಿಯೊಳಗೆ ಈ ಯೋಜನೆಯ ಕಾಮಗಾರಿ ಪೂರ್ಣಗೊಳ್ಳಲಿದೆ. ನಾರಾಯಣಪುರ ಎಡದಂಡೆ ಕಾಲುವೆ ಜಲಧಾರೆಯಿಂದ ನೀರನ್ನು ಸರಬರಾಜು ಮಾಡಿಕೊಳ್ಳಲಾಗುವುದು. ಈ ಯೋಜನೆಯಿಂದ ಸುಮಾರು 30ರಿಂದ 35 ವರ್ಷಗಳವರೆಗೆ ಪಟ್ಟಣದ ಜನತೆಗೆ ನೀರಿನ ತೊಂದರೆ ಇರುವುದಿಲ್ಲ. ಇದು ಪುರಸಭೆಯ ಆದಾಯ ಹೆಚ್ಚಿಸುವುದರ ಜೊತೆಗೆ ನೀರು ಪೋಲಾಗುವುದನ್ನು ತಡೆಯುತ್ತದೆ. ಕಾಮಗಾರಿಯ ಗುಣಮಟ್ಟವನ್ನು ಕಾಯ್ದುಕೊಳ್ಳಲು ಇದನ್ನು ಹೈದರಾಬಾದಿನ ಪ್ರಸಿದ್ಧ ಸಿವೆಟ್ ಕಂಪನಿಗೆ ಗುತ್ತಿಗೆ ನೀಡಲಾಗಿದೆ, ಈ ಕಾಮಗಾರಿ ನಡೆಯುವಾಗ ಒಳಚರಂಡಿ, ನೀರಿನ ಮೂಲ ಪೈಪ್ ಲೈನ್ ಹಾಗೂ ರಸ್ತೆಗಳಿಗೆ ಧಕ್ಕೆಯಾಗದಂತೆ ನೋಡಿಕೊಡಲಾಗುವುದು ಒಂದು ಪಕ್ಷ ರಸ್ತೆಗಳು ಹಾಳಾದಲ್ಲಿ ಮತ್ತೆ ನಿರ್ಮಾಣ ಮಾಡಿಕೊಡಲು ಇದಕ್ಕೆ ಅನುದಾನ ಇರುವುದು ಯೋಜನೆಯ ಯಶಸ್ವಿಗೆ ಪುರಸಭೆ ಎಲ್ಲ ಸದಸ್ಯರು ಅಧಿಕಾರಿಗಳು ಹಾಗೂ ವಿಶೇಷವಾಗಿ ಸಾರ್ವಜನಿಕರು ಸಹಕರಿಸಬೇಕಾಗಿದೆ ಎಂದರು. ಮಾರ್ಚ್ 1 ರಂದು ನಡೆಯಲಿರುವ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಸಚಿವರಾದ ಭೈರತಿ ಸುರೇಶ, ಸಚಿವ ಶಿವಾನಂದ ಎಸ್ ಪಾಟೀಲ, ಸಂಸದ ರಮೇಶ ಜಿಗಜಿಣಗಿ, ವಾಟರ್ ಬೋರ್ಡ್ ಮಂಡಳಿ ಅಧ್ಯಕ್ಷರಾದ ವಿನಯ್ ಕುಲಕರ್ಣಿ, ಸಂಸದೆ ಸುಧಾ ಮೂರ್ತಿ, ಪರಿಷತ್ ಸದಸ್ಯರಾದ ಹನುಮಂತ ನಿರಾಣಿ, ಸುನಿಲಗೌಡ ಪಾಟೀಲ, ಪಿ.ಎಚ್. ಪೂಜಾರ, ರವಿಕುಮಾರ ಎನ್, ಕೇಶವ ಪ್ರಸಾದ ಎಸ್, ಪುರಸಭೆ ಅಧ್ಯಕ್ಷೆ ಜುಬೇದಾ ಹುಸೇನ್ ಭಾಷಾ ಜಮಾದಾರ, ಉಪಾಧ್ಯಕ್ಷೆ ಗೌರಮ್ಮ ಕುಂಬಾರ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಉಜ್ವಲ್ ಕುಮಾರ ಘೋಷ್, ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ, ಶ್ರೀಮತಿ ದೀಪಾ ಚೋಳನ್, ಒಳಚರಂಡಿ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಡಾ.ಸೆಲ್ವಮಣಿ ಆರ್, ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿಪಂ ಸಿಇಓ ರಿಷಿ ಆನಂದ, ಎಸ್.ಪಿ. ಲಕ್ಷ್ಮಣ್ ನಿಂಬರಗಿ, ಮುಖ್ಯ ಅಭಿಯಂತರ ವಿ.ಎಲ್.ಚಂದ್ರಪ್ಪ, ಕಾರ್ಯಪಾಲಕ ಅಭಿಯಂತರ ಗೋವಿಂದ ಎಸ್. ಮುಖ್ಯಾಧಿಕಾರಿ ಮೋಹನ ಜಾಧವ ಇರುವರು ಎಂದು ಅವರು ತಿಳಿಸಿದರು. ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷೆ ಜುಬೇದಾ ಹುಸೇನ್ ಭಾಷಾ ಜಮಾದಾರ, ಉಪಾಧ್ಯಕ್ಷೆ ಗೌರಮ್ಮ ಕುಂಬಾರ, ಮುಖ್ಯಾಧಿಕಾರಿ ಮೋಹನ ಜಾಧವ, ಸದಸ್ಯರಾದ ಅಕ್ಕಮಹಾದೇವಿ ಕಟ್ಟಿಮನಿ, ಪರಶುರಾಮ ತಂಗಡಗಿ, ಯಾಶೀನ ಮಮದಾಪೂರ, ಮುತ್ತಪ್ಪ ಚಮಲಾಪೂರ, ಅಣ್ಣಪ್ಪ ಜಗತಾಪ, ಡಿ.ವಿ.ಪಾಟೀಲ, ಮುಸ್ತಫಾ ಚೌಧರಿ, ನಿಂಗಣ್ಣ ಕುಂಟೋಜಿ, ಪ್ರತಿನಿಧಿಗಳಾದ ಹುಸೇನ್ ಜಮಾದಾರ, ಕಾಶಿನಾಥ್ ಕುಂಬಾರ, ಮಂಜೂರ ಬೇಪಾರಿ, ಮೆಹಬೂಬ ಲಾಹೋರಿ, ಸದ್ದಾಂ ಮನಗೂಳಿ, ಗುತ್ತಿಗೆದಾರ ರವಿ ಪಾಟೀಲ, ಸುನೀಲ, ಅಭಿಯಂತರ ಪ್ರಶಾಂತ ಲಕಶಟ್ಟಿ, ಪಿಡಿಎಂಸಿ ಮುತ್ತು ಶಿವಸಿಂಪಿಗೇರ, ಪಾಟೀಲ ಹಾಗೂ ಪುರಸಭೆ ಸಿಬ್ಬಂದಿಗಳು ಇದ್ದರು.

## ಕಲಿಕಾ ಹಬ್ಬ ಮಕ್ಕಳ ಸಮಗ್ರ ಅಭಿವೃದ್ಧಿಗೆ ಸಹಕಾರಿ – ಮಕ್ತುಂ ಸಾಬ್



ಮಲ್ಲಮ್ಮ ನುಡಿ ವಾರ್ತೆ

ಲಿಂಗಸಗೂರು. ಫೆ. 27.– ಮಕ್ಕಳಲ್ಲಿ ಕಲಿಕೆ ಎನ್ನುವುದು ಹರಿಯುತ್ತಿರುವ ಜಲವಿದ್ದಂತೆ ಕಲಿಕೆಗೆ ಕೊನೆಯೇ ಇಲ್ಲಾ. ಕಲಿಕೆ ಎನ್ನುವದು ಮಕ್ಕಳ ಸಮಗ್ರ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಈಚನಾಳ ವಲಯದ ಸಿಆರ್‌ಪಿ ಮಕ್ತುಂ ಸಾಬ್ ತಾಳಿಕೋಟಿ ಹೇಳಿದರು.

ಅವರು ತಾಲೂಕಿನ ಈಚನಾಳ ಗ್ರಾಮದ ಉನ್ನತೀಕರಿಸಿದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ವಲಯ ಮಟ್ಟದ ಎಫ್ ಎಲ್ ಎಮ್ ಕಲಿಕಾ ಹಬ್ಬ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ ಮಕ್ಕಳ ಕಲಿಕೆಯ ಭಾಗವಾಗಿ ಈ ಒಂದು ಕಾರ್ಯಕ್ರಮವನ್ನು ಸರಕಾರವು ಆಯೋಜಿಸಿದ್ದು ಈಚನಾಳ ವಲಯದ ಎಲ್ಲಾ ಶಾಲೆಯ ಒಂದರಿಂದ ಐದನೇ ತರಗತಿಯವರೆಗೆ ಓದುತ್ತಿರುವ ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿವಿಧ ರೀತಿಯ ಕಲಿಕಾ ಚಟುವಟಿಕೆಯಲ್ಲಿ ಭಾಗವಹಿಸಿದ್ದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ಗಂಗಮ್ಮ ಉಮೇಶ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷರಾದ ಶರಣಪ್ಪ ಕುಂಬಾರ್ ವಹಿಸಿದ್ದರು. ಈ ಕಲಿಕಾ ಹಬ್ಬದ ಕಾರ್ಯಕ್ರಮದಲ್ಲಿ ಸರಸ್ವತಿ ಭಾವಚಿತ್ರವನ್ನು ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ಹಲವಾರು ವಿದ್ಯಾರ್ಥಿಗಳು ವಿವಿಧ ವೇಷಭೂಷಣಗಳನ್ನು ತೊಟ್ಟು ಮೆರವಣಿಗೆಯಲ್ಲಿ ಪಾಲ್ಗೊಂಡು ಗಮನ ಸೆಳೆದರು.

ಕಲಿಕಾ ಹಬ್ಬ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಕ್ಕಳಿಗೆ ಪ್ರಥಮ ದ್ವಿತೀಯ ಹಾಗೂ ತೃತೀಯ ಬಹುಮಾನಗಳನ್ನು ಹಾಗೂ ಪ್ರಶಸ್ತಿ ಪತ್ರಗಳನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯಗುರುಗಳಾದ ಕುಮಾರಸ್ವಾಮಿ, ದೈಹಿಕ ಶಿಕ್ಷಕರಾದ ನಾರಾಯಣಪ್ಪ, ಶಿಕ್ಷಕ ಸಿದ್ದಪ್ಪ, ಶಿಕ್ಷಕಿಯರಾದ ಶ್ರೀಮತಿ ಅಶ್ವಿನಿ, ರೇಣುಕಾ, ರಾಧಾ, ವಾಣಿ, ಪುಷ್ಪಲತಾ, ಅಯ್ಯಮ್ಮ, ವಿಜಯಲಕ್ಷ್ಮಿ ಸೇರಿದಂತೆ ಕ್ಲಸ್ಟರ್ ಮಟ್ಟದ ಶಿಕ್ಷಕರು ಹಾಗೂ ಶಾಲಾ ಮೇಲುಸ್ತುವಾರಿ ಸಮಿತಿಯ ಸದಸ್ಯರು ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ನಿವೃತ್ತಿ ಹೊಂದಿದ ಶಿಕ್ಷಕರಿಗೆ ಹಾಗೂ ವರ್ಗಾವಣೆಗೊಂಡ ಶಿಕ್ಷಕರನ್ನು ಮತ್ತು ಬಿಸಿಯೂಟದ ಅಡುಗೆಯವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಿದ್ದಲಿಂಗೇಶ್ವರ ಬೆಟ್ಟದಲ್ಲಿ ಮಹಾಶಿವರಾತ್ರಿಯ 109ನೇಯ ಮಹೋತ್ಸವ

## ಶಿವರಾತ್ರಿ ಪವಿತ್ರ ದಿನ ಶಿವ ಧ್ಯಾನದಿಂದ ಕಷ್ಟ ಕಾರ್ಪಣ್ಯಗಳು ದೂರ: ಶ್ರೀ ರುದ್ರಪಶುಪತೇಶ್ವರ ಮಹಾಸ್ವಾಮಿಗಳು



ಮಲ್ಲಮ್ಮ ನುಡಿ ವಾರ್ತೆ

ಶಹಾಪೂರ : ಶಿವನನ್ನು ಹಾರೈದಿಸುವ ಶಿವರಾತ್ರಿಯು ಅತ್ಯಂತ ಮಂಗಳಕರವಾದದ್ದು ಎಂದು ಪರಮಪೂಜ್ಯ ಶ್ರೀ ರುದ್ರ ಪಶುಪತಿಶ್ವರ ಮಹಾಸ್ವಾಮಿಗಳು ನುಡಿದರು. ಶಿವರಾತ್ರಿ ಅಮಾವಾಸ್ಯೆ ನಿಮಿತ್ಯ ನಾಡಿನಾದ್ಯಂತ ಸು–ಕ್ಷೇತ್ರ ಬೆಟ್ಟದ ಸಿದ್ದಲಿಂಗೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ 109ನೇ ಶಿವಾನುಭವ ಗೋಷ್ಠಿಯ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು ಶಿವರಾತ್ರಿಯು ಹಿಂದುಗಳಿಗೆ ಪವಿತ್ರ ಮಾಸವಾಗಿದ್ದು ದೇಶಾದ್ಯಂತ ಶಿವನಿಗೆ ವಿಶೇಷವಾಗಿ ಸಕಲ ಪೂಜಾ ಕಾರ್ಯಕ್ರಮಗಳು ನಡೆಯಲಿವೆ ಈ ಮಾಘ ಮಾಸದ ಕೃಷ್ಣ ಪಕ್ಷ ಚತುರ್ದಶಿ ರಾತ್ರಿಯಲ್ಲಿ ಶಿವ ಗಿರಿಜೆಯರ ಕಲ್ಯಾಣ ನಡೆಯುವುದರಿಂದ ಅದನ್ನು ಹೀಗೆ ಶಿವರಾತ್ರಿ ಎಂದು ಪರಿಗಣಿಸಲಾಗುತ್ತದೆ ಪ್ರತಿಯೊಬ್ಬರು ಶಿವನಾಮವನ್ನು ನುಡಿಯುವುದರಿಂದ ಸಕಲ ಕಷ್ಟ ಕಾರ್ಪಣ್ಯಗಳು ನಿವಾರಣೆಯಾಗಿ ಆರೋಗ್ಯ ವೃದ್ಧಿ ಜೊತೆಗೆ ಸಕಲ ಸೌಭಾಗ್ಯಗಳು ದೊರೆಯುತ್ತವೆ ಕೈಲಾಸವಾಸಿ ಶಿವನಿಗೆ ಶಿವರಾತ್ರಿಯು ಅತ್ಯಂತ ಪವಿತ್ರವಾದದ್ದು ದಿನನಿತ್ಯ ಸ್ವಲ್ಪ ಸಮಯವಾದರು ಶಿವ ದಾನ ಮಾಡುವಂತೆ ಹೇಳಿದರು. ಶಿವ ಸಪ್ತ ಕಾರ್ಯಕ್ರಮ .

ಭಜನೆ ಜಾಗರಣೆ ಮಾಡುವುದರ ಮುಖಾಂತರ ಸಕಲ ಸದ್ಭಕ್ತ ಪಾತ್ರರಾದರು.

ಈ ಸಂದರ್ಭದಲ್ಲಿ ಗಂಗಾಧರಯ್ಯ ಸ್ವಾಮಿಗಳು. ಚನ್ನಬಸವ ಸ್ವಾಮಿಗಳು. ಚಂದ್ರಶೇಖರ್. ಅಯ್ಯಾಳ ಸಿದ್ದಯ್ಯ ಶಿವಾಚಾರ್ಯರು. ವೈದ್ಯನಾಥ ಶಾಸ್ತ್ರಿಗಳು. ಮೃತ್ಯುಂಜಯ ಸ್ವಾಮಿಗಳು. ಹಾಗೂ ಅಪಾರ ತದ್ಭಕ್ತರು ಉಪಸ್ಥಿತರಿದ್ದರು.

## ಶ್ರೀ ರೇಣುಕಾಚಾರ್ಯರ ಜಯಂತಿಯ ಪೂರ್ವಭಾವಿ ಸಭೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜಿಲ್ಲಾ ಕೇಂದ್ರದಲ್ಲಿ ಮಾರ್ಚ್ 12 ರಂದು ಶ್ರೀ ರೇಣುಕಾಚಾರ್ಯ ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆಯನ್ನು ಫೆಬ್ರವರಿ 28 ರಂದು ಬೆಳಿಗ್ಗೆ 10.30 ಗಂ–ಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಭೆಯ ಅಧ್ಯಕ್ಷತೆಯನ್ನು ಅಪರ ಜಿಲ್ಲಾಧಿಕಾರಿ ಸಿದ್ದರಾಮೇಶ್ವರ ಅವರು ವಹಿಸಿಕೊಳ್ಳಲಿದ್ದು, ಸಭೆಗೆ ಸಂಬಂಧಿಸಿದ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಗೆ ತಪ್ಪದೇ ಹಾಜರಾಗಬೇಕು ಹಾಗೂ ಸಮಾಜದ ಮುಖಂಡರು ಈ ಸಭೆಯಲ್ಲಿ ಆಗಮಿಸಿ ಅಗತ್ಯ ಸಲಹೆಗಳನ್ನು ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಳ್ಳಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಾಹೀರಾತಿಗಾಗಿ
ಇಂದೇ
ಸಂಪರ್ಕಿಸಿ:9448604450

## ರೇಣುಕಾಚಾರ್ಯ ಜಯಂತಿ: ಫೆ.28 ರಂದು ಪೂರ್ವಭಾವಿ ಸಭೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜಿಲ್ಲಾ ಕೇಂದ್ರದಲ್ಲಿ ಮಾರ್ಚ್ 12 ರಂದು ಶ್ರೀ ರೇಣುಕಾಚಾರ್ಯ ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆಯನ್ನು ಫೆಬ್ರವರಿ 28 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಭೆಯ ಅಧ್ಯಕ್ಷತೆಯನ್ನು ಅಪರ ಜಿಲ್ಲಾಧಿಕಾರಿ ಸಿದ್ದರಾಮೇಶ್ವರ ಅವರು ವಹಿಸಿಕೊಳ್ಳಲಿದ್ದು, ಸಭೆಗೆ ಸಂಬಂಧಿಸಿದ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಗೆ ತಪ್ಪದೇ ಹಾಜರಾಗಬೇಕು ಹಾಗೂ ಸಮಾಜದ ಮುಖಂಡರು ಈ ಸಭೆಯಲ್ಲಿ ಆಗಮಿಸಿ ಅಗತ್ಯ ಸಲಹೆಗಳನ್ನು ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಳ್ಳಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಸ್ತು ಪ್ರದರ್ಶನ ಇಂದಿನಿಂದ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 27 : ಇಲ್ಲಿಯ ಪ್ರತಾಪನಗರದ ಜನಸೇವಾ ಶಿಶು ಮಂದಿರ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಪ್ರೊ. ಬಿ.ಜಿ. ಮೂಲಿಮನಿ ಫೌಂಡೇಷನ್ ಸಹಯೋಗದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ನಿಮಿತ್ತ ಫೆ. 28 ಮತ್ತು ಮಾರ್ಚ್ 1 ರಂದು ವಿಜ್ಞಾನ ವಸ್ತು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಫೆ. 28 ರಂದು ಮಧ್ಯಾಹ್ನ 1ಕ್ಕೆ ಶಾಲೆಯ ಜನಸೇವಾ ಮಂಟಪದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ವಿಜ್ಞಾನ ಸಂಪನ್ಮೂಲ ವ್ಯಕ್ತಿ ಗುಂಡಪ್ಪ ಹುಡಗೆ ಪ್ರದರ್ಶನಕ್ಕೆ ಚಾಲನೆ ನೀಡುವರು. ಪ್ರೊ. ಬಿ.ಜಿ. ಮೂಲಿಮನಿ ಫೌಂಡೇಷನ್ ಅಧ್ಯಕ್ಷ ಶಿವಲಿಂಗಪ್ಪ ಜಲಾದೆ ಹಾಗೂ ವಿದ್ಯಾಭಾರತಿ ಬೀದರ್ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಬಿ. ಸಜ್ಜನಶೆಟ್ಟಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಜನಸೇವಾ ಪ್ರತಿಷ್ಠಾನದ ಅಧ್ಯಕ್ಷ ಬಸವರಾಜ ಸ್ವಾಮಿ ಅಧ್ಯಕ್ಷತೆ ವಹಿಸುವರು.

ಮಾ. 1 ರಂದು ಮಧ್ಯಾಹ್ನ 3ಕ್ಕೆ ಸಮಾರೋಪ ಸಮಾರಂಭ ಜರುಗಲಿದೆ. ವಿಜ್ಞಾನ ಸಂಪನ್ಮೂಲ ವ್ಯಕ್ತಿಗಳಾದ ಮಹಮ್ಮದ್ ರಫಿ ಹಾಗೂ ದೇವಿಪ್ರಸಾದ್ ಕಲಾಲ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಜನಸೇವಾ ಪ್ರತಿಷ್ಠಾನದ ಕಾರ್ಯದರ್ಶಿ ರೇವಣಸಿದ್ದಪ್ಪ ಜಲಾದೆ ತಿಳಿಸಿದ್ದಾರೆ.

## ವಿಚಾರ ಸಂಕಿರಣ ಇಂದು

ಮಲ್ಲಮ್ಮ ನುಡಿ ವಾರ್ತೆ

ಬೀದರ.ಫೆ.27:ರೆವರೆಂಡ್ ಡಾ.ಜೆ.ಟಿ.ಸಿಮಂಡ್ಸ್ ಕನ್ನಡ ಸಾಹಿತ್ಯ ಸಂಘದ ವತಿಯಿಂದ ನಗರದ ಮಂಗಲಪೇಟನ ಚರ್ಚನಲ್ಲಿ ಫೆ. 28 ರಂದು ಸಂಜೆ 5.30ಕ್ಕೆ ಜೆ.ಎಫ್. ಫ್ಲೀಟ್ ಅವರ ಕನ್ನಡ ಸಾಹಿತ್ಯ ಕುರಿತು ವಿಚಾರ ಸಂಕಿರಣ ಆಯೋಜಿಸಲಾಗಿದೆ.

ಸೇಂಟ್ ಪೌಲ್ ಮೆಥೋಡಿಸ್ಟ್ ಚರ್ಚ್ ಜಿಲ್ಲಾ ಮೇಲ್ವಿಚಾರಕ ನೆಲ್ಸನ್ ಸುಮಿತ್ರಾ ಸಾನಿಧ್ಯ ವಹಿಸುವರು. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಸುರೇಶ ಚನಶೆಟ್ಟಿ ಉದ್ಘಾಟಿಸುವರು. ನೌಬಾದನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹ ಪ್ರಾಧ್ಯಾಪಕ ಡಾ. ರಾಜಕುಮಾರ ಅಲ್ಲೂರೆ ವಿಶೇಷ ಉಪನ್ಯಾಸ ನೀಡುವರು. ರೆ. ಡಾ. ಜೆ.ಟಿ. ಸೀಮಂಡ್ಸ್ ಕನ್ನಡ ಸಾಹಿತ್ಯ ಸಂಘದ ಅಧ್ಯಕ್ಷ ಬಿ.ಕೆ. ಸುಂದರರಾಜ್ ಅಧ್ಯಕ್ಷತೆ ವಹಿಸುವರು.

ಸಹ ಪ್ರಾಧ್ಯಾಪಕರಾದ ಡಾ. ಮನೋಹರ ಮೇತ್ರೆ, ಡಾ. ಜೈಭಾರತ ಮಂಗೇಶ್ಕರ್, ಡಾ. ಜೈಶೀಲಾ, ಡಾ. ಸಂಜೀವಕುಮಾರ ಕೋಹಿನೂರ, ಸಹಾಯಕ ಪ್ರಾಧ್ಯಾಪಕಿ ಪ್ರೊ. ಮಮತಾ ಅವರನ್ನು ಸನ್ಮಾನಿಸಲಾಗುವುದು. ಸಂಘದ ಕಾರ್ಯದರ್ಶಿ ಡಾ. ಧನರಾಜ ತುಡಮೆ ಪ್ರಾಸ್ತಾವಿಕವಾಗಿ ಮಾತನಾಡುವರು ಎಂದು ಪ್ರಕಟಣೆ ತಿಳಿಸಿದೆ.







# ದೇವರಲ್ಲಿ ಶ್ರದ್ಧಾ ಭಕ್ತಿ ಇರಲಿ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 27 : ಸನಾತನ ಧರ್ಮದ ಪ್ರತಿಯೊಂದು ಹಬ್ಬಕ್ಕೆ ತನ್ನದೇ ಆದ ವಿಶೇಷ ಮಹತ್ವವಿದೆ. ಪ್ರತಿಯೊಂದು ಹಬ್ಬವೂ ಧಾರ್ಮಿಕ, ಸಾಂಸ್ಕೃತಿಕ ಹಾಗೂ ವೈಜ್ಞಾನಿಕ ಅರ್ಥವನ್ನು ಹೊಂದಿರುತ್ತದೆ ಎಂದು ನಗರೇಶ್ವರ ಮಂದಿರದ ಹಿರಿಯ ಅರ್ಚಕರಾದ ಗೋವಿಂದ್ ಮಹಾರಾಜ ರವರು ನುಡಿದರು. ಅವರು ಇಂದು ಬೀದರ ನಗರದ ನಗರೇಶ್ವರ ಮಂದಿರದ ಆಡಳಿತ ಮಂಡಳಿ ಹಾಗೂ ನರೇಂದ್ರ ಮೋದಿ ಅಭಿಮಾನಿ ಬಳಗದ ವತಿಯಿಂದ ಆಯೋಜಿಸಲಾದ ಮಹಾಶಿವರಾತ್ರಿ ಹಬ್ಬದಲ್ಲಿ ಪಾಲ್ಗೊಂಡ ಭಕ್ತಾದಿಗಳಿಗೆ ಆಶೀರ್ವಚನ ನೀಡಿದರು. ಮುಂದುವರೆದು ಮಾತನಾಡುತ್ತಾ, ದೇವರಲ್ಲಿ ಶ್ರದ್ಧಾ, ಭಕ್ತಿಯನ್ನು ಹೊಂದಿರಬೇಕು, ದೇವನೊಬ್ಬ ನಾಮ ಹಲವು ಎಲ್ಲರಲ್ಲೂ ಪರಮಾತ್ಮನು ಒಬ್ಬನೇ



ಆಗಿರುವುದರಿಂದ ಅನಗತ್ಯವಾದ -ವಿವಾದಗಳಿಗೆ ಆಸ್ಪದವನ್ನು ಕೊಡಬಾರ ದು ಎಂದು ತಿಳಿಸಿದರು. ಪ್ರಗತಿ ಆರೋಗ್ಯ ಮತ್ತು ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಅರವಿಂದ ಕುಲಕರ್ಣಿ ಮಾತನಾಡಿ, ಮಹಾಶಿವರಾತ್ರಿಯು ಅಂಧಕಾರವನ್ನು ಮತ್ತು ಅಜ್ಞಾನವನ್ನು ಹೊಡೆದೋಡಿಸಿ, ಸುಜ್ಞಾನದೊಂದಿಗೆ ಬದುಕಲು ಸನ್ಮಾರ್ಗವನ್ನು ತೋರಿಸಿಕೊಡುವ ಪ್ರತೀಕದ ಹಬ್ಬವಾಗಿದೆ. ಶಿವನು ಅಗ್ನಿ ಕಂಬದಲ್ಲಿ ಪ್ರವೇಶಿಸಿದ ಸಂದರ್ಭ ಹಾಗೂ ಸಮುದ್ರ ಮಥನವಾದ ಸಂದರ್ಭದಲ್ಲಿ ಲೋಕಕಲ್ಯಾಣಕ್ಕಾಗಿ ಶಿವನು ತನ್ನ ಗಂಟಲಿನಲ್ಲಿ ವಿಷವನ್ನೂ ಶೇಖರಣೆ ಮಾಡಿಕೊಂಡಾಗ ಪಾರ್ವತಿದೇವಿಯು ಪರಮೇಶ್ವರನ ಧ್ಯಾನದಲ್ಲಿ ರಾತ್ರಿ ಇಡಿ ಜಾಗರಣೆ ಮಾಡಿರುವುದನ್ನು ಭಕ್ತಾದಿಗಳಿಗೆ ಮನಮುಟ್ಟುವಂತೆ ತಿಳಿಸಿದರು. ಆರ್ಯವೈಶ್ಯ ಸಂಘದ ಡಿ.ವಿ. ಸಿಂದೋಲ ರವರು ಮಾತನಾಡಿ, ಉಜ್ಜೇನಿಯ ಮಹಾ ಕಾಳೇಶ್ವರ ಮಂದಿರದಲ್ಲಿ ನಡೆಯುವ ಭಸ್ಮ ಆರತಿಯನ್ನು ಬೀದರಿನಲ್ಲಿ ವಿನೂತನವಾಗಿ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ನಡೆಸಿರುವುದು ಈ ವರ್ಷದ ಮಹಾಶಿವರಾತ್ರಿಯ ವಿಶೇಷತೆಯಾಗಿದೆ ಎಂದು ತಿಳಿಸಿದರು. ನರೇಂದ್ರ ಮೋದಿ ಅಭಿಮಾನಿ ಬಳಗದ ಗುಂಡು ಶಾಸ್ತ್ರಿ ಮಾತನಾಡಿ, ನಗರೇಶ್ವರ ಮಂದಿರದಲ್ಲಿ ಅಭಿಷೇಕ ಹೋಮ -ಹವನ, ಮಹಾ ಮೃತ್ಯುಂಜಯ ಮಂತ್ರ ಮತ್ತು ಮಹಿಳಾ ಭಕ್ತ ಮಂಡಳಿಯಿಂದ ಪಠಣೆ ಮಾಡಿ, ಸಾಯಂಕಾಲ 51 ಲೀಟರ್ ಹಾಲಿನ ವಿಶೇಷ ಅಭಿಷೇಕವನ್ನು ಶಿವನಿಗೆ ಸಮರ್ಪಿಸಲಾಯಿತು ಎಂದು ತಿಳಿಸಿದರು. ಪ್ರವೀಣ್ ಮಹಾರಾಜ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು, ಕಾರ್ಯಕ್ರಮದಲ್ಲಿ ದಿಲೀಪ್ ಕುಮಾರ್ ಗಾದಾ, ವಿಶಾಲ ಜೋಶಿ, ವೈಭವ ಜೋಶಿ, ವಲ್ಲಭ ಜೋಶಿ, ಅಜಯ ನಾಗವಂಶಿ, ಪ್ರದೀಪ ಪೋಲಾ, ಆರ್ಯ ವೈಶ್ಯ ಸಂಘದ ಖಜಾಂಚಿ, ಎಲ್ಲಾ ನಿರ್ದೇಶಕರು ಕಾರ್ಯಕ್ರಮದ ಮುಖಂಡತ್ವವನ್ನು ವಹಿಸಿದರು. ಅಸಂಖ್ಯಾತ ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## 4.76 ಲಕ್ಷದ ನಕಲಿ ಪಾನ್ ಮಸಾಲ ಜಪ್ತಿ: 6 ಜನರ ವಿರುದ್ಧ ಪ್ರಕರಣ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 26 : ನ್ಯೂ ಟೌನ್ ಪೊಲೀಸರು ಕಾರ್ಯಾಚರಣೆ ನಡೆಸಿ, ನಗರ ಹೊರವಲಯದ ಚಿಕ್ಕಪೇಟೆ ಕ್ರಾಸ್ ಬಳಿ ?4.76 ಲಕ್ಷ ಮೌಲ್ಯದ ನಕಲಿ ಪಾನ್ ಮಸಾಲ, ಜರ್ದಾ ಜಪ್ತಿ ಮಾಡಿ, ಆರು ಜನರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. 130 ಪ್ಯಾಕೆಟ್‌ಗಳಲ್ಲಿ ಪಾನ್ ಮಸಾಲ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ವಶಕ್ಕೆ ಪಡೆಯಲಾಗಿದ್ದು, ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಟೆಂಪೋ ಸ್ಟಾಂಗ್ ವಾಹನ ಜಪ್ತಿ ಮಾಡಲಾಗಿದೆ. ನ್ಯೂ ಟೌನ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ವಿಜಯಕುಮಾರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸಿಬ್ಬಂದಿ ಮೋಹನರಾಜ್, ದೀಪಕ್, ಸುನೀಲ್, ಸತೀಶ ಪಾಲ್ಗೊಂಡಿದ್ದರು.

## ಆಪತ್‌ನಲ್ಲಿದ್ದವರ ರಕ್ಷಣೆ ಮಾಡಿದರೆ ಆಪತ್ಬಾಂಧವ ನಮ್ಮ ಕೈ ಹಿಡಿತಾನೆ: ಡಾ.ಸಿದ್ದಾರಡ್ಡಿ



ಬೀದರ. ಫೆ. 27 : ನಾವು ಆಪತ್‌ದಲ್ಲಿದ್ದವರ ರಕ್ಷಣೆ ಮಾಡಿದರೆ ಆಪತ್ಭಾಂದವನಾದ ಆ ಪರಮಾತ್ಮ ನಮ್ಮ ಕೈ ಹಿಡಿಯುತ್ತಾನೆ ಎಂದು ಕರ್ನಾಟಕ ಕ್ರಿಯಾ ಯೋಜನೆ ಅಭಿವೃದ್ಧಿ ಸಮಿತಿಯ ಮಾಜಿ ಅಧ್ಯ- ಕ್ಷೆ ಡಾ.ಗುರಮ್ಮ ಸಿದ್ದಾರಡ್ಡಿ ತಿಳಿಸಿದರು.

ಗುರುವಾರ ನಗರದ ಹೃದಯಭಾಗದಲ್ಲಿರುವ ಕರ್ನಾಟಕ ಸಾಹಿತ್ಯ ಸಂಘದ ಸಾಂಸ್ಕೃತಿಕ ಸಭಾಂಗಣದಲ್ಲಿ ಸಂಜೀವಿನಿ ಜೀವರಕ್ಷಕ ಟ್ರಸ್ಟ್ ಜಿಲ್ಲಾ ಘಟಕ ಹಾಗೂ ಸುಭಾಷಚಂದ್ರ ಭೋಸ್ ಯುವಕ ಸಂಘಗಳ ಸಂಯುಕ್ತಾಶ್ರಯದಲ್ಲಿ ಆಪತ್ ರಕ್ಷಕರು ಹಾಗೂ ರಾಜ್ಯದ ಕಾರ್ಮಿಕ ಸಚಿವರಾದ ಸಂತೋಷ ಲಾಡ್ ಅವರ ಹುಟ್ಟು ಹಬ್ಬದ ಪ್ರಯುಕ್ತ ಆಪತ್ ರಕ್ಷಕ ದಿನಾಚರಣೆ ಹಾಗೂ ಸಂಜೀವಿನಿ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ನಾವು ಸದಾ ಪರೋಪಕಾರಿಯಾಗಿರಬೇಕು. ನಮ್ಮ ಕಾರ್ಯಕ್ಕೆ ಪರಮಾತ್ಮ ಪ್ರತಿಫಲ ಕೊಟ್ಟೆ ಕೊಡುತ್ತಾನೆ. ಸತ್ಕಾರ್ಯದಲ್ಲಿ ಸದಾ ಮಿಂದೆದ್ದರೆ ಸದ್ಬುದ್ದಿ ಪ್ರಾಪ್ತವಾಗುತ್ತದೆ. ನಿಸ್ವಾರ್ಥತೆ ಹಾಗೂ ನಿರ್ವಸನಿಯಾಗಿ ಸುಸಂಸ್ಕೃತ ಬದುಕು ಸಾಗಿಸಿ ಇಂಥ ಶ್ರೇಷ್ಠ ಕಾರ್ಯದಲ್ಲಿ ತಲ್ಲಿನರಾಗುವಂತೆ ಕರೆ ಕೊಟ್ಟರು.

ಆರೋಗ್ಯ ಕ್ಷೇತ್ರದಲ್ಲಿ ಶ್ರೇಷ್ಠ ಸಾಧನೆಗೈದು ಸನ್ಮಾನಕ್ಕೆ ಭಾಜನರಾದ ನಿವೃತ್ತ ಜಿಲ್ಲಾ ಶಾಸ್ತ್ರ ಚಿಕಿತ್ಸಕ ಡಾ.ಚಂದ್ರಕಾಂತ ಗುದಗೆ ಮಾತನಾಡಿ,

ಆಪತ್ ರಕ್ಷಕನಿಗೆ ಸಮಾಜದಲ್ಲಿ ದೊಡ್ಡ ಗೌರವ ಇರುತ್ತದೆ. ಆತನ ಆಪತ್‌ಕಾಲದಲ್ಲಿ ಬೇರೆಯವರು ಸಹಾಯ ಮಾಡುವುದಂತೂ ಪಕ್ಕಾ. ತನ್ನ ಸೇವೆಯಲ್ಲಿದ್ದಾಗ ಕೊನೆ ಘಳಿಗೆಯಲ್ಲಿದ್ದ ಎರಡು ಜೀವಗಳನ್ನು ಉಳಿಸುವ ಸೌಭಾಗ್ಯ ದೊರಕಿತು. ರಸ್ತೆಯಲ್ಲಿ ವೇಗವಾಗಿ ಬೈಕ್ ಓಡಿಸಿ ಅಪಘಾತಕ್ಕೀಡಾಗಿದ್ದ ಯುವಕ ಹಾಗೂ ಆಸ್ಪತ್ರೆಯಲ್ಲಿ ಹೆರಿಗೆ ಆದ ಸಂದರ್ಭದಲ್ಲಿ ಹೃದಯಘಾತಕ್ಕೆ ಒಳಗಾದವರಿಗೆ ಹೃದಯಸ್ತಂಭನ ಮಾಡಿ ಜೀವ ಉಳಿಸುವ ಅವಕಾಶ ಕೊಟ್ಟ ಆ ಕರುಣಾಕರನಿಗೆ ಧನ್ಯವಾದ ಸಮರ್ಪಿಸುವುದಾಗಿ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ನ್ಯಾಯವಾದಿ ನಾರಾಯಣ ಗಣೇಶ ಅವರು, ಕಾರ್ಮಿಕ ಸಚಿವ ಸಂತೋಷ ಲಾಡ್ ಅವರ ಜನ್ಮದಿನವಾದ ಇಂದು ಅವರ ಹುಟ್ಟು ಹಬ್ಬ ರಾಜ್ಯದ ಹಲವು ಜಿಲ್ಲೆಗಳ ಎಲ್ಲ ಹಳ್ಳಿಹಳ್ಳಿಗಳಲ್ಲಿ ಆಚರಿಸಲಾಗುತ್ತಿದೆ. ಕೋವಿಡ್ ಕಾಲದಲ್ಲಿ ಅವರು ಮಾಡಿದ ಕಾರ್ಯ ಇಂದು ಇಂಥ ಸಂಘಟನೆಗಳು ಗುರುತಿಸಿ ಅವರಿಗೆ ಸಂಜೀವಿನಿ ಜೀವರಕ್ಷಕ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಹೆಮ್ಮೆ ಹಾಗೂ ಅಭಿಮಾನದ ಸಂಕೇತ ಎಂದು ಬಣ್ಣಿಸಿದರು.

ನಗರ ಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷ ಪ್ರಶಾಂತ ದೊಡ್ಡಿ ಮಾತನಾಡಿ, ಸಂಜೀವಿನಿ ಆಪ್ತರಕ್ಷಕ ಟ್ರಸ್ಟನವರು ಗೋಡೆಗಳ ಮೇಲೆ ಅಪಘಾತವಾಗದಂತೆ ಎಚ್ಚರಿಕೆ ಬರಹಗಳನ್ನು ಬರೆಯುವುದು, ರಸ್ತೆಗಳ ಮಧ್ಯ ಬಿಳಿ ಲೈನ್‌ಗಳನ್ನು ಬರೆದು ಅಪಘಾತ ನಿಯಂತ್ರಿಸಲು ಉತ್ತಮ ಕಾರ್ಯ ಆಪತ್‌ದಲ್ಲಿದ್ದವರ ಪ್ರಾಣ ರಕ್ಷಣೆಗೆ ಮುಂದಾಗಿ ಸೈನಿಕರಂತೆ ಕಾರ್ಯ ಮಾಡುತ್ತಿರುವ ಸಂಘಟನೆಯ ಜಿಲ್ಲಾಧ್ಯಕ್ಷ ರತ್ನದೀಪ ಹಾಗೂ ಅವರ ಸದಸ್ಯರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಂಜೀವಿನಿ ಜೀವರಕ್ಷಕ ಟ್ರಸ್ಟ್ ಜಿಲ್ಲಾ ಅಧ್ಯಕ್ಷ ರತ್ನದೀಪ ಕಸ್ತುರೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಆಪತ್‌ಕಾಲದಲ್ಲಿ ಇದ್ದಾಗ ಯಾರು ಬಳಿಯಲ್ಲಿ ಸುಳಿಯುವುದಿಲ್ಲ. ಚೆನ್ನಾಗಿದ್ದಾಗ ಎಲ್ಲರು ಮಾತನಾಡಿಸುತ್ತಾರೆ. ನಿಜವಾದ ಆಪತ್ ಸಮಯವೆಂದರೆ ಸಂಕಟದಲ್ಲಿದ್ದವರನ್ನು ಮೇಲೆತ್ತಿ ಅವರನ್ನು ಪ್ರೋತ್ಸಾಹಿಸುವ ಹಾಗೂ ಸತ್ಕರಿಸುವ ಕಾರ್ಯ ನಡೆಯಬೇಕೆಂಬ ಉದ್ದೇಶದಿಂದ ಜಿಲ್ಲೆಯ 15 ಜನ ಮಹನಿಯರನ್ನು ಗುರುತಿಸಿ ಅವರಿಗೆ ಸನ್ಮಾನಿಸುವ ಸೌಭಾಗ್ಯ ನಮಗೆ ಒದಗಿ ಬಂದಿದ್ದಕ್ಕೆ ಹೆಮ್ಮೆ ಪಡುತ್ತೇನೆ ಎಂದರು.

ಸಂಜೀವಿನಿ ಜೀವರಕ್ಷಕ ಟ್ರಸ್ಟ್ ಇನ್ನೋರ್ವ ಸಂಜೀವಿನಿ ರತ್ನ ಪ್ರಶಸ್ತಿ ಪುರಸ್ಕೃತ ಕಾಶಿನಾಥ ಬಗದಲ್ ಮಾತನಾಡಿದರು. ಕೆ.ಪಿ.ಸಿ.ಸಿ ಕಾರ್ಮಿಕ ವಿಭಾಗದ ಕಾರ್ಯದರ್ಶಿ ಜಾನಸನ್ ಘೋಡೆ ವೇದಿಕೆಯಲ್ಲಿದ್ದರು.

ಈ ಸಂದರ್ಭದಲ್ಲಿ ಸಂಗೀತ ಕ್ಷೇತ್ರದಲ್ಲಿ ನರಸಿಂಹಲು ಡಪ್ಪೂರ. ಆರೋಗ್ಯ ಕ್ಷೇತ್ರದಲ್ಲಿ ಡಾ.ಚಂದ್ರಕಾಂತ ಗುದಗೆ, ಪತ್ರಿಕಾ ರಂಗದಲ್ಲಿ ಶಿವಕುಮಾರ ಸ್ವಾಮಿ, ವೈದ್ಯಕೀಯ ಶಿಕ್ಷಣದಲ್ಲಿ ಪ್ರಕಾಶ ಮಹಿಮಾಕರ್, ಕೃಷಿ ಕ್ಷೇತ್ರದಲ್ಲಿ ವೈಜಿನಥ ನಿಡೋದಾಕರ್, ಹೋರಾಟಗಾರ ಗುರುದಾಸ ಅಮದಲಪಡ, ಕ್ರೀಡೆಯಲ್ಲಿ ಮುಬಾರಕ, ಬಗದಲ ಗ್ರಾ.ಪಂ ಸದಸ್ಯ ಕಾಶಿನಾಥ ಬಗದಲ, ನೃತ್ಯ ಶಿಕ್ಷಕ ಶಿವಕುಮಾರ ಅಣದುರೆ, ಶುಶ್ರೂಷಾಧಿಕಾರಿ ಅಮರ ಭಾಂಗೆ ಅವರಿಗೆ ಸಂಜೀವಿನಿ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಅಪ್ಪು ಡ್ಯಾನ್ಸ್ ಅಕಾಡೆಮಿಯ ಕು.ನಿಕೀತಾ ಹಾಗೂ ಸಂಗಡಿಗರು ಪ್ರಾರ್ಥನೆ ನೃತ್ಯಗೈದರು. ಸುನಿಲ ಮಿತ್ರಾ ಸ್ವಾಗತಿಸಿದರು. ಚಂದ್ರಕಾಂತ ನಾರಾಯಣಪುರೆ ಕಾರ್ಯಕ್ರಮ ನಿರೂಪಿಸಿದರು. ಪ್ರಶಾಂತ ಶಿಂಧೆ ವಂದಿಸಿದರು.

## ವೈದ್ಯಶ್ರೀ ಪ್ರಶಸ್ತಿ: ಸಂಗಾರೆಡ್ಡಿಗೆ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 27 : ವೈದ್ಯಶ್ರೀ ಪ್ರಶಸ್ತಿಗೆ ಭಾಜನರಾದ ಬೀದರ್ ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಸಂಗಾರೆಡ್ಡಿ ಅವರನ್ನು ಜಿಲ್ಲಾ ರೆಡ್ಡಿ ಸಮಾಜದ ವತಿಯಿಂದ ನಗರದ ಅಮಲಾಪುರ ರಸ್ತೆಯಲ್ಲಿ ಇರುವ ಹೇಮರೆಡ್ಡಿ ಮಲ್ಲಮ್ಮ ಮಂದಿರದಲ್ಲಿ ಬುಧವಾರ ಸನ್ಮಾನಿಸಲಾಯಿತು. ಜಿಲ್ಲಾ ಸಮಾಜದ ಅಧ್ಯಕ್ಷ ಶಂಕರ-ರೆಡ್ಡಿ ಚಿಟ್ಟಾ ಶಾಲು ಹೊದಿಸಿ ಸತ್ಕರಿಸಿದರು. ಸಮಾಜದ ಕಾರ್ಯದರ್ಶಿ ಗೋಪಾಲ್ ರೆಡ್ಡಿ ಮರ್ಜಾಪುರ, ಮುಖಂಡರಾದ ಸಂಜು ರೆಡ್ಡಿ ಜಂಪಾ, ಓಂರೆಡ್ಡಿ ತಿರುಮಲ, ರಾಜೇಂದ್ರ ರೆಡ್ಡಿ ಶೇರಿಕಾರ್, ಸಂಗ್ರಾಮ ರೆಡ್ಡಿ, ರವಿ ರೆಡ್ಡಿ ಮರೂರ, ಪೆಂಟಾರೆಡ್ಡಿ ಮೈಲೂರ, ರಾಜೇಂದ್ರ ರೆಡ್ಡಿ ಚಿದ್ರಿ, ಅಶೋಕ ರೆಡ್ಡಿ ಉಪ್ಪಿನ್ ಮತ್ತಿತರರು ಹಾಜರಿದ್ದರು.

## ಪತ್ರಕರ್ತ ಕಾಜಿ ಅಲಿಯೊದ್ದಿನ್‌ಗೆ ಪ್ರಶಸ್ತಿ ಪ್ರದಾನ



ಬೀದರ:ಫೆ.27: ಇಲ್ಲಿಯ ಹಿರಿಯ ಪತ್ರಕರ್ತ ಕಾಜಿ ಅಲಿಯೊದ್ದಿನ್(ಅಲಿಬಾಬಾ) ಅವರಿಗೆ ಬೆಂಗಳೂರಿನ ಕೆ.ಎಂ.ಡಿ.ಸಿ. ಸಭಾಂಗಣದಲ್ಲಿ ಗುರುವಾರ ನಡೆದ ಸಮಾರಂಭದಲ್ಲಿ ಕರ್ನಾಟಕ ಉರ್ದು ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮ್ಮದ್ ಪ್ರಶಸ್ತಿ ಪ್ರದಾನ ಮಾಡಿದರು. ಪತ್ರಿಕಾ ರಂಗಕ್ಕೆ ನೀಡಿದ ಕೊಡುಗೆಗಾಗಿ ಅವರಿಗೆ ಪ್ರಶಸ್ತಿ ಒಲಿದಿದೆ. ಕರ್ನಾಟಕ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ನಿಸಾರ್ ಅಹಮ್ಮದ್, ವಿಧಾನ ಪರಿಷತ್ ಸದಸ್ಯೆ ಬಿಲ್ಕೀಸ್ ಬಾನು, ಕರ್ನಾಟಕ ಉರ್ದು ಅಕಾಡೆಮಿಯ ಅಧ್ಯಕ್ಷ ಮೌಲಾನಾ ಮುಫ್ತಿ ಮಹಮ್ಮದ್ ಅಲಿ ಖಾಜಿ, ರಿಜಿಸ್ಟ್ರಾರ್ ಡಾ. ಮಾಜುದ್ದಿನ್ ಖಾನ್ ಮತ್ತಿತರರು ಇದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330. Editor: Ramesh Reddy, Office Ph. No: +91 9449732000.